**ಎನ್‌ಸಿಇಆರ್‌ಟಿ ರಚಿತ 11ನೇ ತರಗತಿಯ ವ್ಯವಹಾರ ಅಧ್ಯಯನ– ಕನ್ನಡ ಅನುವಾದಿತ (2017 ಮಾರ್ಚ್ ಮರುಮುದ್ರಣ) ಪಠ್ಯಪುಸ್ತಕದಲ್ಲಿ ಜನವರಿ 2018 ಮಾಘ 1936ರ ಮರುಮುದ್ರಣದ ಅನ್ವಯ ಆಗಿರುವ ಬದಲಾವಣೆಗಳ ಕನ್ನಡ ಅನುವಾದಿತ ಅನುಸೂಚಿ**

**ಎನ್‌ಸಿಇಆರ್‌ಟಿ ರಚಿತ 11ನೇ ತರಗತಿಯ ವ್ಯವಹಾರ ಅಧ್ಯಯನ – ಜನವರಿ 2018 ಮಾಘ 1936ರ ಮರುಮುದ್ರಣದಲ್ಲಿ ಆಗಿರುವ ಬದಲಾವಣೆಗಳ ಕನ್ನಡ ಅನುವಾದಿತ ಅನುಸೂಚಿ (ಪಪೂಶಿಇ, ಕರ್ನಾಟಕ ಸರ್ಕಾರ–ಇವರ ಆದೇಶಾನುಸಾರ)**

# ಅಧ್ಯಾಯ 1

# ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ

## 1. ಬದಲಾಗಿರುವುದು:

**ಎ) ಅಧ್ಯಾಯದ ಶೀರ್ಷಿಕೆ:**

**'ವ್ಯವಹಾರದ ಸ್ವರೂಪ ಮತ್ತು ಉದ್ದೇಶ'** ಎಂದಿದ್ದುದು **'ವ್ಯವಹಾರ, ವ್ಯಾಪಾರ ಮತ್ತು ವಾಣಿಜ್ಯ'** ಎಂದು ಬದಲಾಗಿದೆ.

**ಬಿ) ಕಲಿಕೆಯ ಉದ್ದೇಶಗಳು:**

1. ಐತಿಹಾಸಿಕ ಗತಕಾಲದಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಯನ್ನು ಶ್ಲಾಘಿಸುವಿರಿ.
2. ವ್ಯಾಪಾರ ಮತ್ತು ವಾಣಿಜ್ಯದಲ್ಲಿ ದೇಶೀಯ ಬ್ಯಾಂಕಿಂಗ್ ವ್ಯವಸ್ಥೆಯ ಪಾತ್ರವನ್ನು ಅರ್ಥಮಾಡಿಕೊಳ್ಳುವಿರಿ.
3. ವ್ಯವಹಾರದ ಪರಿಕಲ್ಪನೆ ಮತ್ತು ಉದ್ದೇಶಗಳನ್ನು ವಿವರಿಸುವಿರಿ.
4. ಕೈಗಾರಿಕೆಗಳ ಪ್ರಕಾರಗಳನ್ನು ಚರ್ಚಿಸುವಿರಿ.
5. ವಾಣಿಜ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ವಿವರಿಸುವಿರಿ.
6. ವ್ಯವಹಾರದ ಅಪಾಯಗಳ ಸ್ವರೂಪ ಮತ್ತು ಅವುಗಳ ಕಾರಣಗಳನ್ನು ವಿವರಿಸುವಿರಿ ಮತ್ತು
7. ವ್ಯವಹಾರವನ್ನು ಆರಂಭಿಸುವಾಗ ಪರಿಗಣಿಸಬೇಕಾದ ಮೂಲ ಅಂಶಗಳನ್ನು ಪರಿಗಣಿಸುವಿರಿ.

**ಸಿ) ಪುಟ ಸಂಖ್ಯೆ 3 ರಲ್ಲಿರುವ ಆರಂಭದ ಬಾಕ್ಸ್‌ಟೆಕ್ಸ್ಟ್ ಈ ಕೆಳಗಿನಂತೆ ಬದಲಾಗಿದೆ:**

ಇಮ್ರಾನ್, ಮನ್‌ಪ್ರೀತ್, ಜೋಸೆಫ್ ಮತ್ತು ಪ್ರಿಯಾಂಕ ಹತ್ತನೇ ತರಗತಿಯಿಂದಲೂ ಸಹಪಾಠಿಗಳಾಗಿದ್ದಾರೆ. ಪರೀಕ್ಷೆಗಳು ಮುಗಿದ ನಂತರ ಅವರು, ತಮ್ಮ ಇನ್ನೊಬ್ಬ ಸ್ನೇಹಿತೆ, ರುಚಿಕಾಳ ಮನೆಯಲ್ಲಿ ಒಟ್ಟಿಗೆ ಭೇಟಿಯಾದರು. ಎಲ್ಲರೂ ತಮ್ಮ ಪರೀಕ್ಷಾ ದಿನಗಳ ಅನುಭವಗಳನ್ನು ಹಂಚಿಕೊಳ್ಳುತ್ತಿರುವಾಗಲೇ, ರುಚಿಕಾಳ ತಂದೆ ಶ್ರೀ ರಘುರಾಜ್ ಚೌಧರಿಯವರು ಮಧ್ಯ ಪ್ರವೇಶಿಸಿ, ಅವರ ಯೋಗ ಕ್ಷೇಮದ ಬಗ್ಗೆ ತಿಳಿದುಕೊಂಡರು. ಜೊತೆಗೆ ಪ್ರತಿಯೊಬ್ಬರ ವೃತ್ತಿಯೋಜನೆಗಳ ಬಗೆಗೂ ವಿಚಾರಿಸಿದರು. ಆದರೆ ಯಾರೊಬ್ಬರೂ ಸ್ಪಷ್ಟವಾದ ಪ್ರತಿಕ್ರಿಯೆಯನ್ನು ನೀಡಲಿಲ್ಲ. ಸ್ವತ: ವ್ಯವಹಾರೋದ್ಯಮಿಯಾದ ರಘುರಾಜ್‌ರವರೇ ಭರವಸೆದಾಯಕ ಮತ್ತು ಸವಾಲಿನ ಚಟುವಟಿಕೆಯಾದ ವ್ಯವಹಾರವನ್ನು ಆಯ್ಕೆ ಮಾಡಿಕೊಳ್ಳಬಹುದೆಂದು ಸಲಹೆ ನೀಡಿದರು. ಅವರ ಸಲಹೆಯಿಂದ ಉತ್ತೇಜಿತನಾದ ಜೋಸೆಫ್, "ಹೌದು, ನಿಜವಾಗಿಯೂ ವ್ಯವಹಾರವು ಇಂಜಿನೀಯರ್ ಅಥವಾ ವೈದ್ಯರಾಗಿ ಗಳಿಸುವುದಕ್ಕಿಂತ ಹೆಚ್ಚಿನ ಹಣ ಸಂಪಾದನೆ ಮಾಡಲು ಉತ್ತಮವಾಗಿದೆ" ಎಂದನು. ಇದಕ್ಕೆ ಪ್ರತಿಕ್ರಿಯಿಸಿದ ರಘುರಾಜ್‌ರವರು

“ಯುವಮಿತ್ರ, ವ್ಯವಹಾರವೆಂದರೆ ಕೇವಲ ಹಣ ಗಳಿಸುವುದೊಂದೇ ಅಲ್ಲ, ಅದು ಇನ್ನೂ ವ್ಯಾಪಕವಾದುದಾಗಿದೆ ಎಂದು ಹೇಳಿದರಲ್ಲದೇ ವ್ಯವಹಾರ ಚಟುವಟಿಕೆಗಳು ಯಾವುದೇ ದೇಶದ ಪ್ರಗತಿ ಮತ್ತು ಅಭಿವೃದ್ಧಿಗೆ ಎಡೆಮಾಡಿಕೊಡುತ್ತದೆ ಎಂದರು. ವ್ಯವಹಾರ ಚಟುವಟಿಕೆಗಳು ಬಹಳ ಪುರಾತನ ಸಮಯದಿಂದಲೂ ಇದ್ದು, ವ್ಯಾಪಾರವು ಭಾರತೀಯ ಉಪಖಂಡದ ಅಭ್ಯುದಯದಲ್ಲಿ ಹೇಗೆ ಸಹಾಯ ಮಾಡಿದೆ ಎಂದೂ ಹೇಳಿದರು. ಪ್ರಿಯಾಂಕ ತಾವೆಲ್ಲರೂ ಇತಿಹಾಸದ ಪಠ್ಯಪುಸ್ತಕಗಳಲ್ಲಿ ರೇಷ್ಮೆ ಮಾರ್ಗದ ಬಗ್ಗೆ ಓದಿರುವುವೆಂದು ಹೇಳಿದಳು. ರಘುರಾಜ್ ನಂತರ ತಮ್ಮ ದೈನಂದಿನ ಕಾರ್ಯಗಳಲ್ಲಿ ಮಗ್ನರಾದರು. ಆದಾಗ್ಯೂ, ನಾಲ್ವರು ಸಹಪಾಠಿಗಳು ಪ್ರಶ್ನೆಗಳನ್ನು ಹಾಕಲಾರಂಭಿಸಿದರು. ಆ ನಾಲ್ವರ ಸಂಭಾಷಣೆಯು ಪುರಾತನ ಕಾಲದಲ್ಲಿ ವ್ಯಾಪಾರೀ ಚಟುವಟಿಕೆಗಳು ಹೇಗೆ ನಡೆಯುತ್ತಿದ್ದವು ಎಂಬುದರ ಮೇಲೆ ಪ್ರಮುಖವಾಗಿ ಆಧರಿಸಿತ್ತು. ವ್ಯಾಪಾರೀ ಚಟುವಟಿಕೆಗಳ ಮೂಲಗಳನ್ನು ಹೇಗೆ ಪತ್ತೆಮಾಡುವುದು? ಆಗಿನ ಭಾರತಕ್ಕೆ ಬಂದ ಪ್ರವಾಸಿಗರು ಭಾರತ ಉಪಖಂಡವನ್ನು ಸ್ವರ್ಣ ಭಾರತ ಮತ್ತು ಸ್ವರ್ಣ ದ್ವೀಪ ಎಂದು ಏಕೆ ಉಲ್ಲೇಖಿಸಿದ್ದರು? ಕೊಲಂಬಸ್ ಮತ್ತು ವಾಸ್ಕೋ ಡ ಗಾಮಾ ಭಾರತವನ್ನು ಶೋಧಿಸುವುದಕ್ಕಾಗಿ ಪ್ರಯಾಣ ಕೈಗೊಳ್ಳುವಂತೆ ಮಾಡಿದ್ದಾದರೂ ಏನು? ನಾಲ್ವರು ಸಹಪಾಠಿಗಳೂ ತಮ್ಮ ಶಾಲೆಯ ವಾಣಿಜ್ಯ ಶಿಕ್ಷಕರನ್ನು ಭೇಟಿಯಾಗಿ ವ್ಯವಹಾರದ ಅಭಿವೃದ್ಧಿ, ಸ್ವರೂಪ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ತೀರ್ಮಾನಿಸಿದರು.

## 2. ಸೇರ್ಪಡೆಯಾಗಿರುವುದು:

**ಎ) ಪುಟ ಸಂಖ್ಯೆ 3 ರಲ್ಲಿ ಪೀಠಿಕೆಯ ನಂತರ ಈ ಕೆಳಗಿನ ಸಾಲು ಸೇರ್ಪಡೆಯಾಗಿದೆ:**

ಈ ಅಧ್ಯಾಯವನ್ನು ಎರಡು ಭಾಗಗಳಾಗಿ ವಿಭಾಗಿಸಲಾಗಿದೆ. ವಿಭಾಗ–1 ಪ್ರಾಚೀನ ಭಾರತದಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಇತಿಹಾಸಕ್ಕೆ ಸಂಬಂಧಿಸಿದೆ. ವಿಭಾಗ–2 ವ್ಯವಹಾರದ ಪರಿಕಲ್ಪನೆ, ಸ್ವರೂಪ ಮತ್ತು ಉದ್ದೇಶಗಳಿಗೆ ಸಂಬಂಧಿಸಿದೆ.

**ಬಿ) ಪುಟ ಸಂಖ್ಯೆ 4ರ ಆರಂಭದಲ್ಲಿ ಈ ಕೆಳಗಿನ ಪಠ್ಯವನ್ನು ಸೇರ್ಪಡೆ ಮಾಡಲಾಗಿದೆ:**

## ವಿಭಾಗ 1

### ವ್ಯಾಪಾರ ಮತ್ತು ವಾಣಿಜ್ಯದ ಇತಿಹಾಸ:

ಯಾವುದೇ ಪ್ರದೇಶದ ಆರ್ಥಿಕ ಮತ್ತು ವಾಣಿಜ್ಯದ ವಿಕಸನವು ಅದರ ಭೌತಿಕ ಪರಿಸರವನ್ನು ಅವಲಂಬಿಸಿದೆ. ಉತ್ತರದಲ್ಲಿ ಹಿಮಾಲಯ ಮತ್ತು ದಕ್ಷಿಣದಲ್ಲಿ ನೀರಿನಿಂದ ಸುತ್ತುವರೆದಿರುವ ಇಡೀ ಭಾರತ ಉಪಖಂಡದ ವಿಷಯದಲ್ಲಿ ಇದು ಸಂಪೂರ್ಣವಾಗಿ ರುಜುವಾತಾಗಿದೆ. ರೇಷ್ಮೆ ಮಾರ್ಗದಲ್ಲಿ ಐಕ್ಯಗೊಂಡಿರುವ ರಸ್ತೆಗಳ ಜಾಲಬಂಧವು ನಿರ್ದಿಷ್ಟವಾಗಿದ ಪಕ್ಕದ ವಿದೇಶೀ ರಾಜಪ್ರಭುತ್ವಗಳು ಮತ್ತು ಏಷಿಯಾ ಸಾಮ್ರಾಜ್ಯದೊಂದಿಗೆ ಹಾಗೂ ಸಾರ್ವತ್ರಿಕವಾಗಿ ಪ್ರಪಂಚದೊಂದಿಗೆ ವಾಣಿಜ್ಯಾತ್ಮಕ ಮತ್ತು ರಾಜಕೀಯ ಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡಿದೆ. ಸಮುದ್ರದ ಮೂಲಕ ಪೂರ್ವ ಮತ್ತು ಪಶ್ಚಿಮಗಳನ್ನು ಸಂಪರ್ಕಿಸುವ ಜಲಮಾರ್ಗಗಳನ್ನು ಸಾಂಬಾರ ಪದಾರ್ಥಗಳ ವ್ಯಾಪಾರಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ಹಾಗೂ ಈ ಮಾರ್ಗಗಳು ಸಾಂಬಾರ ಪದಾರ್ಥಗಳ ಮಾರ್ಗರ್ಗಗಳೆಂದು ಗುರುತಿಸಲ್ಪಟ್ಟಿದ್ದವು. ಈ ಮಾರ್ಗಗಳ ಮೂಲಕ ಸಂಪತ್ತು ಸಾಗಾಟವಾಗುತ್ತಿದ್ದುದರಿಂದ ಪ್ರಾಚೀನ ಭಾರತದಲ್ಲಿ ಮುಖ್ಯ ರಾಜಪ್ರಭುತ್ವಗಳು, ಪ್ರಮುಖ ವ್ಯಾಪಾರ ಕೇಂದ್ರಗಳು ಮತ್ತು ಕೈಗಾರಿಕಾ ವಲಯಗಳು ಪ್ರವರ್ಧಮಾನಕ್ಕೆ ಬಂದವು. ಆ ಮೂಲಕ ದೇಶೀಯ ಮತ್ತು ಅಂತರರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗೆ ಅನುವು ಮಾಡಿಕೊಟ್ಟವು.

ಪ್ರಾಚೀನ ಕಾಲದಲ್ಲಿ ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಕಾರ್ಯಭಾಗಿ ಹರಿಕಾರನಂತೆ ಭಾರತವನ್ನು ಸಿದ್ಧಗೊಳಿಸುವಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಪ್ರಧಾನ ಪಾತ್ರ ವಹಿಸಿದ್ದವು. ಪುರಾತತ್ವ ಸಾಕ್ಷ್ಯಗಳು ಜಲ ಮತ್ತು ಭೂ ಮಾರ್ಗಗಳ ಮೂಲಕ ನಡೆಯುತ್ತಿದ್ದ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ಪ್ರಾಚೀನ ಭಾರತದ ಆರ್ಥಿಕತೆಯ ಆಧಾರ ಸ್ತಂಭವಾಗಿದ್ದವು ಎಂಬುದನ್ನು ತೋರಿಸಿಕೊಟ್ಟಿವೆ. ಹರಪ್ಪ ಮತ್ತು ಮೊಹೆಂಜೋದಾರೋಗಳಂತಹ ವಾಣಿಜ್ಯ ನಗರಗಳು ಕ್ರಿ.ಪೂ.ಮೂರನೇ ಶತಮಾನದಲ್ಲಿ ಸ್ಥಾಪಿತಗೊಂಡಿದ್ದವು. ಈ ನಾಗರೀಕತೆಯು ಮೆಸಪಟೋಮಿಯಾದೊಂದಿಗೆ ವಾಣಿಜ್ಯಾತ್ಮಕ ಸಂಬಂಧಗಳನ್ನು ಹೊಂದಿತ್ತು ಮತ್ತು ಚಿನ್ನ, ಬೆಳ್ಳಿ, ತಾಮ್ರ, ವರ್ಣಲೇಪಿತ ಹರಳುಗಳು, ಮಣಿಗಳು, ಮುತ್ತುಗಳು, ಸಮುದ್ರ ಚಿಪ್ಪುಗಳು, ಅಲಂಕೃತ ಮಡಿಕೆಗಳು ಮುಂತಾದ ವಸ್ತುಗಳ ವ್ಯಾಪಾರ ನಡೆಯುತ್ತಿತ್ತು. ಈ ಕಾಲಘಟ್ಟವು ಗಮನಾರ್ಹವಾದ ವಾಣಿಜ್ಯ ಚಟುವಟಿಕೆಗಳು ಹಾಗೂ ನಗರಾಭಿವೃದ್ಧಿಯಿಂದ ಗುರುತಿಸಲ್ಪಟ್ಟಿತು. ಪ್ರಾಚೀನ ಕಾಲದಲ್ಲಿದ್ದ ರಾಜಕೀಯ ಆರ್ಥಿಕತೆ ಮತ್ತು ಸೇನಾ ಸುರಕ್ಷತೆಯು ಭಾರತ ಉಪಖಂಡದ ಹೆಚ್ಚಿನ ಭಾಗವನ್ನು ಒಂದಾಗಿಸಿತ್ತು ಹಾಗೂ ವ್ಯಾಪಾರದ ನಿಬಂಧನೆಗಳನ್ನು ಜಾಗರೂಕತೆಯಿಂದ ಯೋಜಿಸಲಾಗಿತ್ತು. ವೈವಿಧ್ಯಮಯವಾದ ನಾಣ್ಯಗಳು ಮತ್ತು ತೂಗುವ ಪದ್ಧತಿಗಳಿದ್ದು, ಅವು ಹಣ ವಿನಿಮಯಕಾರರ ಸಹಾಯದಿಂದ ಹಾಗೂ ಸಾಮಾನ್ಯವಾಗಿ ಒಪ್ಪಲಾದ ಕೆಲವು ತೂಕ ಮತ್ತು ಮಾಪನಗಳಿಗೆ ಮೊರೆಹೋಗುವ ಮೂಲಕ ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿದ್ದವು.

## 1.1 ದೇಶೀಯ ಬ್ಯಾಂಕಿಂಗ್ ವ್ಯವಸ್ಥೆ:

ಆರ್ಥಿಕ ಜೀವನವು ಪ್ರಗತಿ ಹೊಂದಿದಂತೆ, ದೀರ್ಘಬಾಳಿಕೆ ಮತ್ತು ವಿಭಾಜಕತ್ವಗಳ ಕಾರಣಗಳಿಂದಾಗಿ ಲೋಹಗಳು ಇತರ ವಸ್ತುಗಳಿಗೆ ಪೂರಕವಾಗಿ ಹಣದ ರೂಪದಲ್ಲಿ ಬಳಕೆಯಾಗತೊಡಗಿತು. ಹಣವು ವಿನಿಮಯ ಮಾಧ್ಯಮವಾಗಿ ಬಳಕೆಯಾಗುತ್ತಿದ್ದುದರಿಂದ, ಲೋಹದ ಹಣದ ಪರಿಚಯವಾಯಿತು ಮತ್ತು ಅದರ ಬಳಕೆಯು ಆರ್ಥಿಕ ಚಟುವಟಿಕೆಗಳ ವೇಗವನ್ನು ಹೆಚ್ಚಿಸಿತು.

ಹುಂಡಿ ಮತ್ತು ಚಿಟ್ಟಿ ಎಂಬ ದಾಖಲೆಪತ್ರಗಳು, ಹಣವು ಕೈಯಿಂದ ಕೈಗೆ ಬದಲಾಗುವುದನ್ನು ಒಳಗೊಂಡ ವಹಿವಾಟುಗಳನ್ನು ನಡೆಸುವಲ್ಲಿ ಬಳಕೆಯಲ್ಲಿದ್ದವು. ಹುಂಡಿಯು ವಿನಿಮಯ ಪತ್ರವಾಗಿ ಉಪಖಂಡದಲ್ಲಿ ಹೆಚ್ಚು ಪ್ರಮುಖವಾಗಿತ್ತು. ಇದು (1) ಹಣ ಪಾವತಿಯ ಬೇಷರತ್ ಎಚ್ಚರಿಕೆ, ವಾಗ್ದಾನ ಅಥವಾ ಆದೇಶ (2) ಕ್ರಮಬದ್ಧ ಸಂಧಾನದಿಂದ ಹಸ್ತಾಂತರದ ಮೂಲಕ ಬದಲಾಗಬಲ್ಲ ಕರಾರನ್ನು ಒಳಗೊಂಡಿರುತ್ತಿತ್ತು.

ಕೃಷಿ ಮತ್ತು ಪಶುಸಂಗೋಪನೆಗಳು ಪ್ರಾಚೀನ ಕಾಲದ ಜನರ ಆರ್ಥಿಕ ಜೀವನದ ಪ್ರಮುಖ ಘಟಕಗಳಾಗಿದ್ದವು. ಅನುಕೂಲಕರ ಹವಾಮಾನದ ಕಾರಣದಿಂದಾಗಿ ಒಂದು ವರ್ಷದಲ್ಲಿ ಎರಡು ಅಥವಾ ಕೆಲವೊಮ್ಮೆ ಮೂರು ಫಸಲುಗಳನ್ನು ಬೆಳೆಯುವುದು ಸಾಧ್ಯವಾಗಿತ್ತು. ಇದರೊಂದಿಗೆ, ಜನರು ಹತ್ತಿಬಟ್ಟೆ ನೇಯ್ಗೆ, ಬಣ್ಣ ಹಾಕುವುದು, ಮಣ್ಣಿನ ಮಡಿಕೆ, ಪಾತ್ರೆ ಮತ್ತು ಕರಕುಶಲವಸ್ತುಗಳ ತಯಾರಿಕೆ, ಕೆತ್ತನೆ, ಗೃಹ ಕೈಗಾರಿಕೆಗಳು, ಕಟ್ಟಡ ನಿರ್ಮಾಣ, ಉತ್ಪಾದನೆ, ಸಾರಿಗೆ (ಗಾಡಿ, ದೋಣಿ, ಹಡಗುಗಳು), ಇತ್ಯಾದಿ ಚಟುವಟಿಕೆಗಳನ್ನು ಆಶ್ರಯಿಸಿದ್ದರಿಂದ ಹೂಡಿಕೆ ಮಾಡಲು ಹೆಚ್ಚುವರಿ ಸಂಪತ್ತನ್ನು ಗಳಿಸಲು ಮತ್ತು ಉಳಿತಾಯ ಮಾಡಲು ಅವರಿಗೆ ಸಾಧ್ಯವಾಗಿತ್ತು.

ಕುಶಲಕರ್ಮಿಗಳು ಕಾರ್ಯನಿರ್ವಹಿಸುವ ಕಾರ್ಖಾನೆಗಳು ಮುಂಚೂಣಿಯಲ್ಲಿದ್ದವು ಹಾಗೂ ಕಚ್ಚಾವಸ್ತುಗಳನ್ನು ಹೆಚ್ಚು ಬೇಡಿಕೆಯಲ್ಲಿದ್ದ ಸಿದ್ಧವಸ್ತುಗಳನ್ನಾಗಿ ಪರಿವರ್ತಿಸುತ್ತಿದ್ದವು. ಕುಟುಂಬ ಆಧಾರಿತ ತರಬೇತಿ ವ್ಯವಸ್ಥೆಯು ಆಚರಣೆಯಲ್ಲಿತ್ತು ಮತ್ತು ನಿರ್ದಿಷ್ಟ ವ್ಯಾಪಾರಿ ಕೌಶಲ್ಯಗಳನ್ನು ಗಳಿಸಲು ಈ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿತ್ತು. ವಿವಿಧ ಬಗೆಯ ಕುಶಲಕರ್ಮಿಗಳು, ಕರಕುಶಲಕಾರರು ಮತ್ತು ಕುಶಲ ಕಾರ್ಮಿಕರು ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿದ್ದ ಜಾಣ್ಮೆ ಹಾಗೂ ಜ್ಞಾನಗಳನ್ನು ಕಲಿತರು ಮತ್ತು ಬೆಳೆಸಿದರು.

| **ಭಾರತೀಯ ವರ್ತಕ ಸಮುದಾಯಗಳು ಬಳಸುತ್ತಿದ್ದ ಹುಂಡಿ** | | |
|---|---|---|
| **ಹುಂಡಿಯ ಹೆಸರು** | **ವಿಶಾಲ ವರ್ಗೀಕರಣ** | **ಹುಂಡಿಯ ಕಾರ್ಯಗಳು** |
| ಧಣಿ–ಜೋಗ್ | ದರ್ಶನಿ | ಯಾವ ವ್ಯಕ್ತಿಗಾದರೂ ಪಾವತಿಸುವಂತಹದ್ದು– ಪಾವತಿ ಸ್ವೀಕರಿಸಿದವರ ಮೇಲೆ ಹೊಣೆಗಾರಿಕೆ ಇರುವುದಿಲ್ಲ. |
| ಸಹ–ಜೋಗ್ | ದರ್ಶನಿ | ನಿರ್ದಿಷ್ಟ, ಗೌರವಾನ್ವಿತ ವ್ಯಕ್ತಿಗೆ ಪಾವತಿಸುವಂತಹದ್ದು. ಪಾವತಿ ಸ್ವೀಕರಿಸಿದವರ ಮೇಲೆ ಹೊಣೆಗಾರಿಕೆ ಇರುತ್ತದೆ. |
| ಫರ್ಮಾನ್–ಜೋಗ್ | ದರ್ಶನಿ | ಆದೇಶದಂತೆ ಪಾವತಿ ಮಾಡುವಂತೆ ಹುಂಡಿಯನ್ನು ಮಾಡಬೇಕಾಗುತ್ತದೆ. |
| ದೇಖಾಂ–ಹರ್ | ದರ್ಶನಿ | ಪ್ರಸ್ತುತಿಕಾರ ಅಥವಾ ಧಾರಕನಿಗೆ ಪಾವತಿಸುವಂತಹದ್ದು |
| ಧಣಿ–ಜೋಗ್ | ಮುದ್ದತಿ | ಯಾವ ವ್ಯಕ್ತಿಗಾದರೂ ಪಾವತಿಸುವಂತಹದ್ದು–– ಪಾವತಿ ಸ್ವೀಕರಿಸಿದವರ ಮೇಲೆ ಹೊಣೆಗಾರಿಕೆ ಇರುವುದಿಲ್ಲ, ಆದರೆ ಪಾವತಿಯು ನಿರ್ದಿಷ್ಟ ಅವಧಿಗಾಗಿರುತ್ತದೆ. |
| ಫರ್ಮಾನ್–ಜೋಗ್ | ಮುದ್ದತಿ | ಆದೇಶದಂತೆ ನಿರ್ದಿಷ್ಟ ಅವಧಿಗೊಳಪಟ್ಟು ಪಾವತಿಸುವಂತೆ ಹುಂಡಿಯನ್ನು ಮಾಡಬೇಕಾಗುತ್ತದೆ |
| ಜೋಖ್ಮಿ | ಮುದ್ದತಿ | ರವಾನಿಸಿದ ಸರಕುಗಳ ವಿರುದ್ಧ ತೆಗೆಯಲಾಗಿರುತ್ತದೆ. ಸಾಗಾಟದಲ್ಲಿ ಸರಕುಗಳು ಕಳೆದುಹೋದಲ್ಲಿ, ರಚಕ ಅಥವಾ ಧಾರಕನು ವೆಚ್ಚ ಭರಿಸುತ್ತಾನೆ ಮತ್ತು ಪಾವತಿ ಸ್ವೀಕರ್ತನಿಗೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ. |

### 1.2.1 ಮಧ್ಯವರ್ತಿಗಳ ಉದಯ

ವ್ಯಾಪಾರದ ಪ್ರವರ್ತನೆಯಲ್ಲಿ ಮಧ್ಯವರ್ತಿಗಳು ಪ್ರಮುಖ ಪಾತ್ರ ವಹಿಸಿದರು. ವಿಶೇಷವಾಗಿ ವಿದೇಶ ವ್ಯಾಪಾರದಲ್ಲಿ ಒಳಗೊಳ್ಳುವ ನಷ್ಟಭಯಗಳ ಹೊಣೆಗಾರಿಕೆ ಹೊರಲು ಉತ್ಪಾದಕರಿಗೆ ಗಮನಾರ್ಹವಾಗಿ

ಹಣಕಾಸಿನ ಭದ್ರತೆ ಒದಗಿಸಿದರು. ಮಧ್ಯವರ್ತಿಗಳಲ್ಲಿ ಕಮಿಷನ್ ಏಜೆಂಟರು, ಬ್ರೋಕರ್‌ಗಳು ಮತ್ತು ಸಗಟು ಮತ್ತು ಚಿಲ್ಲರೆ ಸರಕುಗಳ ಹಂಚಿಕೆದಾರರು ಒಳಗೊಳ್ಳುತ್ತಾರೆ. ವಿಸ್ತಾರವಾಗುತ್ತಿದ್ದ ವ್ಯಾಪರವು ಏಷಿಯಾದೊಳಗೆ ಅಪಾರ ಮೊತ್ತದ ಬೆಳ್ಳಿಯ ನಾಣ್ಯಗಳನ್ನು ಹೊತ್ತು ತಂದಿತಲ್ಲದೇ ಅದರ ಬಹುಪಾಲು ಭಾರತದೆಡೆಗೆ ಆಕರ್ಷಿಸಲ್ಪಟ್ಟಿತು.

ಜಗತ್‌ಸೇಠ್‌ಗಳೆಂಬ ಪಂಗಡವೂ ಸಹ ಬೆಳೆಯಿತಲ್ಲದೇ ಮೊಘಲರ ಅವಧಿ ಮತ್ತು ಈಸ್ಟ್ ಇಂಡಿಯಾ ಕಂಪನಿಯ ದಿನಗಳಲ್ಲಿ ಅದು ಹೆಚ್ಚು ಪ್ರಭಾವ ಬೀರಿತು. ಬ್ಯಾಂಕರುಗಳು ನ್ಯಾಸಧಾರಿಗಳಂತೆ ಮತ್ತು ದತ್ತಿನಿಧಿಗಳ ಉತ್ತರಾಧಿಕಾರಿಗಳಂತೆ ವರ್ತಿಸಲಾರಂಭಿಸಿದರು. ವಿದೇಶೀ ವ್ಯಾಪಾರಕ್ಕೆ ಸಾಲಗಳ ಮೂಲಕ ಹಣಕಾಸು ಲಭ್ಯವಾಯಿತು. ಆದಾಗ್ಯೂ, ದೀರ್ಘ ಸಮುದ್ರಯಾನ ವ್ಯಾಪಾರಗಳಲ್ಲಿ ಅಪಾರ ನಷ್ಟಭಯ ಇದ್ದ ಕಾರಣದಿಂದ ಸಾಲದ ಬಡ್ಡಿದರವೂ ಹೆಚ್ಚಾಗಿತ್ತು.

ಪತ್ತು ವಹಿವಾಟುಗಳ ಉದಯ ಹಾಗೂ ಸಾಲ ಮತ್ತು ಮುಂಗಡಗಳ ಲಭ್ಯತೆಗಳು ವಾಣಿಜ್ಯ ಕಾರ್ಯಾಚರಣೆಗಳನ್ನು ಹೆಚ್ಚಿಸಿದವು. ಆಮದುಗಳನ್ನು ಮೀರಿದ ರಫ್ತು ವ್ಯಾಪಾರವು ಅಪಾರ ಲಾಭ ತಂದುಕೊಟ್ಟ ಕಾರಣ ಭಾರತ ಉಪಖಂಡವು ಅನುಕೂಲಕಾರಿ ವ್ಯಾಪಾರ–ಬಾಕಿಯ ಫಲವನ್ನು ಅನುಭವಿಸಿತು ಮತ್ತು ದೇಶೀಯ ಬ್ಯಾಂಕಿಂಗ್ ವ್ಯವಸ್ಥೆಯ ವ್ಯಾಪಾರ ವಿಸ್ತರಣೆ ಮತ್ತು ಅಭಿವೃದ್ಧಿಗೆ ಹೆಚ್ಚುವರಿ ಬಂಡವಾಳದ ಮೂಲಕ ಉತ್ಪಾದಕರು, ವ್ಯಾಪಾರಿಗಳು ಮತ್ತು ವರ್ತಕರಿಗೆ ಪ್ರಯೋಜನಕಾರಿಯಾಯಿತು. ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಹಣಕಾಸು ಪೂರೈಸುವುದಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕಾ ಬ್ಯಾಂಕುಗಳು ಹಾಗೂ ಕೃಷಿಕರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳೆರಡನ್ನೂ ಪೂರೈಸುವುದಕ್ಕಾಗಿ ಕೃಷಿ ಬ್ಯಾಂಕುಗಳು ನಂತರ ಹುಟ್ಟಿಕೊಂಡವು.

### 1.3 ಸಾರಿಗೆ

ಪ್ರಾಚೀನ ಕಾಲದಿಂದಲೂ ಭೂ ಮತ್ತು ಜಲಸಾರಿಗೆಗಳು ಜನಪ್ರಿಯವಾಗಿದ್ದವು. ಭೂಮಾರ್ಗ ಮತ್ತು ಸಾಗರ ಮಾರ್ಗಗಳೆರಡರ ಮೂಲಕ ವ್ಯಾಪಾರವು ನಡೆಯುತ್ತಿತ್ತು. ಸಂಪರ್ಕ ಮಾಧ್ಯಮದಂತಿದ್ದ ರಸ್ತೆಗಳು ಸಂಪೂರ್ಣ ಅಭಿವೃದ್ಧಿ ಪ್ರಕ್ರಿಯೆಯು ಒಳನಾಡ ವ್ಯಾಪಾರದಲ್ಲಿಯೂ ಮತ್ತು ಭೂಮಾರ್ಗದ ಮೂಲಕದ ವ್ಯಾಪಾರಗಳಲ್ಲೂ ಪ್ರಾಮುಖ್ಯತೆ ವಹಿಸಿತ್ತು. ಉತ್ತರದ ರಸ್ತೆ ಮಾರ್ಗವು ಮೂಲತಃ ಬಂಗಾಳದಿಂದ ತಕ್ಷಶಿಲೆಯವರೆಗೂ ಹಬ್ಬಿತ್ತೆಂದು ನಂಬಲಾಗಿದೆ. ದಕ್ಷಿಣದಲ್ಲಿಯೂ ಸಹ ಪೂರ್ವ ಮತ್ತು ಪಶ್ಚಿಮಗಳಿಗೆ ಹರಡಿದ ವ್ಯಾಪಾರಿ ಮಾರ್ಗಗಳಿದ್ದವು. ವ್ಯಾಪಾರೀ ಮಾರ್ಗಗಳು ಅಗಲ ರಚನೆ ಹೊಂದಿದು ವೇಗ ಮತ್ತು ಸುರಕ್ಷತೆಗಳಿಗೆ ಸೂಕ್ತವಾಗಿದ್ದವು.

ಸಾಗರೋತ್ತರ ವ್ಯಾಪಾರವು ಜಾಗತಿಕ ವ್ಯಾಪಾರ ಜಾಲದ ಮತ್ತೊಂದು ಪ್ರಮುಖ ಶಾಖೆಯಾಗಿತ್ತು. ಮುಜಿರಿಸ್ ಸ್ಥಿತವಾಗಿರುವ ಮಲಬಾರ್ ಕರಾವಳಿಯು ಅಂತರರಾಷ್ಟ್ರೀಯ ಸಾಗರ ವ್ಯಾಪಾರದಲ್ಲಿ ರೋಮನ್ ಸಾಮ್ರಾಜ್ಯದ ಕಾಲದಿಂದಲೂ ಸಂಬಂಧ ಹೊಂದಿರುವ ದೀರ್ಘ ಇತಿಹಾಸವನ್ನು ಹೊಂದಿದೆ. ರೋಮನ್ ಸಾಮ್ರಾಜ್ಯದಲ್ಲಿ ಕಪ್ಪು ಬಂಗಾರವೆಂದೇ ಪ್ರಸಿದ್ಧವಾಗಿದ್ದ ಕಾಳುಮೆಣಸಿಗೆ ಬಹಳ ಬೆಲೆಯಿತ್ತು. ಶತಮಾನಗಳವರೆಗೆ ಈ ಮಾರ್ಗದ ಮೇಲೆ ಅಧಿಪತ್ಯ ಸಾಧಿಸುವುದಕ್ಕಾಗಿ ವಿವಿಧ ಸಾಮ್ರಾಜ್ಯಗಳು ಮತ್ತು ವ್ಯಾಪಾರೀ ಶಕ್ತಿಗಳ ನಡುವಿನ

ವೈರತ್ವ ಮತ್ತು ಘರ್ಷಣೆಗೆ ಇದೂ ಕಾರಣವಾಗಿತ್ತು. ಇದರಿಂದಾಗಿ 15ನೇ ಶತಮಾನದ ಕೊನೆಯ ವರ್ಷಗಳಲ್ಲಿ ಸಂಬಾರ ಪದಾರ್ಥಗಳಿಗಾಗಿ ಭಾರತಕ್ಕೆ ಪರ್ಯಾಯ ಸಮುದ್ರ ಮಾರ್ಗದ ಶೋಧನೆಯು ಕೊಲಂಬಸ್ ಅಮೇರಿಕಾ ಕಂಡುಹಿಡಿಯುವಂತೆ ಮಾಡಿತಲ್ಲದೇ, ವಾಸ್ಕೋ ಡ ಗಾಮನನ್ನು 1498ರಲ್ಲಿ ಮಲಬಾರ್ ತೀರಕ್ಕೆ ಕರೆತಂದಿತು.

ಚೀನೀ ಹಡಗುಗಳು ಮಧ್ಯಪ್ರಾಚ್ಯ ರಾಷ್ಟ್ರಗಳ ಲೋಭಾನ ಮತ್ತು ಅಂಟು(ರಾಳ) ಹಾಗೂ ಭಾರತದ ಕಾಳುಮೆಣಸು, ವಜ್ರಗಳು, ಮುತ್ತುಗಳು ಮತ್ತು ಹತ್ತಿಗಳನ್ನು ಸಂಗ್ರಹಿಸಲು ಕಲ್ಲಿಕೋಟೆಯು ಪ್ರಭಾವಶಾಲಿ ಕೇಂದ್ರವಾಗಿತ್ತು. ಕೋರಮಂಡಲ ತೀರದ ಪುಲಿಕಾಟ್ 17ನೇ ಶತಮಾನದಲ್ಲಿ ಒಂದು ಪ್ರಮುಖ ಬಂದರು ಆಗಿತ್ತು. ಜವಳಿ ಉತ್ಪನ್ನಗಳು ಪುಲಿಕಾಟ್‌ನಿಂದ ಆಗ್ನೇಯ ಏಷಿಯಾಕ್ಕೆ ಪ್ರಮುಖವಾಗಿ ರಫ್ತಾಗುತ್ತಿದ್ದವು.

### 1.4 ವ್ಯಾಪಾರೀ ಸಮುದಾಯಗಳು ಬಲಗೊಂಡವು

ದೇಶದ ವಿವಿಧ ಭಾಗಗಳಲ್ಲಿ ವಿವಿಧ ಸಮುದಾಯಗಳು ವ್ಯಾಪಾರದ ಮೇಲೆ ಅಧಿಪತ್ಯ ಸ್ಥಾಪಿಸಿದ್ದವು. ಪಂಜಾಬಿ ಮತ್ತು ಮುಲ್ತಾನಿ ವರ್ತಕರು ಉತ್ತರ ಭಾಗದಲ್ಲಿ ವ್ಯಾಪಾರವನ್ನು ಮಾಡಿದಂತೆ ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಭಟರು ವ್ಯಾಪಾರವನ್ನು ಮಾಡುತ್ತಿದ್ದರು. ಪಶ್ಚಿಮ ಭಾರತದಲ್ಲಿ ಈ ಪಂಗಡಗಳು ಮಹಾಜನ್ ಎಂದು ಕರೆಯಲ್ಪಟ್ಟರೆ, ದಕ್ಷಿಣದಲ್ಲಿ ಚೆಟ್ಟೀಸ್ ಎಂದು ಕರೆಯಲ್ಪಟ್ಟರು. ಅಹಮದಾಬಾದ್‌ನಂತಹ ನಗರಕೇಂದ್ರಗಳಲ್ಲಿ ಮಹಾಜನ ಸಮುದಾಯವನ್ನು ನಗರ್‌ಸೇಠ್ ಎಂದು ಕರೆಯಲ್ಪಡುವ ಮುಖ್ಯಸ್ಥನು ಪ್ರತಿನಿಧಿಸುತ್ತಿದ್ದನು. ನಗರ ಪ್ರದೇಶದ ಇತರ ಗುಂಪುಗಳು ವೃತ್ತಿ ಗುಂಪುಗಳಾದ ಹಕೀಮ ಮತ್ತು ವೈದ್ಯ, ವಕೀಲ, ಪಂಡಿತ ಅಥವಾ ಮುಲ್ಲಾ (ಶಿಕ್ಷಕರು), ವರ್ಣಕಾರರು, ಸಂಗೀತಗಾರರು, ಲಿಪಿಕಾರರು, ಇತ್ಯಾದಿಗಳನ್ನು ಒಳಗೊಂಡಿದ್ದವು.

#### 1.4.1 ವರ್ತಕ ಸಂಘಗಳು

ವರ್ತಕ ಸಮುದಾಯವು ವ್ಯಾಪಾರಿಗಳ ಹಿತಾಸಕ್ತಿ ರಕ್ಷಿಸಲು ಸ್ಥಾಪಿಸಲ್ಪಟ್ಟಿದ್ದ ಸ್ವಾಯತ್ತ ಸಂಘಗಳಾದ ವೃತ್ತಿ ಸಂಘ(ಗಿಲ್ಡ್)ಗಳಿಂದಲೂ ಅಧಿಕಾರ ಮತ್ತು ಅಂತಸ್ತನ್ನು ಪಡೆಯಿತು. ಈ ಸಂಘಗಳು ಔಪಚಾರಿಕವಾಗಿ ಸಂಘಟಿತವಾಗಿ, ರಾಜರೂ ಸಹ ಒಪ್ಪುವಂತಹ, ಗೌರವಿಸುವಂತಹ ತಮ್ಮದೇ ಆದ ಸದಸ್ಯತ್ವ ನಿಯಮಗಳು ಮತ್ತು ವೃತ್ತಿ ಸದಾಚಾರ ಸಂಹಿತೆಗಳನ್ನು ರೂಪಿಸಿಕೊಂಡಿದ್ದವು. ವ್ಯಾಪಾರ ಮತ್ತು ಕೈಗಾರಿಕಾ ತೆರಿಗೆಗಳು ಆದಾಯದ ಪ್ರಮುಖ ಮೂಲವಾಗಿತ್ತು. ಆಮದು ಮಾಡಿಕೊಳ್ಳುತ್ತಿದ್ದ ಬಹುಪಾಲು ವಸ್ತುಗಳ ಮೇಲೆ ವಿವಿಧ ದರಗಳಲ್ಲಿ ವಿಧಿಸಲಾಗುತ್ತಿದ್ದ ಆಕ್ಟ್ರಾಯ್ ಸುಂಕಗಳನ್ನು ವರ್ತಕರು ಪಾವತಿಸಬೇಕಾಗಿತ್ತು. ನಗದು ಅಥವಾ ವಸ್ತುಗಳ ರೂಪಗಳಲ್ಲಿ ಅವುಗಳನ್ನು ಪಾವತಿಸಲಾಗುತ್ತಿತ್ತು.

ವ್ಯಾಪಾರಿ ಸುಂಕಗಳು ಸರಕುಗಳಿಗನುಗುಣವಾಗಿ ಬೇರೆಬೇರೆಯಾಗಿದ್ದವು. ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ತೆರಿಗೆದರಗಳು ಬೇರೆಯಾಗಿದ್ದವು. ಸಾಗಾಟ ತೆರಿಗೆಯು ಆದಾಯ ಗಳಿಕೆಯ ಮತ್ತೊಂದು ಮೂಲವಾಗಿದ್ದು, ಪ್ರಯಾಣಿಕರು, ಸರಕುಗಳು, ಜಾನುವಾರು ಮತ್ತು ಗಾಡಿಗಳಿಗಾಗಿ ಪಾವತಿಸಬೇಕಾಗಿತ್ತು. ಶ್ರಮ ತೆರಿಗೆಯನ್ನು ಸ್ವೀಕರಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಸಾಮಾನ್ಯವಾಗಿ ವರ್ಗಾಯಿಸಲಾಗಿತ್ತು.

ವೃತ್ತಿಸಂಘದ ಮುಖ್ಯಸ್ಥನು ನೇರವಾಗಿ ರಾಜ ಅಥವಾ ತೆರಿಗೆ ಸಂಗ್ರಹಕಾರರೊಂದಿಗೆ ಸಂಪರ್ಕಹೊಂದಿದ್ದು, ತನ್ನ ಸಹವರ್ತಿಗಳ ಪರವಾಗಿ ಮಾರುಕಟ್ಟೆ ಕರವನ್ನು ಒಂದು ನಿರ್ದಿಷ್ಟ ಮೊತ್ತಕ್ಕೆ ಇತ್ಯರ್ಥ ಮಾಡುತ್ತಿದ್ದನು. ವೃತ್ತಿಸಂಘದ ಸದಸ್ಯ ವರ್ತಕರು ಧಾರ್ಮಿಕ ಹಿತಾಸಕ್ತಿಗಳ ಪಾಲಕರಾಗಿಯೂ ಪಾತ್ರ ವಹಿಸುತ್ತಿದ್ದರು. ದೇವಾಲಯಗಳ ನಿರ್ಮಾಣದ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿದ್ದುದು ಮಾತ್ರವಲ್ಲದೇ, ತಮ್ಮ ಸದಸ್ಯರ ಮೇಲೆ ಸಂಘದ ತೆರಿಗೆ ವಿಧಿಸುವುದರ ಮೂಲಕ ದೇಣಿಗೆಗಳನ್ನು ಕೊಡುತ್ತಿದ್ದರು. ಹೀಗೆ ವಾಣಿಜ್ಯ ಚಟುವಟಿಕೆಯ ದೊಡ್ಡ ವರ್ತಕರು ಸಮಾಜದಲ್ಲಿ ಅಧಿಕಾರ ಪಡೆಯುವುದನ್ನು ಸಾಧ್ಯವಾಗಿಸಿತು.

### 1.4.2 ಪ್ರಮುಖ ವ್ಯಾಪಾರ ಕೇಂದ್ರಗಳು

ಬಂದರು ಪಟ್ಟಣಗಳು, ಉತ್ಪಾದನಾ ಪಟ್ಟಣಗಳು, ವ್ಯಾಪಾರಿ ಪಟ್ಟಣಗಳು, ಪವಿತ್ರ ಕೇಂದ್ರಗಳು ಮತ್ತು ಯಾತ್ರಾ ಸ್ಥಳಗಳು–ಹೀಗೆ ಎಲ್ಲಾ ಬಗೆಯ ಪಟ್ಟಣಗಳಿದ್ದವು. ಅವುಗಳ ಅಸ್ತಿತ್ವವು ವರ್ತಕ ಸಮುದಾಯಗಳ ಮತ್ತು ವೃತ್ತಿಪರ ವರ್ಗಗಳ ಅಭ್ಯುದಯದ ದ್ಯೋತಕವಾಗಿದೆ.

ಈ ಕೆಳಗಿನವುಗಳು ಪ್ರಾಚೀನ ಭಾರತದಲ್ಲಿದ್ದ ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು:

**1. ಪಾಟಲಿಪುತ್ರ:** ಇಂದು ಪಾಟ್ನಾ ಎಂದು ಪ್ರಸಿದ್ಧವಾಗಿದೆ. ಅದು ಕೇವಲ ವಾಣಿಜ್ಯ ಪಟ್ಟಣವಾಗಿರದೇ, ಕಲ್ಲುಗಳ ನಿರ್ಯಾತಕ್ಕೆ ಪ್ರಮುಖ ಕೇಂದ್ರವಾಗಿತ್ತು.

**2. ಪೇಶಾವರ:** ಉಣ್ಣೆಯ ನಿರ್ಯಾತ ಮತ್ತು ಅಶ್ವಗಳ ಆಯಾತಗಳ ಪ್ರಮುಖ ಕೇಂದ್ರವಾಗಿತ್ತು. ಕ್ರಿ.ಶ.1ನೇ ಶತಮಾನದಲ್ಲಿ ಭಾರತ, ಚೀನಾ ಮತ್ತು ರೋಮ್‌ಗಳ ನಡುವಿನ ವಾಣಿಜ್ಯ ವಹಿವಾಟುಗಳಲ್ಲಿ ಬಹುಪಾಲು ಈ ಪಟ್ಟಣ ಹೊಂದಿತ್ತು.

**3. ತಕ್ಷಶಿಲೆ:** ಭಾರತ ಮತ್ತು ಮಧ್ಯ ಏಷಿಯಾಗಳ ನಡುವಿನ ಭೂಮಾರ್ಗದಲ್ಲಿದ್ದ ಪ್ರಮುಖ ಕೇಂದ್ರವಾಗಿತ್ತು. ಅದು ಹಣಕಾಸು ಮತ್ತು ವಾಣಿಜ್ಯ ಬ್ಯಾಂಕುಗಳ ನಗರವೂ ಆಗಿತ್ತು. ಅದು ಬೌದ್ಧ ಧರ್ಮ ಕಲಿಕಾ ಕೇಂದ್ರವೆಂಬ ಪ್ರಮುಖ ಸ್ಥಳವನ್ನು ತನ್ನದಾಗಿಸಿಕೊಂಡಿತ್ತು. ಪ್ರಸಿದ್ಧವಾದ ತಕ್ಷಶಿಲಾ ವಿಶ್ವವಿದ್ಯಾಲಯವು ಇಲ್ಲಿ ವಿಕಸಿಸಿತು.

**4. ಇಂದ್ರಪ್ರಸ್ಥ:** ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಿಗೆ ಸಾಗುವ ಮಾರ್ಗಗಳೆಲ್ಲವೂ ಸಂಧಿಸುವ ರಾಜಮಾರ್ಗದಲ್ಲಿದ್ದ ವಾಣಿಜ್ಯ ಕೇಂದ್ರವಾಗಿತ್ತು.

**5. ಮಥುರಾ:** ಇದೊಂದು ವ್ಯಾಪಾರ ಕೇಂದ್ರವೆನಿಸಿದ್ದು, ಇಲ್ಲಿ ಜನರು ವಾಣಿಜ್ಯವನ್ನೇ ಆಶ್ರಯಿಸಿದರೆ, ದಕ್ಷಿಣ ಭಾರತದ ಹಲವು ಮಾರ್ಗಗಳು ಮಥುರಾ ಹಾಗೂ ಬ್ರೋಚ್‌ಗಳೊಂದಿಗೆ ಸಂಪರ್ಕ ಹೊಂದಿದ್ದವು.

**6. ವಾರಣಾಸಿ:** ಗಂಗಾನದಿ ಮಾರ್ಗ ಹಾಗೂ ಉತ್ತರವನ್ನು ಪೂರ್ವದೊಂದಿಗೆ ಜೋಡಿಸುವ ಹೆದ್ದಾರಿಗಳ ಸಮೀಪ ಅನುಕೂಲವಾದ ಜಾಗದಲ್ಲಿ ಸ್ಥಿತವಾಗಿತ್ತು. ಆವಳಿ ಉದ್ದಿಮೆಯ ಪ್ರಮುಖ ಕೇಂದ್ರವಾಗಿತ್ತಲ್ಲದೇ ಅಂದವಾದ ಬಂಗಾರದ ರೇಷ್ಮೆ ಬಟ್ಟೆ ಮತ್ತು ಗಂಧದ ಕೆತ್ತನೆ ಕೆಲಸಗಳಿಗೆ ಪ್ರಸಿದ್ಧವಾಗಿತ್ತು. ಅದು ತಕ್ಷಶಿಲೆ ಮತ್ತು ಬರೂಚ್‌ಗಳೊಂದಿಗೆ ಸಂಪರ್ಕ ಹೊಂದಿತ್ತು.

**7. ಮಿಥಿಲಾ:** ಮಿಥಿಲೆಯ ವ್ಯಾಪಾರಿಗಳು ಬಂಗಾಳಕೊಲ್ಲಿಯ ಮೂಲಕ ದಕ್ಷಿಣ ಚೀನಾ ಸಮುದ್ರದವರೆಗೆ ದೋಣಿಗಳಲ್ಲಿ ದಾಟಿ, ಜಾವಾ, ಸುಮಾತ್ರಾ ಮತ್ತು ಬೋರ್ನಿಯೋ ದ್ವೀಪಗಳ ಬಂದರುಗಳಲ್ಲಿ ವ್ಯಾಪಾರ ನಡೆಸುತ್ತಿದ್ದರು. ದಕ್ಷಿಣ ಚೀನಾದಲ್ಲಿ, ಅದರಲ್ಲೂ, ಯೂನಾನ್‌ನಲ್ಲಿ ಮಿಥಿಲೆಯ ವ್ಯಾಪಾರಿ ವಸಾಹತುಗಳನ್ನು ಸ್ಥಾಪಿಸಲಾಗಿತ್ತು.

**8. ಉಜ್ಜಯಿನಿ:** ಅಗಾಟೆ, ಕಾರ್ನಿಲಿಯನ್, ಮಸ್ಲಿನ್ ಮತ್ತು ಮಾಲೋ ಬಟ್ಟೆಗಳು ಉಜ್ಜಯಿನಿಯಿಂದ ವಿವಿಧ ಕೇಂದ್ರಗಳಿಗೆ ರಫ್ತಾಗುತ್ತಿದ್ದವು. ತಕ್ಷಶಿಲೆ ಮತ್ತು ಪೇಶಾವರ್‌ಗಳೊಂದಿಗೆ ಅದು ಭೂಮಾರ್ಗದ ಮೂಲಕ ತನ್ನ ವ್ಯಾಪಾರ ಸಂಬಂಧಗಳನ್ನು ಹೊಂದಿತ್ತು.

**9. ಸೂರತ್:** ಮೊಘಲರ ಕಾಲದಲ್ಲಿ ಇದು ಪಶ್ಚಿಮ ವ್ಯಾಪಾರದ ಕೇಂದ್ರಸ್ಥಾನವಾಗಿತ್ತು. ಸೂರತ್‌ನ ಜವಳಿಯು ಚಿನ್ನದ ಅಂಚುಗಳಿಗೆ (ಜರಿ) ಪ್ರಸಿದ್ಧವಾಗಿತ್ತು. ಸೂರತ್ ಹುಂಡಿಗಳು ದೂರದ ಈಜಿಪ್ಟ್ ಮತ್ತು ಇರಾನ್ ಮಾರುಕಟ್ಟೆಗಳಲ್ಲಿ ಮಾನ್ಯವಾಗುತ್ತಿದ್ದವೆಂಬುದು ಗಮನಾರ್ಹವಾದ ಸಂಗತಿಯಾಗಿದೆ.

**10. ಕಂಚಿ:** ಇಂದು ಕಂಚೀಪುರವೆಂದು ಪ್ರಸಿದ್ಧವಾಗಿರುವ ಕಂಚಿಯಲ್ಲಿ ಚೀನೀಯರು ವಿದೇಶೀ ಹಡಗುಗಳಲ್ಲಿ ಬಂದು ಮುತ್ತು, ಗಾಜು ಮತ್ತು ಅಪರೂಪದ ಹರಳುಗಳನ್ನು ಖರೀದಿಸಿ, ಚಿನ್ನ ಮತ್ತು ರೇಷ್ಮೆಯನ್ನು ಮಾರುತ್ತಿದ್ದರು.

**11. ಮಧುರೆ:** ಮನ್ನಾರ್ ಖಾರಿಯ ಮುತ್ತು/ಹವಳ ಬೆಳೆಸುವಿಕೆಯನ್ನು ನಿಯಂತಿಸುತ್ತಿದ್ದ ಪಾಂಡ್ಯರ ರಾಜಧಾನಿಯಾಗಿತ್ತು. ಇದು ಸಾಗರೋತ್ತರ ವ್ಯಾಪಾರ ಮಾಡಲು ವಿಶೇಷವಾಗಿ ರೋಮನ್ ವರ್ತಕರನ್ನು ಆಕರ್ಷಿಸಿತ್ತು.

**12. ಬ್ರೋಚ್:** ಪಶ್ಚಿಮ ಭಾರತದ ಅತಿದೊಡ್ಡ ವಾಣಿಜ್ಯ ಪಟ್ಟಣವಾಗಿತ್ತು. ನರ್ಮದಾ ನದಿ ತೀರದಲ್ಲಿರುವ ಇದು ಎಲ್ಲಾ ಪ್ರಮುಖ ತಾಣಗಳಿಗೂ ರಸ್ತೆ ಮಾರ್ಗಗಳನ್ನು ಹೊಂದಿತ್ತು.

**13. ಕಾವೇರಿಪಟ್ಟ:** ಕಾವೇರಿಪಟ್ಟಣಂ ಎಂದೂ ಪ್ರಸಿದ್ಧವಾಗಿರುವ ಇದು ವೈಜ್ಞಾನಿಕವಾಗಿ ನಿರ್ಮಿಸಲ್ಪಟ್ಟ ನಗರವಾಗಿದ್ದು, ವ್ಯಾಪಾರಿ ಸರಕುಗಳ ಹೇರಿಕೆ, ಇಳಿಸುವುದು ಮತ್ತು ಭದ್ರ ವ್ಯವಸ್ಥೆಗಳನ್ನು ಒದಗಿಸಿತ್ತು. ವಿದೇಶೀ ವರ್ತಕರು ನಗರದಲ್ಲಿ ತಮ್ಮ ಪ್ರಧಾನ ಕೇಂದ್ರಗಳನ್ನು ಹೊಂದಿದ್ದರು. ಇದು ಮಲೇಶಿಯಾ, ಇಂಡೋನೇಶಿಯಾ, ಚೀನಾ ಮತ್ತು ದೂರದ ಪೂರ್ವದೊಂದಿಗೆ ವ್ಯಾಪಾರ ಮಾಡಲು ಅನುಕೂಲಕರ ಸ್ಥಳವಾಗಿತ್ತು. ಸುಗಂಧ ದ್ರವ್ಯಗಳು, ಪ್ರಸಾದನಗಳು, ಪುನುಗು, ರೇಷ್ಮೆ, ಉಣ್ಣೆ, ಹತ್ತಿ, ಹವಳ, ಮುತ್ತು, ಚಿನ್ನ ಮತ್ತು ಅಮೂಲ್ಯ ಹರಳುಗಳ ವ್ಯಾಪಾರದ ಕೇಂದ್ರವಾಗಿತ್ತಲ್ಲದೆ ಹಡಗು ನಿರ್ಮಾಣಕ್ಕೂ ಕೇಂದ್ರವಾಗಿತ್ತು.

**14. ತಾಮ್ರಲಿಪ್ತಿ:** ಪಶ್ಚಿಮ ಮತ್ತು ದೂರದ ಪೂರ್ವ ತೀರಗಳೊಂದಿಗೆ ಭೂಮಿ ಮತ್ತು ಸಮುದ್ರಗಳನ್ನು ಜೋಡಿಸಿದ ಅತಿ ದೊಡ್ಡ ಬಂದರುಗಳಲ್ಲಿ ಒಂದಾಗಿದೆ. ಇದು ಬನಾರಸ್ ಮತ್ತು ತಕ್ಷಶಿಲೆಗಳಿಗೆ ರಸ್ತೆಯ ಸಂಪರ್ಕ ಹೊಂದಿತ್ತು.

### 1.4.3 ಪ್ರಮುಖ ರಫ್ತು ಮತ್ತು ಆಮದುಗಳು

ಸಾಂಬಾರು ಪದಾರ್ಥಗಳು, ಗೋಧಿ, ಸಕ್ಕರೆ, ನೀಲಿ, ಅಫೀಮು, ಎಳ್ಳೆಣ್ಣೆ, ಹತ್ತಿ, ಗಿಳಿ, ಪ್ರಾಣಿಗಳು ಮತ್ತು ಪ್ರಾಣಿ ಉತ್ಪನ್ನಗಳಾದ ತೊಗಲು, ಚರ್ಮ, ಉಣ್ಣೆ, ಕೋಡುಗಳು, ಆಮೆಚಿಪ್ಪುಗಳು, ಮುತ್ತುಗಳು, ಕೇಸರಿ, ಸ್ಫಟಿಕ, ಹರಳು, ನೀಲ, ವೈಢೂರ್ಯ, ಗ್ರಾನೈಟ್ಗಳು, ನೀಲಿಹರಳು ಮತ್ತು ತಾಮ್ರ ಇತ್ಯಾದಿಗಳು ಪ್ರಮುಖ ರಫ್ತುಗಳಾಗಿದ್ದವು.


ಆಮದುಗಳಲ್ಲಿ ಕುದುರೆಗಳು, ಪ್ರಾಣಿಜನ್ಯ ಉತ್ಪನ್ನಗಳು, ಚೀನಾರೇಷ್ಮೆ, ಅಗಸೆ, ಪಿಂಗಾಣಿ, ವೈನ್, ಚಿನ್ನ, ಬೆಳ್ಳಿ, ತವರ, ತಾಮ್ರ, ಸೀಸ, ಮಾಣಿಕ್ಯ, ಸ್ಫಟಿಕ, ಗಾಜು, ಶಿಲಾರಾಳ, ಇತ್ಯಾದಿ ಒಳಗೊಂಡಿದ್ದವು.

### 1.5 ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಭಾರತೀಯ ಉಪಖಂಡದ ಸ್ಥಾನ (ಕ್ರಿ.ಶ. 1 ರಿಂದ 1991ವರೆಗೆ)

ಕ್ರಿ.ಶ.1 ಮತ್ತು 7 ನೇ ಶತಮಾನಗಳ ನಡುವೆ ಭಾರತವು ಪ್ರಾಚೀನ ಮತ್ತು ಮಧ್ಯಯುಗೀನ ವಿಶ್ವದ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾಗಿದ್ದು ವಿಶ್ವಸಂಪತ್ತಿನ ಮೂರನೇ ಒಂದು ಭಾಗ ಮತ್ತು ನಾಲ್ಕನೇ ಒಂದು ಭಾಗದಷ್ಟನ್ನು (ಕಾಲಮಾನ) ನಿಯಂತ್ರಿಸುತ್ತಿತ್ತೆಂದು ಅಂದಾಜಿಸಲಾಗಿದೆ. ಮೆಗಾಸ್ತನೀಸ್, ಫಾಹಿಯಾನ್, ಹ್ಯೂಯೆನ್ ತ್ಸಾಂಗ್, ಆಲ್ ಭರೂನಿ (11ನೇ ಶತಮಾನ), ಇಬ್ನ ಬಟೂಟ (11ನೇ ಶತಮಾನ), ಫ್ರೆಂಚ್‌ಮನ್ ಫ್ರಾಂಕೋಯಿಸ್(17ನೇ ಶತಮಾನ)ರಂತಹ ಪ್ರವಾಸಿಗರನೇಕರ ಕೃತಿಗಳಲ್ಲಿ ಸ್ವರ್ಣಭೂಮಿ, ಸ್ವರ್ಣದ್ವೀಪವೆಂದು ಉಲ್ಲೇಖಿತವಾಗಿದೆ. ದೇಶದ ಸಮೃದ್ಧತೆಯ ಕುರಿತು ಅವರು ಪುನರಾವರ್ತಿತವಾಗಿ ಉಲ್ಲೇಖಿಸಿದ್ದಾರೆ.

ಭಾರತೀಯ ಇತಿಹಾಸದಲ್ಲಿ ವಸಾಹತುಪೂರ್ವ ಅವಧಿಯು ದೇಶದ ಅರ್ಥವ್ಯವಸ್ಥೆಯ ಅತ್ಯುಚ್ಛ್ರಾಯ ಕಾಲವಾಗಿತ್ತು. ಇದು ಯೂರೋಪಿಯನ್ನರು ಮಾರ್ಗಶೋಧನೆಯ ಸಾಹಸ ಮಾಡುವಂತೆ ಮಾಡಿತು. ಆರಂಭದಲ್ಲಿ ಲೂಟಿಮಾಡಲು ಬಂದವರು ಬಹುಬೇಗ ಚಿನ್ನ ಮತ್ತು ಬೆಳ್ಳಿಯ ವಿನಿಮಯ ವ್ಯಾಪಾರದ ಲಾಭಗಳನ್ನು ಕಂಡುಕೊಂಡರು. ವಾಣಿಜ್ಯ ವಲಯದ ಬೆಳವಣಿಗೆಯಾಗುತ್ತಿದ್ದರೂ 18ನೇ ಶತಮಾನದ ಭಾರತವು ತಂತ್ರಜ್ಞಾನ, ಆವಿಷ್ಕಾರ ಮತ್ತು ಆಲೋಚನೆಗಳಲ್ಲಿ ಪಶ್ಚಿಮ ಯೂರೋಪ್‌ಗಿಂತಲೂ ಹಿಂದುಳಿದಿತ್ತೆಂದು ಸ್ಪಷ್ಟವಾಗುತ್ತದೆ. ಈಸ್ಟ್ ಇಂಡಿಯಾ ಕಂಪನಿಯ ಹೆಚ್ಚುತ್ತಿದ್ದ ನಿಯಂತ್ರಣವು ಸ್ವಾತಂತ್ರ್ಯ ಲೋಪಮಾಡಿತಲ್ಲದೇ, ಕೃಷಿ ಮತ್ತು ವೈಜ್ಞಾನಿಕ ಕ್ರಾಂತಿಯಾಗದಿರುವುದು, ಜನಸಮೂಹಕ್ಕೆ ಶಿಕ್ಷಣವು ಸಾಕಷ್ಟು ಸಿಗದಿರುವುದು, ಜನಸಂಖ್ಯೆಯ ಹೆಚ್ಚಳವನ್ನು ಉಂಟುಮಾಡಿತಲ್ಲದೇ, ಮಾನವ ಕೌಶಲ್ಯಗಳ ಬದಲು ಯಂತ್ರಗಳಿಗೆ ನೀಡಲಾದ ಆದ್ಯತೆಯು ಸಂಪದ್ಭರಿತವಾಗಿದ್ದ ಭಾರತವು ಬಡಜನರ ನಾಡಾಗುವಂತೆ ಮಾಡಿತು.

ಬ್ರಿಟಿಷ್ ಸಾಮ್ರಾಜ್ಯವು 18ನೇ ಶತಮಾನದ ಮಧ್ಯಭಾಗದ ವೇಳೆಗೆ ಭಾರತದಲ್ಲಿ ಬೇರೂರಲು ಆರಂಭಿಸಿತು. ಈಸ್ಟ್ ಇಂಡಿಯಾ ಕಂಪನಿಯು ತನ್ನ ಆಡಳಿತದಲ್ಲಿದ್ದ ಪ್ರಾಂತ್ಯಗಳಿಂದ ಸಂಗ್ರಹಿಸುತ್ತಿದ್ದ ಆದಾಯಗಳನ್ನು ಭಾರತೀಯ ಕಚ್ಚಾವಸ್ತುಗಳು, ಸಾಂಬಾರ ಪದಾರ್ಥಗಳು ಮತ್ತು ಸರಕುಗಳನ್ನು ಖರೀದಿಸಲು ಬಳಸಿತು. ಇದರಿಂದಾಗಿ ವಿದೇಶ ವ್ಯಾಪಾರದ ಕಾರಣದಿಂದ ಭಾರತದೊಳಗೆ ನಿರಂತರವಾಗಿ ಪ್ರವೇಶಿಸುತ್ತಿದ್ದ ನಾಣ್ಯ ಪ್ರವಾಹವು ನಿಂತು ಹೋಯಿತು. ಇದು ಭಾರತದ ಅರ್ಥವ್ಯವಸ್ಥೆಯ ಸ್ಥಾನವನ್ನು ಸಂಸ್ಕರಿಸಿದ ಸರಕುಗಳ ನಿರ್ಯಾತದಾರನಿಂದ ಕಚ್ಚಾವಸ್ತುಗಳ ನಿರ್ಯಾತದಾರನಾಗಿ ಮತ್ತು ಉತ್ಪಾದಿತ ಸರಕುಗಳ ಆಯಾತದಾರನಾಗಿ ಬದಲಾಗುವಂತೆ ಮಾಡಿತು.




**ಮೂಲ: ಆ್ಯಂಗಸ್ ಮ್ಯಾಡಿಸನ್ (2001 ಮತ್ತು 2003), ದಿ ವರ್ಲ್ಡ್ ಎಕಾನಮಿ: ಎ ಮಿಲೆನಿಯಲ್ ಪರ್ಸ್ಪೆಕ್ಟಿವ್, ಓಇಸಿಡಿ, ಪ್ಯಾರಿಸ್, ಆ್ಯಂಗಸ್ ಮ್ಯಾಡಿಸನ್, ದಿ ವರ್ಲ್ಡ್ ಎಕಾನಮಿ, ಹಿಸ್ಟಾರಿಕಲ್ ಸ್ಟಾಟಿಸ್ಟಿಕ್ಸ್**

### 1.5.1 ಭಾರತ ಪುನರ್‌ಕೈಗಾರಿಕೀಕರಣ ಹೊಂದಲು ಆರಂಭಿಸಿತು

ಸ್ವಾತಂತ್ರ್ಯಾನಂತರ ದೇಶದ ಅರ್ಥವ್ಯವಸ್ಥೆಯನ್ನು ಪುನರ್ನಿರ್ಮಿಸುವ ಪ್ರಕ್ರಿಯೆ ಆರಂಭವಾಯಿತು. ಅದಕ್ಕಾಗಿ ಭಾರತವು ಕೇಂದ್ರೀಕೃತ ಯೋಜಿಸುವಿಕೆಗೆ ಮೊರೆಹೋಯಿತು. 1952ರಲ್ಲಿ ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು. ಆಧುನಿಕ ಕೈಗಾರಿಕೆಗಳು, ಆಧುನಿಕ ತಂತ್ರಜ್ಞಾನಾಧಾರಿತ ಮತ್ತು ವೈಜ್ಞಾನಿಕ ಸಂಸ್ಥೆಗಳ ಸ್ಥಾಪನೆ, ಬಾಹ್ಯಾಕಾಶ ಮತ್ತು ಪರಮಾಣು ಕಾರ್ಯಕ್ರಮಗಳಿಗೆ ಹೆಚ್ಚು ಆದ್ಯತೆ ನೀಡಲಾಯಿತು. ಇಷ್ಟೆಲ್ಲಾ ಪ್ರಯತ್ನಗಳಿದ್ದಾಗ್ಯೂ ದೇಶದ ಆರ್ಥಿಕತೆಯು ಅಂದುಕೊಂಡಂತೆ ವೇಗವಾಗಿ ಬೆಳೆಯಲಿಲ್ಲ. ಬಂಡವಾಳ ರಚನೆಯ ಕೊರತೆ, ಜನಸಂಖ್ಯಾ ಹೆಚ್ಚಳ, ಅಪಾರ ರಕ್ಷಣಾ ವೆಚ್ಚ ಮತ್ತು ಸಾಕಷ್ಟಿಲ್ಲದ ಮೂಲಭೂತ ಸೌಕರ್ಯಗಳೇ ಪ್ರಮುಖ ಕಾರಣಗಳಾಗಿದ್ದವು. ಪರಿಣಾಮವಾಗಿ ಭಾರತವು ಬಹುವಾಗಿ ವಿದೇಶೀ ಸಾಲಗಳ ಮೇಲೆ ಅವಲಂಬಿಸಬೇಕಾಗಿ ಬಂತು ಹಾಗೂ ಅಂತಿಮವಾಗಿ, 1991ರಲ್ಲಿ ಆರ್ಥಿಕ ಉದಾರೀಕರಣಕ್ಕೆ ಅಸ್ತು ಎನ್ನಬೇಕಾಯಿತು.

ಇಂದು ಭಾರತೀಯ ಅರ್ಥವ್ಯವಸ್ಥೆಯು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ. ಅಲ್ಲದೇ ವಿದೇಶೀ ನೇರ ಬಂಡವಾಳದ ಆದ್ಯತಾ ಸ್ಥಾನವಾಗಿದೆ. ಏರುತ್ತಿರುವ ಆದಾಯ, ಉಳಿತಾಯ, ಹೂಡಿಕೆ ಅವಕಾಶಗಳು, ಹೆಚ್ಚಿದ ದೇಶೀಯ ಬಳಕೆ ಮತ್ತು ಯುವ ಜನತೆಗಳು ಮುಂಬರುವ ದಶಕಗಳಲ್ಲಿ ಬೆಳವಣಿಗೆಯನ್ನು ಸುನಿಶ್ಚಿತಗೊಳಿಸಿದೆ. ವಿಶ್ವದಾದ್ಯಂತ ತೀವ್ರಗತಿಯಲ್ಲಿ ಬೆಳವಣಿಗೆಯಾಗಬಲ್ಲ ಅಧಿಕ ಬೆಳವಣಿಗೆಯ ವಲಯಗಳನ್ನು ಗುರುತಿಸಲಾಗಿದೆ ಮತ್ತು ಭಾರತ ಸರ್ಕಾರದ ಇತ್ತೀಚಿನ ಉತ್ತೇಜಕ ಕಾರ್ಯಕ್ರಮಗಳಾದ ಮೇಕ್ ಇನ್ ಇಂಡಿಯಾ, ಸ್ಕಿಲ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ವಿದೇಶೀ ವ್ಯಾಪಾರ ನೀತಿಯ ಪ್ರಕಟಣೆಗಳು ದೇಶದ ರಫ್ತು, ಆಮದು ಮತ್ತು ವ್ಯಾಪಾರ ಬಾಕಿಗಳಿಗೆ ಪೂರಕವಾಗುವುವೆಂದು ನಿರೀಕ್ಷಿಸಲಾಗಿದೆ.

1850ರ ನಂತರ ಭಾರತೀಯ ಉದ್ಯಮಸಾಹಸಿಗಳು ತಮ್ಮದೇ ಆದ ಆಧುನಿಕ ಜವಳಿ ಮಿಲ್ಲುಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು ಹಾಗೂ ನಿಧಾನವಾಗಿ ದೇಶೀಯ ಮಾರುಕಟ್ಟೆಯನ್ನು ಪುನಃ ಪಡೆಯಲು ಆರಂಭಿಸಿದರು. 1896ರಲ್ಲಿ ಭಾರತೀಯ ಮಿಲ್ಲುಗಳು ಭಾರತದಲ್ಲಿ ಬಳಸಲಾದ ಒಟ್ಟು ಜವಳಿಯ ಶೇಕಡಾ 8, 1913ರಲ್ಲಿ ಶೇಕಡಾ 20, 1936ರಲ್ಲಿ ಶೇಕಡಾ 62 ಹಾಗೂ 1945ರಲ್ಲಿ ಶೇಕಡಾ 76ರಷ್ಟು ಜವಳಿಯನ್ನು ಪೂರೈಸಿದವು. ಹೀಗೆ, 1913–1938 ಅವಧಿಯಲ್ಲಿ ಭಾರತದ ತಯಾರಿಕಾ ಉತ್ಪನ್ನ ವಾರ್ಷಿಕ ಶೇಕಡಾ 5.6ರಂತೆ ಬೆಳೆಯಿತಲ್ಲದೇ, ಅದು ಜಾತಿಕ ಸರಾಸರಿಯಾದ ಶೇಕಡಾ 3.3ಗಿಂತಲೂ ಅಧಿಕವಾಗಿತ್ತು. ಬ್ರಿಟಿಷ್ ಸರ್ಕಾರವು 1920ರಿಂದ ಬೆಲೆ ರಕ್ಷಣೆಯನ್ನು ನೀಡಲಾರಂಭಿಸಿದ್ದು ಕೈಗಾರಿಕೋದ್ಯಮಿಗಳು ವ್ಯವಹಾರವನ್ನು ವಿಸ್ತರಿಸಲು ಮತ್ತು ವೈವಿಧ್ಯಮಯಗೊಳಿಸಲು ಸಹಾಯ ಮಾಡಿತು.

1947ರ ಸ್ವಾತಂತ್ರ್ಯದ ವೇಳೆಗಾಗಲೇ ಭಾರತೀಯ ಉದ್ಯಮಸಾಹಸಿಗಳು ಸಾಕಷ್ಟು ಸಮರ್ಥರಾದರಲ್ಲದೇ ದೇಶ ತೊರೆದ ಬ್ರಿಟಿಷರ ವ್ಯವಹಾರಗಳನ್ನು ಖರೀದಿಸುವಷ್ಟು ಸ್ಥಾನ ಪಡೆದರು. ಭಾರತದ ಒಟ್ಟು ದೇಶೀಯ ಉತ್ಪನ್ನದಲ್ಲಿ ಕೈಗಾರಿಕೆಯ ಪಾಲು 1913ರಲ್ಲಿ ಶೇ.3.18 ರಿಂದ 1947ರಲ್ಲಿ ಶೇ.7.5ಕ್ಕೆ ದುಪ್ಪಟ್ಟಾಯಿತು ಹಾಗೂ ರಫ್ತುಗಳಲ್ಲಿ ತಯಾರಕರ ಪಾಲು 1913 ಮತ್ತು 1947ರಲ್ಲಿ ಕ್ರಮವಾಗಿ ಶೇ.22.4ರಿಂದ ಶೇ.30ಕ್ಕೆ ಏರಿತು.

ಮೂಲ: ಬಿ.ಆರ್. ಟಾಮ್ಲಿಸನ್, ದಿ ಎಕಾನಮಿ ಆಫ್ ಮಾಡರ್ನ್ ಇಂಡಿಯಾ 1870–1970. ದಿ ನ್ಯೂ ಕೇಂಬ್ರಿಡ್ಜ್ ಹಿಸ್ಟ್ರಿ ಆಫ್ ಇಂಡಿಯಾ, ಭಾಗ 3.3, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, 1996.

**ಸಿ) ವಿಭಾಗ –2**

ನೀವೇ ಪ್ರಯತ್ನಿಸಿ

**ಈ ಕೆಳಗಿನ ಪ್ರತಿಯೊಂದೂ ಸಹ ಆರ್ಥಿಕ ಚಟುವಟಿಕೆಯೇ ಎಂಬುದನ್ನು ತಿಳಿಸಿ:**

**1. ತನ್ನ ಸ್ವಂತ ಬಳಕೆಗಾಗಿ ರೈತಮಹಿಳೆಯೊಬ್ಬಳು ಅಕ್ಕಿ ಬೆಳೆಯುವುದು.** ☐

**2. ಕಾರ್ಖಾನೆಯ ಮಾಲೀಕರೊಬ್ಬರು ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ಶಾಲಾ ಬ್ಯಾಗುಗಳನ್ನು ಉತ್ಪಾದಿಸುವುದು.** ☐

**3. ಹೆಚ್ಚು ಸಂದಣಿಯಿರುವ ಟ್ರಾಫಿಕ್ ಜಾಗವೊಂದರಲ್ಲಿ ವ್ಯಕ್ತಿಯೊಬ್ಬ ಭಿಕ್ಷೆ ಬೇಡುವುದು.** ☐

**4. ಉದ್ಯೋಗದಾತನ ಮನೆಯಲ್ಲಿ ಮನೆಗೆಲಸದ ಸಹಾಯಕನ ದಿನಗೆಲಸದ ಸೇವೆಗಳು** ☐

**5. ಮನೆಯ ದಿನಗೆಲಸ ಮಾಡುವ ಗೃಹಿಣಿಯ ಸೇವೆಗಳು** ☐

**ಡಿ) ಪುಟ 10 ಮತ್ತು 11ರಲ್ಲಿರುವ "1.7 ವಾಣಿಜ್ಯ" – ಈ ಶೀರ್ಷಿಕೆಯ ವಿವರಣೆಗಳ ನಂತರ ಮೇಕ್ ಇನ್ ಇಂಡಿಯಾ ಚಿತ್ರ ಮತ್ತು ವಿವರಣೆ ಸೇರ್ಪಡೆಯಾಗಿದೆ:**

'ಮೇಕ್ ಇನ್ ಇಂಡಿಯಾ'ವು, ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಭಾರತದಲ್ಲೇ ತಯಾರಿಸುವಂತೆ ಪ್ರೋತ್ಸಾಹಿಸಲು ಭಾರತ ಸರ್ಕಾರವು 25, ಸೆಪ್ಟೆಂಬರ್ 2014ರಲ್ಲಿ ಜಾರಿಗೊಳಿಸಲಾದ ಕಾರ್ಯಕ್ರಮವಾಗಿದೆ. ಮೇಕ್ ಇನ್ ಇಂಡಿಯಾ ಕಾರ್ಯಕ್ರಮದ ಹಿಂದಿನ ಪ್ರಮುಖ

ಉದ್ದೇಶಗಳು ಈ ಮುಂದೆ ನೀಡಿರುವ ಆರ್ಥಿಕತೆಯ 25 ವಲಯಗಳಲ್ಲಿ ಉದ್ಯೋಗ ಸೃಷ್ಟಿ ಮತ್ತುಕೌಶಲ್ಯ ವರ್ಧನೆಗಳನ್ನು ಸಾಧಿಸುವುದಾಗಿದೆ.

| | | |
|---|---|---|
| ಮೋಟಾರುವಾಹನ | ಮೋಟಾರುವಾಹನ ಬಿಡಿಭಾಗಗಳು | ನಾಗರಿಕ ವಿಮಾನಯಾನ |
| ಜೈವಿಕ ತಂತ್ರಜ್ಞಾನ | ರಾಸಾಯನಿಕಗಳು | ನಿರ್ಮಾಣ |
| ರಕ್ಷಣಾ ತಯಾರಿಕೆ | ವಿದ್ಯುತ್ ಚಾಲಿತ ಯಂತ್ರಗಳು | ವಿದ್ಯುನ್ಮಾನ ವ್ಯವಸ್ಥೆಗಳು |
| ಆಹಾರ ಸಂಸ್ಕರಣೆ | ಮಾಹಿತಿ ತಂತ್ರಜ್ಞಾನ ಮತ್ತು | ಚರ್ಮ |
| ಮಾಧ್ಯಮ ಮತ್ತು ಮನೋರಂಜನೆ | ವ್ಯವಹಾರ ಪ್ರಕ್ರಿಯೆ ನಿರ್ವಹಣೆ | ತೈಲ ಮತ್ತು ಅನಿಲ |
| ಔಷಧ ಉತ್ಪನ್ನಗಳು | ಗಣಿಗಾರಿಕೆ | ರೈಲ್ವೇ |
| ನವೀಕರಿಸಬಹುದಾದ ಇಂಧನ | ಬಂದರು ಮತ್ತು ಸಾಗರಯಾನ | ಬಾಹ್ಯಾಕಾಶ ಮತ್ತು ಖಗೋಳ |
| ಜವಳಿ ಮತ್ತು ಸಿದ್ಧ ಉಡುಪುಗಳು | ರಸ್ತೆಗಳು ಮತ್ತು ಹೆದ್ದಾರಿಗಳು | ವಿಜ್ಞಾನ |
| ದೇಹಧಾರ್ಢ್ಯ | ಶಾಖೋತ್ಪನ್ನ ಇಂಧನ | ಪ್ರವಾಸೋದ್ಯಮ ಮತ್ತು ಅತಿಥಿ |
| | | ಸತ್ಕಾರ |

**ಇ) ಪುಟ ಸಂಖ್ಯೆ 23 ರಲ್ಲಿರುವ "ಅಭ್ಯಾಸಗಳು" – ಇಲ್ಲಿ ಕೆಳಗಿನ ಪ್ರಶ್ನೆಗಳು ಸೇರ್ಪಡೆಯಾಗಿವೆ:**

**ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು**

**1 ಪ್ರಾಚೀನ ಭಾರತದ ಯಾವುದಾದರೂ ಐದು ಪ್ರಮುಖ ವಾಣಿಜ್ಯ ನಗರಗಳನ್ನು ಪಟ್ಟಿಮಾಡಿ.**

**2 ಹುಂಡಿ ಎಂದರೇನು?**

**3 ಪ್ರಾಚೀನ ಭಾರತದಲ್ಲಿನ ಪ್ರಮುಖ ರಫ್ತು ಮತ್ತು ಆಮದುಗಳನ್ನು ಪಟ್ಟಿಮಾಡಿ.**

4 ಪ್ರಾಚೀನ ಕಾಲದಲ್ಲಿ ವರ್ತಕರು ಬಳಸುತ್ತಿದ್ದ ವಿವಿಧ ಪ್ರಕಾರಗಳ ಹುಂಡಿಗಳು ಯಾವುದಾಗಿದ್ದವು?

5 ಕಡಲ ತೀರದ ವ್ಯಾಪಾರವನ್ನು ಏನೆಂದು ಅರ್ಥೈಸಿಕೊಂಡಿರುವಿರಿ?

ದೀರ್ಘ ಉತ್ತರದ ಪ್ರಶ್ನೆಗಳು

1 ಭಾರತ ಉಪಖಂಡದಲ್ಲಿದ್ದ ದೇಶೀಯ ಬ್ಯಾಂಕಿಂಗ್ ವ್ಯವಸ್ಥೆಯ ಬೆಳವಣಿಗೆಯನ್ನು ಚರ್ಚಿಸಿ.

ನಿಯೋಜಿತ ಕಾರ್ಯಗಳು:

1. . . . . . . .
2. ಕ್ರಿ.ಶ. 1 ರಿಂದ 17ನೇ ಶತಮಾನದವರೆಗಿನ ವ್ಯಾಪಾರ ಮತ್ತು ವಾಣಿಜ್ಯದ ಅಭಿವೃದ್ಧಿಯ ಕುರಿತು ಒಂದು ನಿಯೋಜಿತ ಕಾರ್ಯದ ವರದಿ ತಯಾರಿಸಿ.
3. ಅರ್ಥವ್ಯವಸ್ಥೆಯಲ್ಲಿ ಮೇಕ್ ಇನ್ ಇಂಡಿಯಾವನ್ನು ಕೇಂದ್ರೀಕರಿಸುವ ಯಾವುದಾದರೂ ಐದು ವಲಯಗಳ ಕುರಿತು ಮಾಹಿತಿ ಸಂಗ್ರಹಿಸಿ. ಕಳೆದ ಎರಡು ವರ್ಷಗಳಲ್ಲಿ ಈ ವಲಯಗಳಲ್ಲಾಗಿರುವ ಹೂಡಿಕೆಗಳ ಮೊತ್ತವನ್ನು ಕಂಡುಹಿಡಿಯಿರಿ. ಈ ವಲಯಗಳಲ್ಲಿ ಹೂಡಿಕೆದಾರರು ಆಸಕ್ತಿ ಹೊಂದುವುದನ್ನು ಸಾಧ್ಯವಾಗಿಸಿರುವ ಕಾರಣಗಳು ಯಾವುವು? ನಿಮ್ಮ ವರದಿಯನ್ನು ಈ ನಮೂನೆಯಲ್ಲಿ ಸಲ್ಲಿಸಿ.

| ವಲಯ | ಮೊದಲ ವರ್ಷದಲ್ಲಿ ಹೂಡಿಕೆ | ಎರಡನೇ ವರ್ಷದಲ್ಲಿ ಹೂಡಿಕೆ | ಬದಲಾವಣೆಗೆ ಕಾರಣಗಳು |
|---|---|---|---|
| | | | |
| | | | |

## 3. ಬಿಟ್ಟಿರುವುದು:

## 1. ಪುಟ ಸಂಖ್ಯೆ 6 ರಲ್ಲಿರುವ ಈ ಕೆಳಗಿನ ಪಠ್ಯವನ್ನು ಕೈಬಿಡಲಾಗಿದೆ:

ವ್ಯವಹಾರವು ಆರ್ಥಿಕ ಚಟುವಟಿಕೆಯಾಗಿದ್ದು, ಲಾಭಗಳಿಸುವ ಮುಖ್ಯ ಉದ್ದೇಶದಿಂದ, ಸರಕು ಮತ್ತು ಸೇವೆಗಳ ಉತ್ಪಾದನೆ ಅಥವಾ ಖರೀದಿ ಮತ್ತು ಮಾರಾಟ ಹಾಗೂ ಸರಬರಾಜಿಗೆ ಸಂಬಂಧಿಸಿದೆ. ವ್ಯವಹಾರ ಚಟುವಟಿಕೆಯಲ್ಲಿ ನಿರತರಾಗಿರುವ ವ್ಯಕ್ತಿಗಳು ಲಾಭದ ರೂಪದಲ್ಲಿ ಆದಾಯ ಗಳಿಸುತ್ತಾರೆ.

ವೃತ್ತಿಯು, ಕೆಲವು ವ್ಯಕ್ತಿಗಳು ತಮ್ಮ ಕಸುಬುಗಳಲ್ಲಿ ವಿಶೇಷ ಜ್ಞಾನ ಮತ್ತು ಕೌಶಲ್ಯವನ್ನು ಬಳಸಿ ಸಲ್ಲಿಸುವ ಸೇವೆ ಅಥವಾ ಚಟುವಟಿಕೆಗಳನ್ನು ಒಳಗೊಂಡಿದೆ. ಸಾಮಾನ್ಯವಾಗಿ ಇಂತಹ ಚಟುವಟಿಕೆಗಳು ಸಂಬಂಧಿಸಿದ ವೃತ್ತಿ ಸಂಸ್ಥೆಗಳು ಜಾರಿಗೊಳಿಸಿದ ಮಾರ್ಗದರ್ಶಿ ಸೂತ್ರ ಅಥವಾ ನೀತಿ ಸಂಹಿತೆಗಳಿಗೆ ಒಳಪಟ್ಟಿರುತ್ತವೆ. ವೃತ್ತಿ ಚಟುವಟಿಕೆಗಳಲ್ಲಿ ನಿರತರಾಗಿರುವವರನ್ನು ವೃತ್ತಿಪರರು ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ವೈದ್ಯರು ವೈದ್ಯಕೀಯ ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾರೆ ಮತ್ತು ವೈದ್ಯಕೀಯಕ್ಕೆ ಸಂಬಂಧಿಸಿದ ವೃತ್ತಿ ಸಂಸ್ಥೆಯಾದ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ

ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ. ಅದೇ ರೀತಿಯಲ್ಲಿ ವಕೀಲರು ವಕೀಲಿ ವೃತ್ತಿಯಲ್ಲಿ ನಿರತರಾಗಿರುತ್ತಾರೆ ಮತ್ತು ಬಾರ್ ಕೌನ್ಸಿಲ್ ಆಫ್ ಇಂಡಿಯಾದ ನಿಯಂತ್ರಣಕ್ಕೆ ಒಳಪಟ್ಟಿರುತ್ತಾರೆ ಮತ್ತು ಸನ್ನದು ಲೆಕ್ಕಿಗರು (ಚಾರ್ಟರ್ಡ್ ಅಕೌಂಟೆಂಟ್‌ಗಳು) ಲೆಕ್ಕ ಪತ್ರ ವೃತ್ತಿಗೆ ಸಂಬಂಧಪಟ್ಟವರಾಗಿದ್ದಾರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ.

ಉದ್ಯೋಗವು ಜೀವನ ನಿರ್ವಹಣೆಯ ಕಸುಬಾಗಿದ್ದು, ಇಲ್ಲಿ ಕೆಲವು ವ್ಯಕ್ತಿಗಳು, ಇತರರ ಸೂಚನೆಗೆ ಅನುಗುಣವಾಗಿ ಕೆಲಸಗಳನ್ನು ನಿರ್ವಹಿಸಿ, ಪ್ರತಿಫಲವಾಗಿ ಸಂಭಾವನೆಯನ್ನು ಪಡೆಯುತ್ತಾರೆ. ಬೇರೆ ವ್ಯಕ್ತಿಗಳಿಂದ ಉದ್ಯೋಗಕ್ಕೆ ನೇಮಿತರಾದವರನ್ನು ಉದ್ಯೋಗಿಗಳು ಎಂದು ಕರೆಯಲಾಗುತ್ತದೆ. ಆದುದರಿಂದ ಕಾರ್ಖಾನೆಗಳಲ್ಲಿ ದುಡಿದು ಕೂಲಿ ಅಥವಾ ಸಂಬಳವನ್ನು ಪ್ರತಿಫಲವಾಗಿ ಪಡೆಯುವ ಜನರನ್ನು ಕಾರ್ಖಾನೆಯ ಉದ್ಯೋಗಿಗಳೆಂದು ಹೇಳಲಾಗುತ್ತದೆ. ಹಾಗೆಯೇ ಬ್ಯಾಂಕು, ವಿಮಾಕಂಪನಿಗಳು ಅಥವಾ ಸರ್ಕಾರಿ ಕಛೇರಿಗಳಲ್ಲಿ ವ್ಯವಸ್ಥಾಪಕರಾಗಿ, ಸಹಾಯಕರಾಗಿ, ಗುಮಾಸ್ತರಾಗಿ, ಜವಾನರಾಗಿ ಅಥವಾ ಭದ್ರತಾ ರಕ್ಷಕರಾಗಿ ಕಾರ್ಯನಿರ್ವಹಿಸುವವರು ಸಂಬಂಧಿಸಿದ ಸಂಸ್ಥೆಗಳ ಉದ್ಯೋಗಿಗಳಾಗಿರುತ್ತಾರೆ.

2) ಪ್ರಮುಖ ಪದಗಳು, ಸಾರಾಂಶ ಮತ್ತು ಬಹು ಆಯ್ಕೆ ಪ್ರಶ್ನೆಗಳನ್ನು ಕೈಬಿಡಲಾಗಿದೆ.

## ಅಧ್ಯಾಯ 2

## ವ್ಯವಹಾರ ಸಂಘಟನೆ ಪ್ರಕಾರಗಳು

### ಎ) ಬದಲಾಗಿರುವುದು

### 1) ಪುಟ ಸಂಖ್ಯೆ 48 ರಲ್ಲಿರುವ ಕೋಷ್ಟಕ

**ಫಾರ್ಚ್ಯೂನ್ ಗ್ಲೋಬಲ್ 500 ಸಂಸ್ಥೆಗಳ ಒಕ್ಕೂಟದಲ್ಲಿ ಭಾರತೀಯ ಕಂಪನಿಗಳು**

Indian Companies in League of FORTUNE GLOBAL 500 Oganisations

| ಕಂಪನಿ | ಗ್ಲೋಬಲ್ 500 ಸ್ಥಾನ | ಭಾರತದಲ್ಲಿ ಸ್ಥಾನ | ಆದಾಯ(ಮಿಲಿಯನ್$) | ಜಾಲತಾಣ |
|---|---|---|---|---|
| ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ | 161 | 1 | 54,711 | www.iocl.com |
| ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ | 215 | 2 | 43,437 | www.ril..com |

| | | | | |
|---|---|---|---|---|
| ಟಾಟಾ ಮೋಟಾರ್ಸ್ ಲಿಮಿಟೆಡ್ | 226 | 3 | 42,092 | www.tatamotors.com |
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 232 | 4 | 41,681 | www.sbi.co.in |
| ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ | 350 | 5 | 20,082 | www.bharathpetroleum.in |
| ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ | 367 | 6 | 28,820 | www.hindustanpetroleum.com |
| ರಾಜೇಶ್ ಎಕ್ಸ್‌ಪೋರ್ಟ್ಸ್ ಕಾರ್ಪೊರೇಷನ್ ಲಿಮಿಟೆಡ್ | 423 | 7 | 25,237 | www.rajeshindia.com |

*Source:Adapted from The Fortune Global 500, July 25, 2005.*

**ಬಿ) ಸೇರ್ಪಡೆಯಾಗಿರುವುದು:**

**ಯಾವುದೂ ಇಲ್ಲ.**

**ಸಿ) ಬಿಟ್ಟಿರುವುದು:**

**1) ಪುಟ ಸಂಖ್ಯೆ 46 ರಲ್ಲಿರುವ ಕೂಡು ಬಂಡವಾಳ ಸಂಸ್ಥೆಯ ಬಗ್ಗೆ ಪ್ರೊಫೆಸರ್ ಹ್ಯಾನೇಯವರು ನೀಡಿರುವ ವ್ಯಾಖ್ಯೆಯನ್ನು ಕೈ ಬಿಡಲಾಗಿದೆ.**

## ಅಧ್ಯಾಯ 3
## ಖಾಸಗಿ, ಸಾರ್ವಜನಿಕ ಮತ್ತು ಜಾಗತಿಕ ಉದ್ದಿಮೆಗಳು

**ಎ) ಬದಲಾಗಿರುವುದು:**


ಪುಟ ಸಂಖ್ಯೆ 88 ರಲ್ಲಿರುವ **ದೀರ್ಘ ಉತ್ತರ ಬಯಸುವ ಪ್ರಶ್ನೆಗಳಲ್ಲಿ** ಈ ಕೆಳಗಿನ ಪ್ರಶ್ನೆ ಬದಲಾಗಿದೆ:

5. ಜಂಟಿ ಉದ್ದಿಮೆಗಳು ಮತ್ತು ಸಾರ್ವಜನಿಕ ಖಾಸಗಿ ಪಾಲುದಾರಿಕೆಗಳಲ್ಲಿ ಪ್ರವೇಶಿಸುವುದರ ಪ್ರಯೋಜನಗಳೇನು?

**ಬಿ) ಸೇರ್ಪಡೆಯಾಗಿರುವುದು:**

**1) ಪುಟ 81 ರಲ್ಲಿರುವ** *"ಭಾರತದಲ್ಲಿ ವ್ಯವಹಾರ ನಿರ್ವಹಿಸಲು ಜಂಟಿ ಉದ್ದಿಮೆ ಕಂಪನಿಗಳು ಅತ್ಯುತ್ತಮ ಮಾರ್ಗವಾಗಿರುತ್ತದೆ. ಈ ಉದ್ದಿಮೆಗಳ ಸ್ಥಾಪನೆಗೆ ಯಾವುದೇ ಪ್ರತ್ಯೇಕ ಕಾನೂನಿನ ನಿಯಮಗಳು ಇರುವುದಿಲ್ಲ. ಭಾರತದಲ್ಲಿ ಸ್ಥಾಪನೆಯಾದ ಕಂಪನಿಗಳನ್ನು ಸ್ಥಳೀಯ ಕಂಪನಿಗಳಂತೆ ಪರಿಗಣಿಸಲಾಗುತ್ತದೆ."* **– ಈ ಪ್ಯಾರಾದ ನಂತರ ಈ ಕೆಳಗಿನ ಚಿತ್ರ ಹಾಗೂ ಮುಂದಿನ ಪಠ್ಯವನ್ನು ಸೇರ್ಪಡೆ ಮಾಡಲಾಗಿದೆ:**

**ಜಂಟಿ ಉದ್ದಿಮೆಗಳಲ್ಲಿ ಎರಡು ಪ್ರಕಾರಗಳಿವೆ:** ಕರಾರು ಆಧಾರಿತ ಜಂಟಿ ಉದ್ದಿಮೆಗಳು ಮತ್ತು ಈಕ್ವಿಟಿ ಆಧಾರಿತ ಜಂಟಿ ಉದ್ದಿಮೆಗಳು




1) ಕರಾರು ಆಧಾರಿತ ಜಂಟಿ ಉದ್ದಿಮೆ: ಕರಾರು ಆಧಾರಿತ ಜಂಟಿ ಉದ್ದಿಮೆಯಲ್ಲಿ ಹೊಸದಾಗಿ ಜಂಟಿ ಮಾಲೀಕತ್ವದ ಸಂಸ್ಥೆಯನ್ನು ಸೃಷ್ಟಿಸಲಾಗುವುದಿಲ್ಲ. ಇಲ್ಲಿ ಕೇವಲ ಜೊತೆಯಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಒಪ್ಪಂದವಿರುತ್ತದೆ. ಈ ಕರಾರಿನಲ್ಲಿ ಭಾಗವಹಿಸುವ ವ್ಯಕ್ತಿಗಳು ಮಾಲೀಕತ್ವದಲ್ಲಿ ಪಾಲನ್ನು ಹೊಂದುವುದಿಲ್ಲ. ತಮ್ಮ ನಿಯಂತ್ರಣವನ್ನು ಹೊಂದುತ್ತಾರೆ. ಪ್ರಾಂಚೈಸಿ ಸಂಬಂಧವು (Franchisee) ಕರಾರು ಆಧಾರಿತ ಜಂಟಿ ಉದ್ದಿಮೆಯ ಒಂದು ವಿಶಿಷ್ಟ ಉದಾಹರಣೆಯಾಗಿದೆ. ಇಂತಹ ಸಂಬಂಧದಲ್ಲಿನ ಪ್ರಮುಖ ಅಂಶಗಳೆಂದರೆ

ಎ) ಎರಡು ಅಥವಾ ಹೆಚ್ಚಿನ ಕಕ್ಷಿದಾರರು ವ್ಯವಹಾರವನ್ನು ಮುನ್ನೆಡುಸವ ಸಾಮಾನ್ಯ ಉದ್ದೇಶವನ್ನು ಹೊಂದಿರುತ್ತಾರೆ.

ಬಿ) ಪ್ರತಿಯೊಬ್ಬ ಕಕ್ಷಿದಾರರು ವ್ಯವಾಹರಕ್ಕೆ ಅಗತ್ಯವಾದ ಸಂಪನ್ಮೂಲವನ್ನು ತರುತ್ತಾನೆ/ಳೆ.

ಸಿ) ಪ್ರತಿಯೊಬ್ಬ ಕಕ್ಷಿದಾರರು ಜಂಟಿ ಉದ್ದಿಮೆಯ ಮೇಲೆ ಕೆಲಪ್ರಮಾಣದ ನಿಯಂತ್ರಣವನ್ನು ಹೊಂದಿರುತ್ತಾರೆ ಮತ್ತು

ಡಿ) ಈ ಜಂಟಿ ಉದ್ದಿಮೆಯ ಸಂಬಂಧವು ವಹಿವಾಟಿನಿಂದ ವಹಿವಾಟಿಗೆ ಸೀಮಿತವಾಗದೆ ಒಂದು ದೀರ್ಘಕಾಲ ಮುಂದುವರೆಯುವ ಸಂಬಂಧದ ಗುಣವನ್ನು ಹೊಂದಿದೆ.

2) ಈಕ್ವಿಟಿ ಆಧಾರಿತ ಜಂಟಿ ಉದ್ದಿಮೆ: ಈಕ್ವಿಟಿ ಆಧಾರಿತ ಜಂಟಿ ಉದ್ದಿಮೆಯಲ್ಲಿ ಇಬ್ಬರು ಅಥವಾ ಹೆಚ್ಚಿನ ಕಕ್ಷಿದಾರರ ಜಂಟಿ ಮಾಲೀಕತ್ವದಲ್ಲಿ ಆ ಕಕ್ಷಿದಾರರ ನಡುವಿನ ಒಪ್ಪಂದದ ಅನ್ವಯ ಪ್ರತ್ಯೇಕ ವ್ಯವಹಾರ ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆ. ಈ ರೀತಿಯ ಸಂದರ್ಭದಲ್ಲಿ ಪ್ರಮುಖ ಕಾರ್ಯನಿರ್ವಹಣಾ ಅಂಶವು ಇಬ್ಬರು ಅಥವಾ ಹೆಚ್ಚಿನ ಕಕ್ಷಿದಾರರ ಜಂಟಿ ಮಾಲೀಕತ್ವದಲ್ಲಿರುತ್ತದೆ. ಈಕ್ವಿಟಿ ಆಧಾರಿತ ಜಂಟಿ ಉದ್ದಿಮೆಯ ಮಾಲೀಕತ್ವದ ಪ್ರಕಾರವು ಕಂಪನಿ, ಪಾಲುದಾರಿಕಾ ಸಂಸ್ಥೆ, ದತ್ತಿಸಂಸ್ಥೆ, ನಿಯಮಿತ ಹೊಣೆಗಾರಿಕೆ ಪಾಲುದಾರಿಕೆ ಸಂಸ್ಥೆ, ಸಾಹಸಿ ಬಂಡವಾಳ ನಿಧಿ ಇತ್ಯಾದಿಗಳಾಗಿರಬಹುದು.

ಎ) ಇಲ್ಲಿ ಹೊಸದಾಗಿ ವ್ಯವಹಾರ ಸಂಸ್ಥೆಯನ್ನು ಸ್ಥಾಪಿಸುವ ಒಪ್ಪಂದ ಮಾಡಿಕೊಳ್ಳಬಹುದು ಅಥವಾ ಯಾವುದಾದರು ಒಬ್ಬ ಕಕ್ಷಿದಾರನು ಈಗಾಗಲೇ ಅಸ್ಥಿತ್ವದಲ್ಲಿರುವ ವ್ಯವಹಾರ ಸಂಸ್ಥೆಯ ಮಾಲೀಕತ್ವ ಪಡೆಯಲು ಒಪ್ಪಂದವಾಗಿರಬಹುದು.

ಬಿ) ಕರಾರಿನಲ್ಲಿ ಭಾಗವಹಿಸುವ ಕಕ್ಷಿದಾರರಲ್ಲಿ ಮಾಲೀಕತ್ವದ ಹಂಚಿಕೆಯು ಒಳಗೊಂಡಿದೆ.

ಸಿ) ಜಂಟಿ ಮಾಲೀಕತ್ವದ ಸಂಸ್ಥೆಯಲ್ಲಿ ವ್ಯವಹಾರದ ವ್ಯವಸ್ಥಾಪನೆಯ ಹಂಚಿಕೆಯಾಗಿರುತ್ತದೆ.

ಡಿ) ಬಂಡವಾಳ ಹೂಡಿಕೆ ಮತ್ತು ಇತರ ಹಣಕಾಸು ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಹಂಚಿಕೆಯಾಗುವ ಜವಾಬ್ದಾರಿಗಳು.

ಇ) ಒಪ್ಪಂದ ಪ್ರಕಾರ ಹಂಚಿಕೆಯಾಗುವ ಲಾಭ–ನಷ್ಟಗಳು.

**2) ಪುಟ ಸಂಖ್ಯೆ 82 ರಲ್ಲಿರುವ** *"ಜಂಟಿ ಉದ್ದಿಮೆಯು ಇಬ್ಬರು ಪಾಲುದಾರರಿಂದ ಸಹಿ ಮಾಡಲ್ಪಟ್ಟ ಒಡಂಬಡಿಕೆ ಪತ್ರದ ಪ್ರಕಾರ ಕಾರ್ಯನಿರ್ವಹಿಸುವುದಲ್ಲದೇ, ಈ ಒಡಂಬಡಿಕೆ ಪತ್ರವು ಜಂಟಿ ಉದ್ದಿಮೆ ಒಪ್ಪಂದಕ್ಕೆ ಆಧಾರವಾಗಿರುತ್ತದೆ. ಮುಂದಿನ ಹಂತದಲ್ಲಿ ಯಾವುದೇ ಕಾನೂನಿನ ತೊಂದರೆಗಳು ಬರುವುದನ್ನು ತಡೆಯಲು ಒಪ್ಪಂದದ ಕರಾರುಗಳನ್ನು ವಿವರವಾಗಿ ಚರ್ಚಿಸಿ ಮಾತುಕತೆ ನಡೆಸಬೇಕಾಗುತ್ತದೆ. ಮಾತುಕತೆಗಳು ಮತ್ತು ಕರಾರುಗಳು ಪಾಲುದಾರರ ಸಾಂಸ್ಕೃತಿಕ ಮತ್ತು ಕಾನೂನಿನ ಹಿನ್ನಲೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಜಂಟಿ ಉದ್ದಿಮೆ ಒಪ್ಪಂದವು ಆವಶ್ಯಕವಾದ ಸರ್ಕಾರದ ಎಲ್ಲಾ ಅನುಮತಿಗಳನ್ನು ಮತ್ತು ಪರವಾನಿಗೆಗಳನ್ನು ನಿಗದಿತ ಸಮಯದೊಳಗೆ ಪಡೆದುಕೊಳ್ಳುವ ಬಗ್ಗೆ ತಿಳಿಸಬೇಕಾಗುತ್ತದೆ."* **– ಈ ಪ್ಯಾರಾದ ನಂತರ ಈ ಕೆಳಗಿನ ಪಠ್ಯವನ್ನು ಸೇರ್ಪಡೆ ಮಾಡಲಾಗಿದೆ:**

**ಜಂಟಿ ಉದ್ದಿಮೆಗಳಿಗೆ ಉದಾಹರಣೆಗಳು:**

1) ಎವಿಎಲ್ ಆಯಿಲ್ ಇಂಡಿಯಾ ಪ್ರೈವೈಟ್ ಲಿಮಿಟೆಡ್.

ಸ್ಥಾಪನೆಯ ದಿನಾಂಕ: 4ನೇ ನವೆಂಬರ್ 1993.

ಜಂಟಿ ಉದ್ದಿಮೆದಾರರು: ಬಾಲ್ಮೇರ್ ಲಾವ್ರೀ ಮತ್ತು ಕಂಪನಿ ನಿಯಮಿತ. ಎನ್‌ವೈಸಿಜಿ, ಎಸ್‌ಎ, ಫ್ರಾನ್ಸ್

ಕಾರ್ಯನಿರ್ವಹಣಾ ಕ್ಷೇತ್ರಗಳು: ಖನಿಜ ಆಧಾರಿತ ಲೂಬ್ರಿಕೇಟಿಂಗ್ ಆಯಿಲ್, ರಕ್ಷಣೆ ಮತ್ತು ನಾಗರಿಕ ವಿಮಾನಯಾನ ಬಳಕೆಗಳು, ಗ್ರೀಸ್‌ಗಳು.

2) ಗ್ರೀನ್ ಗ್ಯಾಸ್ ನಿಯಮಿತ

ಸ್ಥಾಪನೆ ದಿನಾಂಕ: 07ನೇ ಅಕ್ಟೋಬರ್ 2005.

ಜಂಟಿ ಉದ್ದಿಮೆದಾರಕರು, ಗೇಲ್ ಇಂಡಿಯಾ ಲಿಮಿಟೆಡ್ ಮತ್ತು ಐಓಸಿಎಲ್.

ಕಾರ್ಯನಿರ್ವಹಣಾ ಕ್ಷೇತ್ರಗಳು: ಗ್ರಾಹಕರಿಗೆ ಸುರಕ್ಷತೆ ಮತ್ತು ವಿಶ್ವಾರ್ಹ ಪ್ರಾಕೃತಿ ಅನಿಲವನ್ನು ಒದಗಿಸುವುದು.

3) ದೆಹಲಿ ಎವಿಯೇಷನ್ ಫ್ಯೂಯೆಲ್ ಫೆಸಿಲಿಟಿ ಪ್ರೈವೇಟ್ ಲಿಮಿಟೆಡ್

ಸ್ಥಾಪನೆ ದಿನಾಂಕ: 28ನೇ ಮಾರ್ಚ್ 2010

ಜಂಟಿ ಉದ್ದಿಮೆಯ ಧಾರಕರು: ಬಿಪಿಸಿಎಲ್ ಮತ್ತು ಡಿಐಎಎಲ್.

ಕಾರ್ಯಾಚರಣೆಯ ಕ್ಷೇತ್ರಗಳು: ನಿರ್ಮಾಣ ವ್ಯವಸ್ಥಾಪನಾ ನಿರ್ವಹಣೆ, ಅಭಿವೃದ್ಧಿಗೊಳಿಸುವಿಕೆ, ವಿನ್ಯಾಸಗೊಳಿಸುವಿಕೆ. ಈ ಕಂಪನಿಯು ದೆಹಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ನಡುವಿನ ಜಂಟಿ ಉದ್ದಿಮೆಯಾಗಿ ಸ್ಥಾಪಿತವಾಗಿದ್ದು, ಇದು ವಿಮಾನ ನಿಲ್ದಾಣಗಳ ನಿರ್ವಹಣೆ, ವಿನ್ಯಾಸಗೊಳಿಸುವಿಕೆ ಮತ್ತು ಆಧುನೀಕರಣಗೊಳಿಸುವುದಕ್ಕಾಗಿ ಸ್ಥಾಪನೆಯಾಗಿದೆ.

**3) ಪುಟ ಸಂಖ್ಯೆ 83 ರಲ್ಲಿರುವ "** ***ಎಫ್) ಸ್ಥಾಪಿತ ಮುದ್ರೆಯ ಹೆಸರು*** *(Established Brand Name): ಎರಡು ವ್ಯವಹಾರ ಸಂಸ್ಥೆಗಳು ಜಂಟಿ ಉದ್ದಿಮೆಯನ್ನು ಸ್ಥಾಪಿಸಿದಾಗ ಒಬ್ಬ ಪಾಲುದಾರನು ಈಗಾಗಲೇ ಮಾರುಕಟ್ಟೆಯಲ್ಲಿ ನೆಲೆಗೊಂಡಿರುವ ಇನ್ನೊಬ್ಬ ಪಾಲುದಾರನ ಕೀರ್ತಿಮೌಲ್ಯ ಅಥವಾ ಪ್ರತಿಷ್ಠೆಯಿಂದ ಅನುಕೂಲತೆ ಹೊಂದುತ್ತಾನೆ. ಜಂಟಿ ಉದ್ದಿಮೆಯನ್ನು ಭಾರತೀಯ ಕಂಪನಿಯೊಂದಿಗೆ ಭಾರತದಲ್ಲಿ ಸ್ಥಾಪನೆ ಮಾಡಿದ್ದರೆ, ಭಾರತೀಯ ಕಂಪನಿಯು ತನ್ನ ಸರಕುಗಳನ್ನು ಬೇಡಿಕೆಯನ್ನು ಹೆಚ್ಚಿಸಲು ಅಥವಾ ವಿತರಣೆಯ ವ್ಯವಸ್ಥೆಗಾಗಿ ಯಾವುದೇ ಸಮಯ ಅಥವಾ ಹಣವನ್ನು ವ್ಯಯಮಾಡಬೇಕಾದ ಅವಶ್ಯಕತೆ ಇರುವುದಿಲ್ಲ. ಮುಂದೆ ಬಿಡುಗಡೆ ಮಾಡಬೇಕಾದ ಸರಕುಗಳಿಗೆ ಮಾರುಕಟ್ಟೆಯು ಸಿದ್ಧವಾಗಿರುತ್ತದೆ. ಈ ಪ್ರಕ್ರಿಯೆಯು ಬಹಳಷ್ಟು ಹಣದ ಹೂಡಿಕೆಯನ್ನು ಉಳಿತಾಯ ಮಾಡುತ್ತದೆ."* **– ಈ ಪಠ್ಯದ ತರುವಾಯ ಈ ಕೆಳಗಿನ ಪಠ್ಯಭಾಗವನ್ನು ಸೇರ್ಪಡೆ ಮಾಡಲಾಗಿದೆ:**

**3.7 ಸಾರ್ವಜನಿಕ ಖಾಸಗಿ ಪಾಲುದಾರಿಕೆ:**

ಸಾರ್ವಜನಿಕ ಖಾಸಗಿ ಪಾಲುದಾರಿಕಾ ಮಾದರಿಯು ಸಾರ್ವಜನಿಕ ಮತ್ತು ಖಾಸಗಿ ಪಾಲುದಾರರ ನಡುವೆ ಸೂಕ್ತ ರೀತಿಯಲ್ಲಿ ಕಾರ್ಯಗಳನ್ನು, ಬಾಧ್ಯತೆಗಳನ್ನು ಮತ್ತು ನಷ್ಟಭಯಗಳನ್ನು ಹಂಚುತ್ತವೆ. ಸಾರ್ವಜನಿಕ ಖಾಸಗಿ ಪಾಲುದಾರಿಕೆಯಲ್ಲಿ ಸಚಿವ

ಖಾತೆಗಳು, ಸರ್ಕಾರಿ ಇಲಾಖೆಗಳು, ನಗರಪಾಲಿಕೆಗಳು ಅಥವಾ ರಾಜ್ಯ ಸರ್ಕಾರ ಮಾಲೀಕತ್ವದ ಉದ್ದಿಮೆಗಳು ಮೊದಲಾದ ಸರ್ಕಾರಿ ಸಂಸ್ಥೆಗಳು ಸಾರ್ವಜನಿಕ ಪಾಲುದಾರರಾಗಿರುತ್ತಾರೆ. ಸ್ಥಳೀಯ ಅಥವಾ ವಿದೇಶಿ (ಅಂತರರಾಷ್ಟ್ರೀಯ) ಮತ್ತು ಈ ಯೋಜನೆಗೆ ಸಂಬಂಧಿಸಿದಂತೆ ತಾಂತ್ರಿಕ ಅಥವಾ ಹಣಕಾಸಿನ ಪರಿಣತಿಯನ್ನು ಹೊಂದಿರುವ ವ್ಯವಹಾರ ಸಂಸ್ಥೆಗಳು ಮತ್ತು ಹೂಡಿಕೆದಾರರನ್ನು ಒಳಗೊಂಡಂತೆ ಖಾಸಗಿ ಪಾಲುದಾರರಾಗಿರಬಹುದು. ಸಾರ್ವಜನಿಕ ಖಾಸಗಿ ಪಾಲುದಾರಿಕೆಯು ಯೋಜನೆಯಿಂದ ನೇರವಾಗಿ ಪ್ರಭಾವಿತರಾಗುವ ಹಿತಾಸಕ್ತಿಯುಳ್ಳ ಸರ್ಕಾರೇತರ ಸಂಘಟನೆಗಳು ಮತ್ತು ಅಥವಾ ಸಮುದಾಯ ಆಧಾರಿತ ಸಂಘಟನೆಗಳನು ಸಹ ಒಳಗೊಳ್ಳುತ್ತವೆ. ಆದುದರಿಂದ ಸಾರ್ವಜನಿಕ ಖಾಸಗಿ ಪಾಲುದಾರಿಕೆಯನ್ನು ಮೂಲಭೂತ ಸೌಕರ್ಯ ಮತ್ತು ಇತರ ಸೇವೆಗಳ ಸಂದರ್ಭದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ನಡುವಿನ ಸಂಬಂಧವೆಂದು ವ್ಯಾಖ್ಯಾನಿಸಲಾಗಿದೆ. ಈ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮಾದರಿಯಡಿಯಲ್ಲಿ ಸಾರ್ವಜನಿಕ ವಲಯವು ಬಹು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ ಮತ್ತು ಸಾಮಾಜಿಕ ಬದ್ಧತೆಗಳನ್ನು ಪೂರೈಸಲಾಗಿದೆ ಹಾಗೂ ವಲಯ ಸುಧಾರಣೆ ಮತ್ತು ಸಾರ್ವಜನಿಕ ಹೂಡಿಕೆಯನ್ನು ಯಶಸ್ವಿಯಾಗಿ ಪೂರೈಸಲಾಗಿದೆ ಎಂದು ಖಚಿತಪಡಿಸುತ್ತದೆ. ಸಾರ್ವಜನಿಕ ಖಾಸಗಿ ಪಾಲುದಾರಿಕೆಯು ಸರ್ಕಾರದ ಕೊಡುಗೆಯು ಹೂಡಿಕೆಗಾಗಿ ಬಂಡವಾಳ ಮತ್ತು ಪಾಲುದಾರಿಕೆಯ ಬೆಂಬಲಕ್ಕಾಗಿ ಆಸ್ತಿಗಳ ವರ್ಗಾವಣೆ ಹಾಗೂ ಜೊತೆಯಲ್ಲಿ ಸಾಮಾಜಿಕ ಜವಾಬ್ದಾರಿ, ಪರಿಸರದ ಜಾಗೃತಿ ಮತ್ತು ಸ್ಥಳೀಯ ಜ್ಞಾನದ ರೂಪದಲ್ಲಿ ಇರುತ್ತದೆ. ಈ ಪಾಲುದಾರಿಕೆಯಲ್ಲಿ ಖಾಸಗಿ ವಲಯದ ಪಾತ್ರವು ಕಾರ್ಯಾಚರಣೆಯನ್ನು ನಡೆಸಲು, ತನ್ನ ಪರಿಣತಿಯನ್ನು ಬಳಸಿಕೊಳ್ಳುವುದು, ಕಾರ್ಯಗಳನ್ನು ನಿರ್ವಹಿಸುವುದು ಮತ್ತು ವ್ಯವಹಾರವನ್ನು ದಕ್ಷತೆಯಿಂದ ಮುನ್ನಡೆಸಲು ಆವಿಷ್ಕಾರಗಳನ್ನು ಕೈಗೊಳ್ಳುವುದಾಗಿರುತ್ತದೆ.

ಸಾರ್ವಜನಿಕ ಖಾಸಗಿ ಪಾಲುದಾರಿಕೆಯು ಪ್ರಪಂಚದಾದ್ಯಂತ ಪೂರ್ಣಗೊಳಿಸಿದ ವಲಯಗಳಲ್ಲಿ ಇಂಧನ ಉತ್ಪಾದನೆ ಮತ್ತು ಹಂಚಿಕೆ, ನೀರು ಮತ್ತು ನೈರ್ಮಲ್ಯ ನಿರಾಕರಣೆ, ವಿಲೇವಾರಿ ಪೈಪ್‌ಲೈನ್‌ಗಳು, ಆಸ್ಪತ್ರೆಗಳು, ಶಾಲಾ ಕಟ್ಟಡಗಳು ಮತ್ತು ಬೋಧನಾ ಸೌಲಭ್ಯಗಳು ಮತ್ತು ಕ್ರೀಡಾಂಗಣಗಳು, ವಾಯುಸಾರಿಗೆ, ನಿಯಂತ್ರಣ, ಬಂದೀಖಾನೆ, ರೈಲ್ವೆಗಳು, ರಸ್ತೆಗಳು, ಬಿಲ್ಲಿಂಗ್ ಮತ್ತು ಇತರ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳು ಹಾಗೂ ಗೃಹ ನಿರ್ಮಾಣಗಳು ಸೇರಿವೆ.

**ಸಾರ್ವಜನಿಕ ಖಾಸಗಿ ಪಾಲುದಾರಿಕೆ ಮಾದರಿ**

**ಲಕ್ಷಣಗಳು**

- ಸಾರ್ವಜನಿಕ ಸೌಲಭ್ಯವನ್ನು ನಿರ್ಮಿಸಲು ಮತ್ತು ವಿನ್ಯಾಸಗೊಳಿಸಲು ಖಾಸಗಿ ಕಕ್ಷಿದಾರರೊಂದಿಗೆ ಒಪ್ಪಂದ.
- ಸೌಲಭ್ಯಕ್ಕೆ ಹಣಕಾಸು ಒದಗಿಸುವುದು ಮತ್ತು ಮಾಲೀಕತ್ವವು ಸಾರ್ವಜನಿಕ ವಲಯದ್ದಾಗಿರುತ್ತದೆ.
- ವಿನ್ಯಾಸ ಮತ್ತು ನಿರ್ಮಾಣ ನಷ್ಟಭಯದ ವರ್ಗಾವಣೆಯು ಪ್ರಮುಖಾಂಶವಾಗಿರುತ್ತದೆ.

**ಅನ್ವಯಿಸುವಿಕೆ**

- ಸಣ್ಣ ಕಾರ್ಯಾಚರಣೆ ಅವಶ್ಯಕತೆ ಇರುವ ಬಂಡವಾಳ ಯೋಜನೆಗಳಿಗೆ ಸೂಕ್ತವಾಗುತ್ತದೆ.

❖ ಕಾರ್ಯಾಚರಣೆ ಹೊಣೆಗಾರಿಕೆಯನ್ನು ತನ್ನಲ್ಲೇ ಉಳಿಸಿಕೊಳ್ಳಲು ಸಾರ್ವಜನಿಕ ವಲಯವು ಇಚ್ಛಿಸುವ ಬಂಡವಾಳ ಯೋಜನೆಗಳಿಗೆ ಸೂಕ್ತವಾಗುತ್ತದೆ.

**ಸಾಮರ್ಥ್ಯ**

❖ ವಿನ್ಯಾಸ ಮತ್ತು ನಿರ್ಮಾಣ ನಷ್ಟಭಯದ ವರ್ಗಾವಣೆ.

❖ ಯೋಜನೆಯನ್ನು ಉತ್ತೇಜಿಸುವ ಸಂಭ್ಯಾವ್ಯತೆ.

**ದೌರ್ಬಲ್ಯಗಳು**

❖ ಪರಿಸರಾತ್ಮಕ ಪರಿಗಣನೆಗಳಿಗೆ ಸಂಬಂಧಿಸಿದಂತೆ ಒಪ್ಪಂದದ ಭಾಗೀದಾರರ ನಡುವಿನ ಸಂಘರ್ಷ ಸಾಧ್ಯತೆಗಳು.

❖ ಖಾಸಗಿ ಹಣಕಾಸನ್ನು ಆಕರ್ಷಿಸುವುದು ಸುಲಭವಲ್ಲ.

**ಉದಾಹರಣೆ**

❖ ಕುಂಡಲಿ ಮಾನೇಸರ್ ಎಕ್ಸ್‌ಪ್ರೆಸ್ ವೇ ಲಿಮಿಟೆಡ್. ಈ 135 ಕಿ.ಮೀ. ಉದ್ದದ ವೇಗದ ಹೆದ್ದಾರಿಗಾಗಿ ಭೂಮಿಯು ಸರ್ಕಾರದಿಂದ ನೀಡಲ್ಪಟ್ಟಿದ್ದು, ಭೂಮಿಯ ಮೇಲ್ಭಾಗದಲ್ಲಿ ಕಂಪನಿಯು ರಸ್ತೆಯನ್ನು ನಿರ್ಮಿಸಿದೆ.

**4) ಪುಟ ಸಂಖ್ಯೆ 84 ರಲ್ಲಿರುವ ಪ್ರಮುಖ ಪದಗಳು – ಈ ಪಟ್ಟಿಯಲ್ಲಿ ಸೇರ್ಪಡೆಯಾದ ಪದ – "ಸಾರ್ವಜನಿಕ ಖಾಸಗಿ ಪಾಲುದಾರಿಕೆ"**

**5) ಪುಟ ಸಂಖ್ಯೆ 87 ರಲ್ಲಿರುವ ಸಾರಾಂಶದಲ್ಲಿ ಸೇರ್ಪಡೆಯಾಗಿರುವುದು ಈ ಕೆಳಗಿನಂತಿದೆ:**

**ಸಾರ್ವಜನಿಕ ಖಾಸಗಿ ಪಾಲುದಾರಿಕೆ:** ಅಭಿವೃದ್ಧಿ ಯೋಜನೆಗಳ ಹಂಚಿಕೆ ಮತ್ತು ಪೂರ್ಣಗೊಳಿಸುವಿಕೆಗಾಗಿ ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ನಡುವೆ ಇರುವ ಒಂದು ಸಂಬಂಧವಾಗಿದೆ.

**6) ಇದೇ ಪುಟದಲ್ಲಿ ಬಹು ಆಯ್ಕೆ ಪ್ರಶ್ನೆಗಳಲ್ಲಿ ಈ ಕೆಳಗಿನ ಪ್ರಶ್ನೆ ಸೇರ್ಪಡೆಯಾಗಿದೆ:**

6. ಈಕ್ವಿಟಿ ಆಧಾರಿತ ಜಂಟಿ ಉದ್ದಿಮೆಯು ಒಳಗೊಳ್ಳದೇ ಇರುವುದು

ಅ) ಸಹಕಾರದ ಅಭಿವೃದ್ಧಿ ಬ) ಕಂಪನಿ

ಕ) ಪಾಲುದಾರಿಕೆ ಡ) ನಿಯಮಿತ ಹೊಣೆಗಾರಿಕೆ ಪಾಲುದಾರಿಕೆ

**7) ಪುಟ ಸಂಖ್ಯೆ 88 ರಲ್ಲಿರುವ ಸಂಕ್ಷಿಪ್ತ ಉತ್ತರದ ಪ್ರಶ್ನೆಗಳಲ್ಲಿ ಈ ಕೆಳಗಿನ ಪ್ರಶ್ನೆ ಸೇರ್ಪಡೆಯಾಗಿದೆ:**

7. ಸಾರ್ವಜನಿಕ ಖಾಸಗಿ ಪಾಲುದಾರಿಕೆಯ ಅರ್ಥವನ್ನು ಕೊಡಿರಿ.

**ಸಿ) ಬಿಟ್ಟಿರುವುದು:**

**1) ಪುಟ ಸಂಖ್ಯೆ 72 ರಲ್ಲಿರುವ ಬಾಕ್ಸ್ ಟೆಕ್ಸ್ಟ್ – ಭಾರತೀಯ ಸ್ಟೇಟ್ ಬ್ಯಾಂಕ್ – ಇದನ್ನು ಕೈಬಿಡಲಾಗಿದೆ.**

**2) ಪುಟ ಸಂಖ್ಯೆ 76 ರಲ್ಲಿರುವ ಬಾಕ್ಸ್ ಟೆಕ್ಸ್ಟ್ – ಭಾರತದಲ್ಲಿ ಖಾಸಗೀಕರಣ – ಇದನ್ನು ಕೈಬಿಡಲಾಗಿದೆ.**

**3) ಪುಟ ಸಂಖ್ಯೆ 80 ರಲ್ಲಿರುವ ಬಾಕ್ಸ್ ಟೆಕ್ಸ್ಟ್ – ಜಂಟಿ ಉದ್ದಿಮೆ–ಭಾರ್ತಿ ಮತ್ತು ಏರ್‌ಟೆಲ್ – ಇದನ್ನು ಕೈಬಿಡಲಾಗಿದೆ.**

**4) ಪುಟ ಸಂಖ್ಯೆ 81 ರಲ್ಲಿರುವ ಪಠ್ಯದ ಈ ಕೆಳಗಿನ ಭಾಗವನ್ನು ಕೈ ಬಿಡಲಾಗಿದೆ:**

*"ಜಂಟಿ ಉದ್ದಿಮೆ ಕಂಪನಿಯನ್ನು ಈ ಕೆಳಗೆ ತಿಳಿಸಿದ ವಿಧಾನಗಳ ಮೂಲಕ ಸ್ಥಾಪನೆ ಮಾಡಬಹುದು.*

*i) ಇಬ್ಬರು ಪಾಲುದಾರರು (ವ್ಯಕ್ತಿಗಳು ಅಥವಾ ಕಂಪನಿಗಳು) ಭಾರತದಲ್ಲಿ ಒಂದು ಕಂಪನಿಯನ್ನು ಸ್ಥಾಪಿಸಬಹುದು. ಒಬ್ಬ ಪಾಲುದಾರನ ವ್ಯವಹಾರವನ್ನು ಹೊಸ ಕಂಪನಿಗೆ ವರ್ಗಾವಣೆ ಮಾಡಲಾಗುತ್ತದೆ. ಈ ವರ್ಗಾವಣೆಯ ಮೌಲ್ಯಕ್ಕಾಗಿ ಹೊಸ ಕಂಪನಿಯು ಬಿಡುಗಡೆ ಮಾಡುವ ಶೇರುಗಳನ್ನು ಇನ್ನೊಂದು ಕಂಪನಿಯು ಪಡೆಯುತ್ತದೆ. ಹೊಸ ಕಂಪನಿಯು ಶೇರುಗಳ ಮೌಲ್ಯವನ್ನು ಹಣದ ಮೂಲಕ ಸಂದಾಯಮಾಡಬೇಕು.*

*ii) ಹೊಸ ವ್ಯವಹಾರವನ್ನು ಪ್ರಾರಂಭಿಸಿದರೆ ಇಬ್ಬರು ಪಾಲುದಾರರು ಜಂಟಿ ಉದ್ದಿಮೆಯ ಶೇರುಗಳ ಹಣವನ್ನು ಒಪ್ಪಂದದ ಅನುಪಾತದಲ್ಲಿ ಸಂದಾಯ ಮಾಡಬೇಕಾಗುತ್ತದೆ.*

*iii) ಭಾರತದಲ್ಲಿ ಕಾರ್ಯನಿರ್ವಹಿಸುವ ಕಂಪನಿಯ ಜೊತೆಗೆ ವ್ಯಕ್ತಿ ಅಥವಾ ಕಂಪನಿಯು ಸಂಯೋಗ ಹೊಂದಿ ಅದರ ವ್ಯವಹಾರವನ್ನು ಜೊತೆಯಾಗಿ ನಿರ್ವಹಿಸಬಹುದು. ಇತರ ಪಾಲುದಾರನು ಅನಿವಾಸಿ ಭಾರತೀಯ ಇಲ್ಲವೇ ಭಾರತೀಯ ಪ್ರಜೆಯಾಗಿರಬಹುದು. ಈತನು ಕಂಪನಿಯ ಶೇರುಗಳನ್ನು ಹಣ ಪಾವತಿಸಿ ಪಡೆಯಬೇಕಾಗುತ್ತದೆ. ಭಾರತದಲ್ಲಿ, ವಿದೇಶಿ ಪಾಲುದಾರನೊಂದಿಗೆ ಅಥವಾ ಅನಿವಾಸಿ ಭಾರತೀಯ(Non Resident Indians)ರೊಂದಿಗೆ ಸ್ಥಾಪನೆಯಾಗುವ ಎಲ್ಲಾ ಜಂಟಿ ಉದ್ದಿಮೆಗಳಿಗೆ ಸರ್ಕಾರದ ಅನುಮತಿಯು ಆವಶ್ಯಕವಾಗಿರುತ್ತದೆ. ನಿರ್ದಿಷ್ಟ ಸಂದರ್ಭಗಳನ್ನು ಅವಲಂಬಿಸಿ ಭಾರತಿಯ ರಿಸರ್ವ್ ಬ್ಯಾಂಕ್ ಅಥವಾ ವಿದೇಶಿ ಹೂಡಿಕೆ ಪ್ರವರ್ತನೆ ಮಂಡಳಿಯಿಂದ (Foreign Investment Promotion Board -FIPB) ಅನುಮತಿಯನ್ನು ಪಡೆದುಕೊಳ್ಳಬಹುದು.*

- *ಜಂಟಿ ಉದ್ದಿಮೆಯ ಸ್ಥಾಪನೆಯು ಸ್ವಯಂಚಾಲಿತ ಮಾರ್ಗ(automatic route)ದ ಪರಿಧಿಗೆ ಬಂದರೆ ಆಗ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯನ್ನು ಪಡೆಯುವುದು ಆವಶ್ಯಕವಾಗಿರುತ್ತದೆ.*

- *ಜಂಟಿ ಉದ್ದಿಮೆಯ ಸ್ಥಾಪನೆಯು ಸ್ವಯಂಚಾಲಿತ ಮಾರ್ಗದಲ್ಲಿರದ ಇತರ ವಿಶೇಷ ಸಂದರ್ಭಗಳಲ್ಲಿ FIPBಯ ಅನುಮತಿಯನ್ನು ಪಡೆಯಬೇಕಾಗುತ್ತದೆ.* "

5) **ಪುಟ ಸಂಖ್ಯೆ 88 ರಲ್ಲಿರುವ ಕಾರ್ಯಯೋಜನೆ – "***1. ಕಳೆದ 2–3 ವರ್ಷಗಳಲ್ಲಿ ಹೂಡಿಕೆ ಹಿಂತೆಗೆತ ಮಾಡಲು ಆಯ್ಕೆಮಾಡಿರುವ ಸಾರ್ವಜನಿಕ ವಲಯದ ಕಂಪನಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ. ಈ ನಿರ್ಧಾರದಿಂದ ಎದುರಾಗಿರುವ ವಿವಾದಗಳನ್ನು ಪರೀಕ್ಷಿಸಿರಿ. ಒಂದು ಯೋಜನಾ ವರದಿಯನ್ನು ತಯಾರಿಸಿ.*" **–ಇದನ್ನು ಕೈಬಿಡಲಾಗಿದೆ**

## ಅಧ್ಯಾಯ 4
## ವ್ಯವಹಾರ ಸೇವೆಗಳು

### ಎ) ಬದಲಾಗಿರುವುದು:


1) ಪುಟ ಸಂಖ್ಯೆ 114 ಮತ್ತು 115 ರಲ್ಲಿರುವ ಬಾಕ್ಸ್ ಟೆಕ್ಸ್ಟ್‌ನ ಶೀರ್ಷಿಕೆಯು "ಸಾಮಾನ್ಯ ವಿಮೆ" ಎಂದಿದ್ದುದು, "ವಿಮೆಯ ವಿವಿಧ ವಿಧಗಳು" ಎಂದು ಬದಲಾಗಿದೆ.


### ಬಿ) ಸೇರ್ಪಡೆಯಾಗಿರುವುದು:

**1) ಪುಟ 100 ರಲ್ಲಿರುವ ಇ–ಬ್ಯಾಂಕಿಂಗ್ ಪ್ರಯೋಜನಗಳಲ್ಲಿ ಈ ಕೆಳಗಿನ ಪ್ರಯೋಜನವನ್ನು ಮೊದಲನೆಯದಾಗಿ ಸೇರ್ಪಡೆ ಮಾಡಿದೆ:**

"ಇ–ಬ್ಯಾಂಕಿಂಗ್ ಡಿಜಿಟಲ್ ಪಾವತಿಯ ಅನುಕೂಲತೆಯನ್ನು ಒದಗಿಸುತ್ತದೆ ಮತ್ತು ಹಣಕಾಸಿನ ತಃಖ್ತೆಗಳಲ್ಲಿ ಪಾರದರ್ಶಕತೆಯನ್ನು ಪ್ರವರ್ತಿಸುತ್ತದೆ."

**2) ಪುಟ 100 ಮತ್ತು 101 ರಲ್ಲಿರುವ ಇ–ಬ್ಯಾಂಕಿಂಗ್ ನ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ತೋರಿಸಿರುವ ಚಿತ್ರವನ್ನು ಅಳವಡಿಸಲಾಗಿದೆ:**







**2) ಪುಟ ಸಂಖ್ಯೆ 103 ರಲ್ಲಿ "ವಿಮೆಯ ಕಾರ್ಯಗಳು" – ಈ ವಿಷಯ ಶೀರ್ಷಿಕೆಗೂ ಪೂರ್ವದಲ್ಲಿ ಈ ಕೆಳಕಂಡ ಅಂಕಿಅಂಶಗಳು ಮತ್ತು ಸ್ತಂಭಲೇಖಾ ಚಿತ್ರಗಳನ್ನು ಸೇರ್ಪಡೆ ಮಾಡಲಾಗಿದೆ:**

**ಭಾರತದ ಆರ್ಥಿಕ ವಲಯ ಮತ್ತು ಒಟ್ಟು ರಾಷ್ಟ್ರೀಯ ಉತ್ಪನ್ನ**

ಭಾರತದ ಅರ್ಥವ್ಯವಸ್ಥೆಯನ್ನು 3 ವಲಯಗಳಾಗಿ ವರ್ಗೀಕರಿಸಲಾಗಿದೆ – ಕೃಷಿ ಮತ್ತು ಸಹಾಯಕ ವಲಯಗಳು, ಕೈಗಾರಿಕಾ ವಲಯ ಮತ್ತು ಸೇವಾ ವಲಯ. ಸೇವಾ ವಲಯವು ಭಾರತದಲ್ಲಿ ಅತಿ ವಿಶಾಲವಾದ ವಲಯವಾಗಿದೆ. ಪ್ರಸ್ತುತ ಬೆಲೆಯಲ್ಲಿ ಸೇವಾವಲಯದ ಒಟ್ಟು ಮೌಲ್ಯ ಸೇರ್ಪಡೆಯನ್ನು (Gross Value Addition) 2016–17ನೇ ಸಾಲಿನಲ್ಲಿ 73.79 ಲಕ್ಷ ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದೆ. ಸೇವಾ ವಲಯವು ಭಾರತದ ಒಟ್ಟು ಮೌಲ್ಯ ಸೇರ್ಪಡೆಯಾದ 137.51 ಲಕ್ಷ ಕೋಟಿ ರೂಪಾಯಿಗಳಲ್ಲಿ ಶೇ.53.66 ರಷ್ಟು ಪ್ರಮಾಣದ ಪಾಲನ್ನು ಹೊಂದಿದೆ. 39.90 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಮೌಲ್ಯ ಸೇರ್ಪಡೆಯೊಂದಿಗೆ ಕೈಗಾರಿಕಾ ಕ್ಷೇತ್ರವು ಒಟ್ಟು ಶೇ.29.05 ರಷ್ಟು ಕೊಡುಗೆಯನ್ನು ನೀಡಿದೆ. ಹಾಗೆಯೇ ಕೃಷಿ ಮತ್ತು ಸಹಾಯಕ ವಲಯವು ಶೇ.17.32 ರಷ್ಟು ಪಾಲನ್ನು ಹೊಂದಿದ್ದು ಅವುಗಳ ಒಟ್ಟು ಮೌಲ್ಯ ಸೇರ್ಪಡೆಯು 23.82 ಲಕ್ಷ ಕೋಟಿ ರೂಪಾಯಿಗಳಾಗಿವೆ. 2011 ಮತ್ತು 2012 ರ ಸಾಲಿನ ಬೆಲೆಗಳಲ್ಲಿ ಕೃಷಿ ಮತ್ತು ಸಹಾಯಕಗಳು, ಕೈಗಾರಿಕೆ ಮತ್ತು ಸೇವಾ

ವಲಯಗಳು ಒಟ್ಟು ಮೌಲ್ಯ ಸೇರ್ಪಡೆಯ ಸಂಯೋಜನೆಯಲ್ಲಿ ಅನುಕ್ರಮವಾಗಿ ಶೇ.15.11, ಶೇ. 31.12 ಮತ್ತು ಶೇ. 53.77 ಆಗಿತ್ತು.

| | Sector | GVA (Rupees in Crore) at current prices | | | | | | |
|---|---|---|---|---|---|---|---|---|
| | | 2011-12 | 2012-13 | 2013-14 | 2014-15 | 2015-16 | 2016-17 | % share |
| 1 | **Agriculture Sector** | 1,501,816 | 1,680,798 | 1,932,692 | 2,067,935 | 2,172,910 | 2,382,289 | 17.32% |
| 1.1 | Agriculture, forestry & fishing | 1,501,816 | 1,680,798 | 1,932,692 | 2,067,935 | 2,172,910 | 2,382,289 | 17.32% |
| 2 | **Industry Sector** | 2,635,052 | 2,921,262 | 3,188,270 | 3,455,221 | 3,683,358 | 3,989,791 | 29.02% |
| 2.1 | Mining & quarrying | 261,035 | 285,776 | 295,716 | 313,844 | 296,041 | 309,178 | 2.25% |
| 2.2 | Manufacturing | 1,409,986 | 1,572,830 | 1,713,445 | 1,883,929 | 2,065,093 | 2,278,149 | 16.57% |
| 2.3 | Electricity, gas, water supply & other utility services | 186,668 | 215,164 | 259,840 | 279,456 | 321,765 | 338,396 | 2.46% |
| 2.4 | Construction | 777,363 | 847,492 | 919,269 | 977,992 | 1,000,459 | 1,064,068 | 7.74% |
| 3 | **Services Sector** | 3,969,789 | 4,603,255 | 5,245,305 | 5,947,260 | 6,595,670 | 7,378,705 | 53.66% |
| 3.1 | Trade, hotels, transport, communication and services related to broadcasting | 1,413,116 | 1,664,083 | 1,874,443 | 2,095,337 | 2,294,367 | 2,538,162 | 18.46% |
| 3.2 | Financial & real estate | 1,530,691 | 1,776,023 | 2,069,386 | 2,363,328 | 2,632,432 | 2,896,300 | 21.06% |
| 3.3 | Public Administration, defence and other services | 1,025,982 | 1,163,149 | 1,301,476 | 1,488,595 | 1,668,871 | 1,944,243 | 14.14% |
| **GVA at basic prices** | | **8,106,656** | **9,205,315** | **10,366,266** | **11,470,415** | **12,451,938** | **13,750,786** | **100.00%** |




*Source: http://statisticstimes.com/economy/sectorwisegdpcalculationofindia.php*

**3) ಪುಟ ಸಂಖ್ಯೆ 115 ರ ಕೊನೆಯಲ್ಲಿ ಈ ಕೆಳಕಂಡ ಬಾಕ್ಸ್ ಟೆಕ್ಸ್ಟ್‌ಅನ್ನು ಸೇರ್ಪಡೆ ಮಾಡಲಾಗಿದೆ:**

**ಸಾಮಾಜಿಕ ಭದ್ರತಾ ಯೋಜನೆಗಳು**

1. **ಅಟಲ್ ಪಿಂಚಣಿ ಯೋಜನೆ:**

   ಈ ಯೋಜನೆಯನ್ನು 18 ರಿಂದ 40 ವರ್ಷ ವಯೋಮಾನದ ಗುಂಪಿನ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಈ ಯೋಜನೆಯಡಿ ಅವನು ಅಥವಾ ಅವಳು ತಮ್ಮ 60 ವರ್ಷ ವಯೋಮಾನದವರೆವಿಗೂ ವಂತಿಕೆ ನೀಡುವುದನ್ನು ನಿರೀಕ್ಷಿಸಲಾಗುತ್ತದೆ. ಈ ಯೋಜನೆಯು ವೃದ್ಧಾಪ್ಯ ಪಿಂಚಣಿ ಪಡೆಯುವ ಹೂಡಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

2. **ಪ್ರಧಾನಮಂತ್ರಿಗಳ ಸುರಕ್ಷಾ ವಿಮಾ ಯೋಜನೆ:**

   ವಾರ್ಷಿ ರೂ.12/– ವಿಮಾ ಕಂತಿನ ಪ್ರತಿಯಾಗಿ ಈ ಯೋಜನೆಯು ಅಪಘಾತ ಮತ್ತು ದೈಹಿಕ ನ್ಯೂನತೆಗೆ 2 ಲಕ್ಷ ರೂ. ಪರಿಹಾರ ಅಥವಾ ರಕ್ಷಣೆ ನೀಡುತ್ತದೆ. ಉಳಿತಾಯ ಖಾತೆ ಹೊಂದಿರುವ ಯಾವುದೇ ವ್ಯಕ್ತಿಯು ಈ ಯೋಜನೆಯಡಿ ನೋಂದಾಯಿಸಿಕೊಳ್ಳಬಹುದಾಗಿದೆ.

3. **ಪ್ರಧಾನಮಂತ್ರಿಗಳ ಜನ್‌ಧನ್ ಯೋಜನೆ:**

   ಈ ಯೋಜನೆಯು ಯಾವುದೇ ಕನಿಷ್ಠ ಮೊತ್ತದ ಶಿಲ್ಕು ಇಲ್ಲದೆ ಉಳಿತಾಯ ಖಾತೆಯನ್ನು ಹೊಂದುವ ಸೌಲಭ್ಯವನ್ನು ನೀಡುತ್ತದೆ. ಈ ಖಾತೆಯು ರೂಪೇ ಎಟಿಎಂ ಕಂ ಡೆಬಿಟ್ ಕಾರ್ಡ್ ಹೊಂದಿದ್ದು, ಈ ಕಾರ್ಡು ಅಪಘಾತ ಮತ್ತು ಜೀವನ ಸುರಕ್ಷತೆಗಾಗಿ ರೂ.1,00,000/– ಮತ್ತು ರೂ.30,000/– ಗಳ ಪರಿಹಾರ ಮೊತ್ತವನ್ನು ಒಳಗೊಂಡಿರುತ್ತದೆ. ಈ ಯೋಜನೆಯು ಸಮಾಜದಲ್ಲಿ ಆರ್ಥಿಕವಾಗಿ ಅಶಕ್ತರಾದ ಜನವರ್ಗಗಳಿಗೆ ಸೂಕ್ತವಾಗಿದೆ.

4. **ಪ್ರಧಾನಮಂತ್ರಿಗಳ ಜೀವನ್ ಜ್ಯೋತಿ ವಿಮಾ ಯೋಜನೆ:**

   ಈ ಯೋಜನೆಯು ವಾರ್ಷಿಕ ರೂ.330/– ರ ವಿಮಾ ಕಂತಿಗೆ ಪ್ರತಿಯಾಗಿ 2 ಲಕ್ಷ ರೂ.ಗಳ ಅವಧಿ ವಿಮಾ ಸುರಕ್ಷತೆಯನ್ನು ವಿಮಾದಾರನ ಅವಲಂಬಿತರಿಗೆ ಅವನ ಅಥವಾ ಅವಳ ಮರಣದ ನಂತರ ನೀಡಲಾಗುತ್ತದೆ. ಉಳಿತಾಯ ಖಾತೆಯನ್ನು ಹೊಂದಿರುವ 18 ರಿಂದ 70 ವಯೋಮಾನದ ಯಾವುದೇ ವ್ಯಕ್ತಿಯು ಈ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

**4) ಪುಟ ಸಂಖ್ಯೆ 130 ರಲ್ಲಿರುವ ಕಾರ್ಯಯೋಜನೆಗಳಲ್ಲಿ ಮೂರನೆಯ ಕಾರ್ಯಯೋಜನೆಯಾಗಿ ಈ ಕೆಳಗಿನ ಭಾಗವನ್ನು ಸೇರ್ಪಡೆ ಮಾಡಲಾಗಿದೆ:**

3) ನಿಮ್ಮ ವಾಸಸ್ಥಳದ ಹತ್ತಿರ ಇರುವ ಬ್ಯಾಂಕಿನ ಶಾಖೆಗೆ ಭೇಟಿಕೊಟ್ಟು ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ದೊರೆಯಬಹುದಾದ ವಿವಿಧ ಪ್ರಕಾರದ ಬ್ಯಾಂಕ್ ಖಾತೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ.

ಚಟುವಟಿಕೆ ಎರಡನೇ ಭಾಗದಲ್ಲಿ ಅಂಕಣ–ಎ ನಲ್ಲಿ ಕೊಟ್ಟಿರುವ ಮಾಹಿತಿಯನ್ನು ಅಂಕಣ ಬಿ ನಲ್ಲಿ ಕೊಟ್ಟಿರುವ ಮಾಹಿತಿಯೊಂದಿಗೆ ಹೋಲಿಸಿ

| ಕ್ರ.ಸಂ. | ಅಂಕಣ–ಎ | ಅಂಕಣ–ಬಿ |
|---|---|---|
| 1. | ಬಹುಆಯ್ಕೆಯ ಠೇವಣಿ | ಇಬ್ಬರು ವ್ಯಕ್ತಿಗಳ ನಡುವೆ ವಹಿವಾಟು ಪ್ರಕ್ರಿಯೆ ನಡೆಯುವಾಗ ಆ |

| | | |
|---|---|---|
| | | ವಹಿವಾಟು ಮುಗಿಯುವವರೆಗೂ 3ನೇ ವ್ಯಕ್ತಿಯು ಹೊಂದಿದ ತಾತ್ಕಾಲಿಕ ಅನುಮತಿ ನೀಡಿದ ಖಾತೆಯಾಗಿದೆ. |
| 2. | ಉಳಿತಾಯ ಖಾತೆ | ವಿವಿಧ ಬ್ಯಾಂಕುಗಳು ಪರಿಚಯಿಸುವ ಒಂದು ವಿಧದ ಠೇವಣಿ ಯೋಜನೆಯಾಗಿದ್ದು ಇದರಲ್ಲಿ ಉಳಿತಾಯ ಖಾತೆಯಲ್ಲಿ ಇರುವ ಹೆಚ್ಚಿನ ಮೊತ್ತವನ್ನು ನಿಶ್ಚಿತ ಠೇವಣಿ ಖಾತೆಗೆ ವರ್ಗಾಯಿಸಲಾಗುತ್ತದೆ ಮತ್ತು ಖಾತೆದಾರನು ಹೆಚ್ಚಿನ ದರದಲ್ಲಿ ಬಡ್ಡಿ ಗಳಿಸುತ್ತಾನೆ. ಒಂದು ವೇಳೆ ಬ್ಯಾಂಕ್ ಈ ಖಾತೆಯ ಮೇಲೆ ಧನಾದೇಶವನ್ನು ಸ್ವೀಕರಿಸಿದರೆ ಮತ್ತು ಖಾತೆಯಲ್ಲಿ ಸಾಕಷ್ಟು ಹಣವಿರದಿದ್ದರೆ ಆಗ ಧನಾದೇಶವನ್ನು ಮಾನ್ಯ ಮಾಡಲು ನಿಶ್ಚಿತ ಖಾತೆಯಿಂದ ಉಳಿತಾಯ ಖಾತೆಗೆ ಹಣವನ್ನು ವರ್ಗಾಯಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇದು ಖಾತೆದಾರನಿಗೆ ಹಣವನ್ನು ಆಂಶಿವಾಗಿ ಹಿಂದಕ್ಕೆ ಪಡೆಯುವ ಮತ್ತು ನಿಶ್ಚಿತ ಠೇವಣಿ ಬಡ್ಡಿದರದಲ್ಲಿ ಉಳಿದ ಮೊತ್ತವು ಉತ್ತಮ ಬಡ್ಡಿಯನ್ನು ಪಡೆಯುತ್ತದೆ. |
| 3. | ಚಾಲ್ತಿ ಖಾತೆ | ಇದನ್ನು ಆವರ್ತನ ಠೇವಣಿ ಯೋಜನೆಯೆಂದೂ ಸಹ ಕರೆಯುತ್ತಾರೆ. ಯಾವುದೇ ನಿವಾಸಿ, ವ್ಯಕ್ತಿ, ಸಂಘ, ಕ್ಲಬ್, ಸಂಸ್ಥೆ ಅಥವಾ ಏಜೇನ್ಸಿಯು ಈ ಠೇವಣಿಯನ್ನು ಒಬ್ಬರ ಅಥವಾ ಜಂಟಿ ಹೆಸರಿನಲ್ಲಿ ತೆರೆಯಬಹುದಾಗಿದೆ. ಈ ಖಾತೆಯನ್ನು 6 ತಿಂಗಳಿನಿಂದ 120 ತಿಂಗಳವರೆಗೆ ಒಂದು ತಿಂಗಳ ಗಣಕದಲ್ಲಿ ತೆರೆಯಬಹುದಾಗಿದೆ. ಈ ಯೋಜನೆಯ ಪ್ರಾರಂಭದಲ್ಲಿ ಆಯ್ಕೆ ಮಾಡಿಕೊಂಡ ಕಂತಿನ ಮೊತ್ತವನ್ನು ಪ್ರತಿ ತಿಂಗಳು ಪಾವತಿಸಬೇಕು ಮತ್ತು ಒಮ್ಮೆ ನಿಗದಿಪಡಿಸಿದ ಕಂತಿನ ಸಂಖ್ಯೆಯನ್ನು ಬದಲಾಯಿಸುವಂತಿಲ್ಲ. ಪ್ರತಿ 3 ತಿಂಗಳಿಗೊಮ್ಮೆ ಬಡ್ಡಿಯನ್ನು ಜಮಾ ಮಾಡಲಾಗುವುದು ಮತ್ತು ಅಂತಿಮ ಮೊತ್ತವನ್ನು ಖಾತೆಯು ಪರಿಪಕ್ವವಾದ ನಂತರ ಪಾವತಿಸಲಾಗುತ್ತದೆ. |
| 4. | ನಿಶ್ಚಿತ ಠೇವಣಿ ಖಾತೆ | ಯಾವುದೇ ನಿವಾಸಿ, ವ್ಯಕ್ತಿ, ಸಂಸ್ಥೆ, ಕ್ಲಬ್, ಇತ್ಯಾದಿ ಈ ಖಾತೆಯನ್ನು ಹೊಂದಲು ಅರ್ಹರಾಗಿರುತ್ತಾರೆ. ಇದು ಠೇವಣಿದಾರರಿಗೆ ಒಂದು ರೀತಿಯ ಮಾದರಿ ಸಾಲಸೌಲಭ್ಯದ ಆಯ್ಕೆಯನ್ನು ದೊರಕುವಂತೆ ಮಾಡುತ್ತದೆ. ಪ್ರತಿವರ್ಷ 2 ಧನಾದೇಶ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತದೆ. ಯಾವುದೇ ಶುಲ್ಕವಿಲ್ಲದೆ ಅಂತರ್ಜಾಲ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತದೆ. ಶಿಲ್ಕು ವಿಚಾರಣೆ, ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ, ಬಿಲ್ ಪಾವತಿ, ಮೊಬೈಲ್ ರಿಚಾರ್ಜ್ ಇತ್ಯಾದಿಗಳ |

| | | |
|---|---|---|
| | | ಸೌಲಭ್ಯವನ್ನು ಮೊಬೈಲ್ ಫೋನ್ ಮೂಲಕ ನೀಡಲಾಗುತ್ತದೆ. ಅವಶ್ಯಕ ದಾಖಲೆಗಳನ್ನು ನೀಡಿ ವಿದ್ಯಾರ್ಥಿಗಳು ಸಹ ಈ ಖಾತೆಯನ್ನು ಶೂನ್ಯ ಶಿಲ್ಕಿನೊಂದಿಗೆ ತೆರೆಯಬಹುದಾಗಿದೆ |
| 5. | ಡಿಮ್ಯಾಟ್ ಖಾತೆ | ಈ ಖಾತೆಯನ್ನು ಯಾವುದೇ ನಿವಾಸಿ, ವ್ಯಕ್ತಿ, ಸಂಘ, ನಿಯಮಿತ ಕಂಪನಿ, ಧಾರ್ಮಿಕ ಸಂಸ್ಥೆ, ಶಿಕ್ಷಣ ಸಂಸ್ಥೆ, ಧರ್ಮಾತ್ಮ ಸಂಸ್ಥೆ, ಕ್ಲಬ್, ಇತ್ಯಾದಿ ತೆರೆಯಬಹುದಾಗಿದೆ. ಅಸಂಖ್ಯವಾಗಿ ಪಾವತಿಯನ್ನು ಮಾಡಬಹುದಾಗಿದೆ. ಸಂಬಂಧಿಸಿದ ಖಾತೆಗೆ ದೇಶದ ಯಾವುದೇ ಭಾಗದಿಂದ ನಿಧಿಯನ್ನು ವರ್ಗಾಯಿಸಬಹುದಾಗಿದೆ. ಮೀರೆಳೆತ ಮತ್ತು ಅಂತರ್ಜಾಲ ಬ್ಯಾಂಕಿಂಗ್ ಸೌಲಭ್ಯಗಳು ದೊರೆಯುತ್ತವೆ. |
| 6. | ಎಸ್ಕ್ರೋ ಖಾತೆ | ಇದನ್ನು ಅಲ್ಪಾವಧಿ ಠೇವಣಿ ರಸೀದಿ ಮತ್ತು ನಿಶ್ಚಿತ ಠೇವಣಿ ರಶೀದಿ ಎಂದು ವರ್ಗೀಕರಿಸಲಾಗಿದೆ.<br>❖ ಅಲ್ಪಾವಧಿ ಠೇವಣಿ ರಸೀದಿ:–<br>1) ಬ್ಯಾಂಕುಗಳ ಗ್ರಾಹಕರಿಂದ 7 ದಿನಗಳಿಂದ ಗರಿಷ್ಠ 10 ವರ್ಷಗಳವರೆಗೆ ಠೇವಣಿಯನ್ನು ಸ್ವೀಕರಿಸುತ್ತವೆ.<br>2) ಅಲ್ಪಾವಧಿ ಠೇವಣಿಯ ಅವಧಿಯು 7 ದಿನಗಳಿಂದ 179 ದಿನಗಳವರೆವಿಗೆ ಇರಬಹುದಾಗಿದೆ.<br>3) ಈ ಯೋಜನೆಯಡಿ ಠೇವಣಿ ಮಾಡಬಹುದಾದ ಕನಿಷ್ಠ ಮೊತ್ತವು ರೂ.5 ಲಕ್ಷವಾಗಿದ್ದು, ಅವಧಿಯು 7 ರಿಂದ 14 ದಿನಗಳಾಗಿವೆ.<br>❖ **ನಿಶ್ಚಿತ ಠೇವಣಿ ರಸೀದಿ:–**<br>1) ಯಾವುದೇ ನಿವಾಸಿ, ವ್ಯಕ್ತಿ, ಸಂಘ, ಅಪ್ರಾಪ್ತ ವಯಸ್ಕ, ಸಂಸ್ಥೆ, ಕ್ಲಬ್ ಇತ್ಯಾದಿಗಳು ಈ ಖಾತೆ ತೆರೆಯಲು ಅರ್ಹರಾಗಿರುತ್ತಾರೆ.<br>2) ಮೆಟ್ರೊ ಮತ್ತು ನಗರ ಪ್ರದೇಶಗಳಲ್ಲಿ ನಿಶ್ಚಿತ ಠೇವಣಿ ರಸೀದಿಯ ಕನಿಷ್ಠ ಮೊತ್ತವು ರೂ.10,000 ವಿದ್ದು ಮತ್ತು ಗ್ರಾಮೀಣ ಮತ್ತು ಅರೆಪಟ್ಟಣ ಪ್ರದೇಶಗಳಲ್ಲಿ ಮತ್ತು ಹಿರಿಯ ನಾಗರೀಕರಿಗೆ ಈ ಮೊತ್ತವು ರೂ.5,000 ವಾಗಿರುತ್ತದೆ.<br>3) ಬ್ಯಾಂಕುಗಳು ಬಡ್ಡಿ ದರವನ್ನು ಬದಲಾಯಿಸುವುದರಿಂದ ಈ |

| | | |
|---|---|---|
| | | ಠೇವಣಿಯ ಮೇಲಿನ ಬಡ್ಡಿ ದರವು ಠೇವಣಿಯ ಅವಧಿಯ ಆಧಾರದ ಮೇಲೆ ಬ್ಯಾಂಕಿನಿಂದ ಬ್ಯಾಂಕಿಗೆ ಬದಲಾಗುತ್ತದೆ.<br>4) ಒಂದು ವರ್ಷ ಅಥವಾ ಹೆಚ್ಚಿನ ಅವಧಿಗೆ ಠೇವಣಿ ಇಡುವ ಹಿರಿಯ ನಾಗರೀಕ ಖಾತೆದಾರರಿಗೆ ಶೇ.0.50 ರಷ್ಟು ಹೆಚ್ಚುವರಿ ಬಡ್ಡಿಯನ್ನು ನೀಡಲಾಗುತ್ತದೆ. |
| 7. | ಆವರ್ತನಾ ಠೇವಣಿ ಖಾತೆ | 1) ಈ ಖಾತೆಯು ಷೇರುಗಳಲ್ಲಿನ ವಹಿವಾಟಿನಲ್ಲಿ ಒತ್ತಡ ರಹಿತ ಅವಕಾಶ ನೀಡುತ್ತದೆ.<br>2) ಒಬ್ಬ ನಿವಾಸಿ, ಅನಿವಾಸಿ ಭಾರತೀಯ, ವಿದೇಶೀ ಸಾಂಸ್ಥಿಕ ಹೂಡಿಕೆದಾರ, ವಿದೇಶಿ ಪ್ರಜೆ, ನಿಗಮ, ಧತ್ತಿಗಳು, ತೀರುವಳಿ ಮನೆಗಳು, ಹಣಕಾಸಿನ ಸಂಸ್ಥೆಗಳು, ತೀರುವಳಿ ಸದಸ್ಯ, ಪಾರಸ್ಪರಿಕ ನಿಧಿಗಳು, ಬ್ಯಾಂಕುಗಳು ಮತ್ತು ಇತರ ನ್ಯಾಸಧಾರಿ ಖಾತೆದಾರರು ಈ ಖಾತೆಯನ್ನು ತೆರೆಯಬಹುದಾಗಿದೆ.<br>3) ಈ ಖಾತೆಯನ್ನು ತೆರೆಯಲು ಅರ್ಜಿದಾರನು ಒಂದು ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಅವನ ಅವಳ ಭಾವಚಿತ್ರದೊಂದಿಗೆ ಮತದಾನದ ಗುರುತಿನ ಚೀಟಿ, ಚಾಲನಾ ಪರವಾನಗಿಯ ನಕಲು ಪ್ರತಿಯನ್ನು ಸಲ್ಲಿಸಬೇಕಾಗುತ್ತದೆ ಮತ್ತು ಅರ್ಜಿಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ತಕ್ಷಣ ಅರ್ಜಿದಾರನಿಗೆ ಡಿಮ್ಯಾಟ್ ಖಾತೆಯ ಸಂಖ್ಯೆಯನ್ನು ನೀಡಲಾಗುತ್ತದೆ. |

## ಸಿ) ಬಿಟ್ಟಿರುವುದು:

**1. ಪುಟ ಸಂಖ್ಯೆ 94 ರಲ್ಲಿರುವ ಬಾಕ್ಸ್ ಟೆಕ್ಸ್ಟ್ – "GATS - ಒಂದು ಪರಿಚಯ" – ಇದನ್ನು ಕೈಬಿಡಲಾಗಿದೆ.**


**2. ಪುಟ ಸಂಖ್ಯೆ 95 ರಲ್ಲಿರುವ ಬಾಕ್ಸ್ ಟೆಕ್ಸ್ಟ್ "ಅರ್ಥ ವ್ಯವಸ್ಥೆಯಲ್ಲಿ ಸೇವೆಯ ಪಾತ್ರ** (Role of Services in an Economy)**"- ಇದನ್ನು ಕೈಬಿಡಲಾಗಿದೆ.**

**3. ಪುಟ ಸಂಖ್ಯೆ 101 ರಲ್ಲಿರುವ ಬಾಕ್ಸ್ ಟೆಕ್ಸ್ಟ್ "ಭಾರತೀಯ ವಿಮಾ ವಲಯ" – ಇದನ್ನು ಕೈಬಿಡಲಾಗಿದೆ.**

## ಅಧ್ಯಾಯ 5
## ವ್ಯವಹಾರದ ಉದಯಿಸುತ್ತಿರುವ ಪದ್ಧತಿಗಳು

### ಎ) ಬದಲಾಗಿರುವುದು

ಪುಟ 134 ರಲ್ಲಿರುವ ಚಿತ್ರ–5.1 ಈ ಕೆಳಗಿನಂತೆ **"ವ್ಯವಹಾರದಿಂದ ವ್ಯವಹಾರಕ್ಕೆ ಇ–ವಾಣಿಜ್ಯ"** ಎಂದು ಬದಲಾಗಿದೆ:




### ಬಿ) ಸೇರ್ಪಡೆಯಾಗಿರುವುದು

**1) ಪುಟ 136 ರಲ್ಲಿ ಈ ಕೆಳಗಿನ ಬಾಕ್ಸ್‌ಟೆಕ್ಸ್ಟ್ ಅನ್ನು ಸೇರ್ಪಡೆ ಮಾಡಲಾಗಿದೆ:**

**ಇ–ವಾಣಿಜ್ಯದ ಪ್ರಯೋಜನಗಳು**

**1. ವ್ಯವಹಾರ ಸಂಸ್ಥೆ:**

(1) ಮಾರಾಟಸ್ಥಳವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ವಿಸ್ತರಿಸುತ್ತದೆ.

(2) ಕಾರ್ಯಾಚರಣೆಗಳ ವೆಚ್ಚದಲ್ಲಿ ನಿಧಾನವಾಗಿ ಇಳಿಕೆ

(3) ಸ್ಪರ್ಧಿಗಳ ವಿರುದ್ಧ ಸ್ಪರ್ಧಾತ್ಮಕ ಅನುಕೂಲ

(4) ಸಮರ್ಪಕ ಸಮಯ ನಿರ್ವಹಣೆ ಮತ್ತು ಬೆಂಬಲದ ವ್ಯವಹಾರ ಪ್ರಕ್ರಿಯೆಗಳು ಮತ್ತು

(5) ಸಣ್ಣ ಸಂಸ್ಥೆಗಳು ದೊಡ್ಡ ಸಂಸ್ಥೆಗಳೊಂದಿಗೆ ಒಟ್ಟಾಗಿ ಅಸ್ತಿತ್ವದಲ್ಲಿರುವುದು (ವಿನ್–ವಿನ್)

**2. ಗ್ರಾಹಕರು ಮತ್ತು ಸಮಾಜಕ್ಕೆ ಪ್ರಯೋಜನಗಳು:**

(1) ನಮನೀಯತೆ

(2) ಸ್ಪರ್ಧಾತ್ಮಕ ಬೆಲೆ/ರಿಯಾಯಿತಿಗಳು/ಮನ್ನಾ ಮಾಡುವಿಕೆ

(3) ಹೆಚ್ಚು ಅವಕಾಶಗಳು ಮತ್ತು ಆಯ್ಕೆಗಳು ಹಾಗೂ ಗ್ರಾಹಕೀಕೃತ ಉತ್ಪನ್ನಗಳು

(4) ಶೀಘ್ರ ಮತ್ತು ಸಕಾಲಿಕ ವಿಲೇವಾರಿ (ಡಿಜಿಟೈಜ್ಡ್ ಉತ್ಪನ್ನಗಳು)


(5) ಉದ್ಯೋಗ ಅವಕಾಶ

(6) ಇ–ಹರಾಜುಗಳು ಮತ್ತು ಇ–ಟೆಂಡರ್‌ಗಳನ್ನು ಕಲ್ಪಿಸಿಕೊಡುವುದು

(7) ಗ್ರಾಹಕರೊಂದಿಗೆ ಸಂವಾದ

(8) ವಿಶಾಲ ಬಾಹ್ಯತಲುಪುವಿಕೆ

**2) ಪುಟ 140 ರಲ್ಲಿ ಚಿತ್ರ 5.2 "ಗ್ರಾಹಕನಿಂದ ಗ್ರಾಹಕನಿಗೆ ಇ–ವಾಣಿಜ್ಯ (ಸಿ2ಸಿ)" ಅನ್ನು ಸೇರ್ಪಡೆ ಮಾಡಲಾಗಿದೆ:**




**3) ಪುಟ 153 ರಲ್ಲಿ "ಚಿತ್ರ 5.3 (ಎ) ಮತ್ತು (ಬಿ): ಎ–ವ್ಯವಹಾರದಿಂದ ವಿತರಣಾ ಮಾರ್ಗ ಕಿರಿದಾಗುತ್ತದೆ" – ಇದನ್ನು ಸೇರ್ಪಡೆ ಮಾಡಲಾಗಿದೆ:**





**Figure 5.3 (A) and (B) : Distribution channel gets shortened by e-Business**

## ಸಿ) ಬಿಟ್ಟಿರುವುದು

1) ಪುಟ 135 ಮತ್ತು 136 ರಲ್ಲಿರುವ ಬಾಕ್ಸ್‌ಟೆಕ್ಸ್ಟ್ **"ಇ–ವ್ಯವಹಾರದ ಇತಿಹಾಸ"**–ಇದನ್ನು ಕೈಬಿಡಲಾಗಿದೆ.

2) ಪುಟ 141 ಮತ್ತು 142 ರಲ್ಲಿರುವ ಬಾಕ್ಸ್‌ಟೆಕ್ಸ್ಟ್ **"ಸಿ2ಸಿ ವಾಣಿಜ್ಯವನ್ನು ಸುಗಮಗೊಳಿಸಿರುವ e-Bay"**–ಇದನ್ನು ಕೈಬಿಡಲಾಗಿದೆ.

3) ಪುಟ 147 ರಲ್ಲಿರುವ ಬಾಕ್ಸ್‌ಟೆಕ್ಸ್ಟ್ **"ಡಿಜಿಟಲ್ ವಿಭಜನೆ–ಸತ್ಯಾಂಶಗಳು"**–ಇದನ್ನು ಕೈಬಿಡಲಾಗಿದೆ.

4) ಪುಟ 149 ರಲ್ಲಿರುವ **"ಕೋಷ್ಟಕ 5.2 ಭಾರತದಲ್ಲಿ ಟೆಲಿಸೆಂಟರ್ಸ್ ಯೋಜನೆ"**–ಇದನ್ನು ಕೈಬಿಡಲಾಗಿದೆ.

5) ಪುಟ 150 ರಲ್ಲಿರುವ **"ಚಿತ್ರ 5.2 ಖರೀದಿ/ಮಾರಾಟದ ಪ್ರಕ್ರಿಯೆ" –ಇದನ್ನು ಕೈಬಿಡಲಾಗಿದೆ.**

6) ಪುಟ 152 ರಲ್ಲಿರುವ **"ಪ್ರದರ್ಶಿಕೆ 5.1 ಭಾರತದ ಅತಿದೊಡ್ಡ ಶಾಪಿಂಗ್ ಮಾಲ್–ಇಂಡಿಯಾ ಡಾಟ್ ಕಾಮ್‌ನ ಶಾಪಿಂಗ್ ಪೇಜ್" –ಇದನ್ನು ಕೈಬಿಡಲಾಗಿದೆ.**

**7) ಪುಟ 158 ರಲ್ಲಿರುವ** "ಚಿತ್ರ 5.4 ಹೊರಗುತ್ತಿಗೆಯ ವ್ಯಾಪ್ತಿ" –ಇದನ್ನು ಕೈಬಿಡಲಾಗಿದೆ.

# ಅಧ್ಯಾಯ 6
# ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಗಳು ಮತ್ತು ವ್ಯವಹಾರದ ನೈತಿಕತೆ

## ಎ) ಬದಲಾಗಿರುವುದು:

1) ಪುಟ ಸಂಖ್ಯೆ 168 ರಲ್ಲಿರುವ ಬಾಕ್ಸ್ ಟೆಕ್ಸ್ಟ್ **"ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ"** ಇದು ಈ ಕೆಳಗಿನಂತೆ ಬದಲಾಗಿದೆ:

## ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (Corportate Social Responsibility)

ಕಾರ್ಪೊರೇಟ್ ಸುಸ್ಥಿರತೆಯು ಸುಸ್ಥಿರ ಅಭಿವೃದ್ಧಿಯ ಉದ್ದೇಶಗಳನ್ನು ಈಡೇರಿಸುವುದರಲ್ಲಿ ಕಂಪನಿಗಳು ವಹಿಸುವ ಪಾತ್ರವೆಂದು ಉಲ್ಲೇಖಿಸಬಹುದಾಗಿದೆ ಮತ್ತು ಅದು ಆರ್ಥಿಕ ಪ್ರಗತಿ, ಸಾಮಾಜಿಕ ಪ್ರಗತಿ ಮತ್ತು ಪರಿಸರ ಸಂರಕ್ಷಣೆಗಳಿಗೆ ಬೇಕಾದ ಸಮತೋಲಿತ ವಿಧಾನವನ್ನು ಒಳಗೊಳ್ಳುತ್ತದೆ.

CSRನ ಯಾವುದೇ ಒಂದು ವ್ಯಾಖ್ಯೆಯೂ ಸಾರ್ವತ್ರಿಕವಾಗಿ ಒಪ್ಪಲಾಗಿಲ್ಲ. ಈಗಿರುವ ಪ್ರತಿ ವ್ಯಾಖ್ಯೆಯೂ ವ್ಯವಹಾರಗಳು ಸಮಾಜದ ಮೇಲೆ ಹೊಂದಿರುವ ಅಧಿಕ ಪರಿಣಾಮ ಮತ್ತು ಅವುಗಳ ಬಗ್ಗೆ ಇರುವ ಸಾಮಾಜಿಕ ನಿರೀಕ್ಷೆಗಳನ್ನು ಬೆಂಬಲಿಸುತ್ತದೆ.

(1) ಯೂರೋಪಿಯನ್ ಕಮಿಷನ್ CSR ಅನ್ನು "ಸಮಾಜದ ಮೇಲೆ ಉದ್ದಿಮೆಗಳ ಪರಿಣಾಮಗಳಿಗಾಗಿ ಅವು ಹೊಂದಿರುವ ಹೊಣೆಗಾರಿಕೆ" ಎಂದು ವ್ಯಾಖ್ಯಾನಿಸಿದೆ.

(2) ಸುಸ್ಥಿರ ಅಭಿವೃದ್ಧಿಗಾಗಿರುವ ಜಾಗತಿಕ ವ್ಯವಹಾರ ಸಮಿತಿಯು CSRಅನ್ನು "ವ್ಯವಹಾರವು ಕಾರ್ಮಿಕ ವರ್ಗ ಮತ್ತು ಅವರ ಕುಟುಂಬಗಳ ಹಾಗೂ ಒಟ್ಟು ಸಮುದಾಯ ಮತ್ತು ಸಮಾಜಗಳ ಜೀವನದ ಗುಣಮಟ್ಟ ಹೆಚ್ಚಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುವ ನಿರಂತರ ಬದ್ಧತೆಯಾಗಿದೆ" ಎಂದು ವ್ಯಾಖ್ಯಾನಿಸಿದೆ.

(3) ವಿಶ್ವ ಸಂಸ್ಥೆಯ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಯು CSRಅನ್ನು "ಒಂದು ನಿರ್ವಹಣಾ ಪರಿಕಲ್ಪನೆಯಾಗಿದ್ದು, ಕಂಪನಿಗಳು ತಮ್ಮ ಕಾರ್ಯಾಚರಣೆಗಳು ಮತ್ತು ಆಸಕ್ತಿದಾರರೊಂದಿಗಿನ ಸಂವಾದಗಳಲ್ಲಿ ಸಾಮಾಜಿಕ ಮತ್ತು ಪರಿಸರ ಕಾಳಜಿಗಳನ್ನು ಮೇಳೈಸುವುದಾಗಿದೆ. CSRಅನ್ನು ಕಂಪನಿಯೊಂದು ಆರ್ಥಿಕ, ಪಾರಿಸರಿಕ ಮತಮ್ತು ಸಾಮಾಜಿಕ ಆಚರಣೆಗಳ ಸಮತೋಲನವನ್ನು ಸಾಧಿಸುವುದರೊಂದಿಗೆ ಶೇರುದಾರರು ಮತ್ತು ಆಸಕ್ತಿದಾರರ ನಿರೀಕ್ಷೆಗಳನ್ನು ಈಡೇರಿಸುವ ಒಂದು ವಿಧಾನವಾಗಿದೆ ಎಂದು ಸಾಮಾನ್ಯವಾಗಿ ಅರ್ಥೈಸಿಕೊಳ್ಳಲಾಗಿದೆ. ಈ ಅರ್ಥದಲ್ಲಿ ಕಾರ್ಯತಂತ್ರಾತ್ಮಕ ವ್ಯವಹಾರ ನಿರ್ವಹಣೆಯ ಪರಿಕಲ್ಪನೆಯಾಗಬಲ್ಲ CSR ಮತ್ತು ದತ್ತಿ, ಪ್ರಾಯೋಜಕತ್ವ ಅಥವಾ ಉದಾರತೆಗಳ ನಡುವೆ ವ್ಯತ್ಯಾಸವನ್ನು ಕಂಡುಕೊಳ್ಳುವುದು ಬಹುಮುಖ್ಯವಾಗುತ್ತದೆ. ಉಳಿದ ವಿಧಾನಗಳೂ ಸಹ ಬಡತನ ಇಳಿಕೆಗೆ ಅಮೂಲ್ಯ ಕೊಡುಗೆ ನೀಡುತ್ತದೆಯಾದರೂ, ಅದು ಕಂಪನಿಯ ಕೀರ್ತಿಯನ್ನು ಹೆಚ್ಚಿಸುತ್ತದೆ ಮತ್ತು ಅದರ ಬ್ರಾಂಡ್‌ಅನ್ನು ಬಲಗೊಳಿಸುತ್ತದೆ, ಆದರೆ CSR ಪರಿಕಲ್ಪನೆಯು ಸ್ಪಷ್ಟವಾಗಿ ಅದರಾಚೆಗೂ ಸಾಗುತ್ತದೆ" ಎಂದು ವ್ಯಾಖ್ಯಾನಿಸಿದೆ.

ಭಾರತದಲ್ಲಿ CSR ಪರಿಕಲ್ಪನೆಯು 23 ಆಗಸ್ಟ್ 2013 ರಂದು ಸಂಸತ್ತಿನ ಎರಡೂ ಸದನಗಳು ಜಾರಿಗೊಳಿಸಿದ ಮತ್ತು ರಾಷ್ಟ್ರಪತಿ ಅನುಮೋದನೆಯನ್ನು ಪಡೆದ 2013ರ ಕಂಪನಿಗಳ ಕಾಯ್ದೆಯ 135ನೇ ಕಲಮಿನ ಅನ್ವಯ ನಿರ್ವಹಿಸಲ್ಪಡುತ್ತದೆ. ಕಾಯಿದೆಯಲ್ಲಿನ CSR ನಿಯಮಗಳು, ವಾರ್ಷಿಕ ರೂ. 1000 ಕೋಟಿ ಮತ್ತು ಅಧಿಕ ವಹಿವಾಟು ಹೊಂದಿರುವ ಅಥವಾ ರೂ.500 ಕೋಟಿ ಮತ್ತು ಅಧಿಕ ನಿವ್ವಳ ಆಸ್ತಿ ಹೊಂದಿರುವ ಅಥವಾ ರೂ. 5 ಕೋಟಿ ಮತ್ತು ಅಧಿಕ ನಿವ್ವಳ ಲಾಭ ಹೊಂದಿರುವ ಕಂಪನಿಗಳಿಗೆ ಅನ್ವಯವಾಗುತ್ತವೆ.

1. 2014–15ರ ಆರ್ಥಿಕ ವರ್ಷದಿಂದ ಅನ್ವಯವಾಗುವ ಹೊಸ ನಿಯಮಗಳು, ಕಂಪನಿಗಳು ತಮ್ಮ ನಿರ್ದೇಶಕ ಮಂಡಳಿಯ ಸದಸ್ಯರೊಂದಿಗೆ ಕನಿಷ್ಠ ಪಕ್ಷ ಒಬ್ಬ ಸ್ವತಂತ್ರ ನಿರ್ದೇಶಕನನ್ನೊಳಗೊಂಡ CSR ಸಮಿತಿಯನ್ನು ರಚಿಸಬೇಕಾಗುತ್ತದೆ.
2. ಕಂಪನಿಗಳು ತಮ್ಮ ಕಳೆದ ಮೂರು ವರ್ಷಗಳ ಸರಾಸರಿ ನಿವ್ವಳ ಲಾಭದ ಶೇಕಡಾ 2 ಅನ್ನು CSR ಚಟುವಟಿಕೆಗಳಿಗೆ ವ್ಯಯಿಸಬೇಕೆಂದು ಕಾಯಿದೆಯು ಪ್ರೋತ್ಸಾಹಿಸುತ್ತದೆ.
3. CSR ಅಡಿಯಲ್ಲಿ ಕಂಪನಿ ಕೈಗೊಳ್ಳುವ ಸೂಚಿಸಲ್ಪಟ್ಟ ಚಟುವಟಿಕೆಗಳನ್ನು ಕಾಯಿದೆಯ ಅನುಬಂಧ

VIIರಡಿಯಲ್ಲಿ ನಿರ್ದಿಷ್ಟಪಡಿಸಿದೆ.
4. ಭಾರತದಲ್ಲಿ ಕೈಗೊಳ್ಳಲಾಗುವ CSR ಚಟುವಟಿಕೆಗಳನ್ನು ಮಾತ್ರ ಪರಿಗಣಿಸಲಾಗುವುದು.
5. ಉದ್ಯೋಗಿಗಳು ಮತ್ತು ಅವರ ಕುಟುಂಬಗಳಿಗಾಗಿ ಮೀಸಲಾಗಿರುವ ಚಟುವಟಿಕೆಗಳು CSR ಅಡಿಯಲ್ಲಿ ಅರ್ಹವಾಗಲಾರವು.

**ಬಿ) ಸೇರ್ಪಡೆಯಾಗಿರುವುದು: ಯಾವುದೂ ಇಲ್ಲ**

**ಸಿ) ಬಿಟ್ಟಿರುವುದು:**

**1) ಪುಟ ಸಂಖ್ಯೆ 179 ರಲ್ಲಿರುವ ಬಾಕ್ಸ್ ಟೆಕ್ಸ್ಟ್ "ಮೂರು ಸಮಾನ ಪರಿಕಲ್ಪನೆಗಳ ಉತ್ಪತ್ತಿ" –ಇದನ್ನು ಕೈಬಿಡಲಾಗಿದೆ.**

## ಅಧ್ಯಾಯ 7 ರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ

## ಅಧ್ಯಾಯ 9
## ವ್ಯವಹಾರದ ಹಣಕಾಸಿನ ಮೂಲಗಳು

### ಎ) ಬದಲಾಗಿರುವುದು:

**1) ಪುಟ ಸಂಖ್ಯೆ 224 ರಲ್ಲಿ ಬಾಕ್ಸ್ – ಸಿ ಯಲ್ಲಿರುವ "ವಿವಿಧ ಸಾಲ ಪತ್ರಗಳನ್ನು ಬಿಡುಗಡೆ ಮಾಡುವ ಕಂಪನಿಗಳು** (Companies Issuing different debentures)" –ಇದರ ಬದಲಿಗೆ **"ಸಾಲಪತ್ರಗಳ ವಿಧಗಳು** (Type of Debentures)**"** –ಈ ಪಠ್ಯವನ್ನು ನೀಡಲಾಗಿದೆ.

2) **ಪುಟ ಸಂಖ್ಯೆ 225 ರಲ್ಲಿ ಬಾಕ್ಸ್ – ಡಿ ಯಲ್ಲಿರುವ "ಸಾಲಪತ್ರಗಳ ವಿಧಗಳು** (Type of Debentures)**"**– ಇದರ ಬದಲಿಗೆ– "**ವಿಶಿಷ್ಟ ಹಣಕಾಸು ಸಂಸ್ಥೆಗಳು** (Special Financial Institutions)" ಈ ಪಠ್ಯವನ್ನು ನೀಡಲಾಗಿದೆ.

3) **ಪುಟ ಸಂಖ್ಯೆ 225 ರಲ್ಲಿ ಬಾಕ್ಸ್ – ಇ ಯಲ್ಲಿರುವ** "**ವಿಶಿಷ್ಟ ಹಣಕಾಸು ಸಂಸ್ಥೆಗಳು** (Special Financial Institutions)" - ಇದರ ಬದಲಿಗೆ **"**ಅಂತರ ಕಂಪನಿ ಠೇವಣಿಗಳು (ICD-Inter Corporate Deposits)**"**– ಈ ಪಠ್ಯವನ್ನು ನೀಡಲಾಗಿದೆ.

### ಬಿ) ಸೇರ್ಪಡೆಯಾಗಿರುವುದು:

**1) ಪುಟ ಸಂಖ್ಯೆ 225 ರಲ್ಲಿ ಬಾಕ್ಸ್ – ಇ ಯಲ್ಲಿ "**ಅಂತರ ಕಂಪನಿ ಠೇವಣಿಗಳು (ICD-Inter Corporate Deposits)**"**–ಈ ಪಠ್ಯವನ್ನು ಸೇರ್ಪಡೆ ಮಾಡಲಾಗಿದೆ.

**ಸಿ) ಬಿಟ್ಟಿರುವುದು:**

1) ಪುಟ ಸಂಖ್ಯೆ 224 ರಲ್ಲಿ ಬಾಕ್ಸ್ – ಸಿ ಯಲ್ಲಿರುವ **"**ವಿವಿಧ ಸಾಲ ಪತ್ರಗಳನ್ನು ಬಿಡುಗಡೆ ಮಾಡುವ ಕಂಪನಿಗಳು (Companies Issuing different debentures)" ಇದನ್ನು ಕೈಬಿಡಲಾಗಿದೆ.

| **ಅಧ್ಯಾಯ 9 ರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ** |
|---|

## ಅಧ್ಯಾಯ 10
## ಆಂತರಿಕ ವ್ಯಾಪಾರ

**ಎ) ಬದಲಾಗಿರುವುದು: ಯಾವುದೂ ಇಲ್ಲ**

**ಬಿ) ಸೇರ್ಪಡೆಯಾಗಿರುವುದು:**

**1) ಪುಟ ಸಂಖ್ಯೆ 258 ರಲ್ಲಿ ಕಲಿಕೆಯ ಉದ್ದೇಶಗಳಲ್ಲಿ "ಜಿ ಎಸ್ ಟಿ ಯ ಅನುಷ್ಠಾನವನ್ನು ಅಧಿಕೃತ ಪಡಿಸುವಿರಿ"– ಈ ಉದ್ದೇಶವನ್ನು ಸೇರ್ಪಡೆ ಮಾಡಲಾಗಿದೆ.**

**2) ಪುಟ ಸಂಖ್ಯೆ 265 ರಲ್ಲಿ ಈ ಕೆಳಗಿನ ಬಾಕ್ಸ್‌ಟೆಕ್ಸ್ಟ್ ಅನ್ನು ಸೇರ್ಪಡೆ ಮಾಡಲಾಗಿದೆ:**

### ವ್ಯಾಪಾರದ ಪದಗಳು

ಈ ಕೆಳಗಿನವು ವ್ಯಾಪಾರದಲ್ಲಿ ಬಳಸಲಾಗುವ ಪ್ರಮುಖ ಪದಗಳಾಗಿವೆ.

1. **ಬಟವಾಡೆ ನಂತರ ಪಾವತಿ (COD):** ಇದು ಸರಕು ಅಥವಾ ಸೇವೆಯ ಬಟವಾಡೆಯ ಸಮಯದಲ್ಲಿ ಪಾವತಿಯನ್ನು ಮಾಡುವ ವಹಿವಾಟಿನ ವಿಧವಾಗಿದೆ. ಸರಕು ಅಥವಾ ಸೇವೆಯ ಬಟವಾಡೆ ಮಾಡುವಾಗ ಖರೀದಿದಾರನು ಪಾವತಿ ಮಾಡಲು ಅಸಮರ್ಥನಾದರೆ ಮಾರಾಟಗಾರನಿಗೆ ಅದನ್ನು (ಸರಕನ್ನು) ಹಿಂತಿರುಗಿಸಲಾಗುತ್ತದೆ.
2. **ಹಡಗಿನ (ನೌಕೆಯ) ಮೇಲೆ ಪುಕ್ಕಟೆ (Free On Board) ಅಥವಾ ರೈಲಿನ ಮೇಲೆ ಪುಕ್ಕಟೆ (Free On Rail):** ಇದು ಮಾರಾಟಗಾರ ಮತ್ತು ಖರೀದಿದಾರನ ನಡುವಿನ ಒಪ್ಪಂದವಾಗಿದ್ದು, ಇದರಲ್ಲಿ ಸಾಗಾಟದಾರನಿಗೆ

(ಅದು ಹಡಗು, ರೈಲ್ವೆ, ಲಾರಿ ಇತ್ಯಾದಿಯಾಗಿರಬಹುದು) ಬಟವಾಡೆ ಮಾಡುವವರೆಗಿನ ಎಲ್ಲಾ ವೆಚ್ಚಗಳನ್ನು ಮಾರಾಟಗಾರ ಭರಿಸುತ್ತಾನೆ.

3. **ವೆಚ್ಚ, ವಿಮೆ ಮತ್ತು ಸಾಗಾಟ ಬಾಡಿಗೆ (Cost Insurance and Freight)**: ಇದು ಸರಕುಗಳ ವೆಚ್ಚ ಮಾತ್ರವಲ್ಲದೇ ಸರಕುಗಳ ಮೇಲೆ ಗಮ್ಯ ಸ್ಥಾನದವರೆಗೆ ಪಾವತಿಸಲಾಗುವ ವಿಮೆ ಮತ್ತು ಸಾಗಾಟ ಬಾಡಿಗೆಯನ್ನು ಒಳಗೊಂಡ ಸರಕಿನ ಬೆಲೆಯಾಗಿದೆ.

4. **ಲೋಪ–ದೋಷಗಳನ್ನು ಹೊರತುಪಡಿಸಿ (Errors and Omissions Excepted):** ಇದು ವ್ಯಾಪಾರಿ ದಾಖಲೆಗಳಲ್ಲಿ ಬಳಸಲಾಗುವ ಪದವಾಗಿದ್ದು, ತಪ್ಪುಗಳು ಮತ್ತು ಮರೆತ ವಿಷಯಗಳನ್ನು ಪರಿಗಣಿಸಬೇಕೆಂದು ಸೂಚಿಸುತ್ತದೆ.

**3) ಪುಟ ಸಂಖ್ಯೆ 281 ರಲ್ಲಿ ಮಾರಾಟ ಯಂತ್ರಗಳ ವಿವರಣೆಯ ನಂತರದಲ್ಲಿ ಈ ಕೆಳಗಿನ ಪಠ್ಯಭಾಗವನ್ನು ಸೇರ್ಪಡೆ ಮಾಡಲಾಗಿದೆ:**

## ಸರಕು ಮತ್ತು ಸೇವಾ ತೆರಿಗೆ (GST)

"ಏಕರಾಷ್ಟ್ರ ಮತ್ತು ಏಕತೆರಿಗೆ" ಸಿದ್ಧಾಂತದೊಂದಿಗೆ ಮತ್ತು ದೇಶಾದಾದ್ಯಂತ ಸರಕುಗಳ ಸುಗಮ ಹರಿವನ್ನು ಖಾತರಿಪಡಿಸಲು ಏಕೀಕೃತ ಮಾರುಕಟ್ಟೆಯನ್ನು ಹೊಂದುವ ಉದ್ದೇಶದಿಂದ ಭಾರತ ಸರ್ಕಾರವು ಜುಲೈ 1, 2017ರಂದು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಿತು. ಇದು ಉತ್ಪಾದಕರು, ಹೂಡಿಕೆದಾರರು ಮತ್ತು ಗ್ರಾಹಕರ ವ್ಯವಹಾರವನ್ನು ಸರಳಗೊಳಿಸಿದೆ. ಈ ವ್ಯವಸ್ಥೆಯನ್ನು ಭಾರತದ ತೆರಿಗೆ ಇತಿಹಾಸದಲ್ಲಿ ಅತ್ಯಂತ ಕ್ರಾಂತಿಕಾರಕ ತೆರಿಗೆ ಸುಧಾರಣೆಯೆಂದು ಪರಿಗಣಿಸಲಾಗುತ್ತದೆ. ತೆರಿಗೆಯು ಅಭಿವೃದ್ಧಿಯಲ್ಲಿ ಆದಾಯದ ಮೂಲವಾಗಿದೆಯಲ್ಲದೇ, ಸರಕಾರವನ್ನು ತೆರಿಗೆ ಪಾವತಿದಾರರಿಗೆ ಬಾಧ್ಯಸ್ಥನನ್ನಾಗಿ ಮಾಡುವುದರಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪರಿಣಾಮಕಾರಿ ತೆರಿಗೆ ವ್ಯವಸ್ಥೆಯು ಸುಸ್ಥಿರ ಅಭಿವೃದ್ಧಿಯ ಸಾಮಾಜಿಕ ಉದ್ದೇಶಗಳನ್ನು ಪೂರೈಸಲು ಸಾರ್ವಜನಿಕ ಹಣದ ಪರಿಣಾಮಕಾರಿ ವಿನಿಯೋಗಿಸುವಿಕೆಯನ್ನು ಖಾತರಿಪಡಿಸುತ್ತದೆ.

GST ಯು ಉತ್ಪಾದಕರಿಂದ ಗ್ರಾಹಕರಿಗೆ ಸರಕು ಮತ್ತು ಸೇವೆಗಳ ಪೂರೈಕೆಯ ಮೇಲೆ ಗುರಿ ಆಧಾರಿತ ಏಕ ತೆರಿಗೆಯಾಗಿದೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುವ ಬಹುಪರೋಕ್ಷ ತೆರಿಗೆಗಳನ್ನು ಬದಲಿಸಿದೆ. ತನ್ಮೂಲಕ ರಾಷ್ಟ್ರವನ್ನು ಏಕೀಕೃತ ಮಾರುಕಟ್ಟೆಯಾಗಿ ಪರಿವರ್ತಿಸಿದೆ. GSTಯು, ಇತರ ಪ್ರಯೋಜನಗಳೊಂದಿಗೆ, ವ್ಯವಹಾರ ನಡೆಸುವಿಕೆಯಲ್ಲಿ ಸುಲಭ, ತೆರಿಗೆ ಪಾಲನೆಯಲ್ಲಿ ಸುಧಾರಣೆ, ತೆರಿಗೆ ಮೇಲಿನ ತೆರಿಗೆಯನ್ನು ತಪ್ಪಿಸಿ ತೆರಿಗೆ ಹೊರೆಯಲ್ಲಿ ಇಳಿಕೆ, ತೆರಿಗೆ ನಿರ್ವಹಣೆಯಲ್ಲಿ ಸುಧಾರಣೆ, ತೆರಿಗೆಗಳ್ಳತನವನ್ನು ತಗ್ಗಿಸುವುದು, ಆರ್ಥಿಕತೆಯ ಸಂಘಟಿತ ವರ್ಗದ ವಿಸ್ತಾರ ಮತ್ತು ತೆರಿಗೆ ಆದಾಯದಲ್ಲಿ ಹೆಚ್ಚಳವನ್ನು ಮಾಡುವುದಾಗಿ ನಿರೀಕ್ಷಿಸಲಾಗುತ್ತಿದೆ.

GST ಯು 17 ಪರೋಕ್ಷ ತೆರಿಗೆಗಳನ್ನು (8 ಕೇಂದ್ರ ಮತ್ತು 9 ರಾಜ್ಯ ಹಂತ) ಮತ್ತು ಕೇಂದ್ರ ಹಾಗೂ ರಾಜ್ಯಗಳ 23 ಕರ(Cess)ಗಳನ್ನು ನಿವಾರಿಸಿ, ಬಹುವಿಧ ತೆರಿಗೆ ರಿಟರ್ನ್ಸ್ ಸಲ್ಲಿಸುವಿಕೆ ಮತ್ತು ಅನಗತ್ಯ

ಮೌಲ್ಯಮಾಪನಗಳನ್ನು ತಪ್ಪಿಸಿದೆ ಮತ್ತು ಉತ್ಪಾದಕರಿಂದ ಗ್ರಾಹಕರಿಗೆ ಪೂರೈಕೆ ಸರಪಳಿಯಲ್ಲಿ ಸರಕು ಮತ್ತು ಸೇವೆಗಳ ತೆರಿಗೆಯನ್ನು ತಾರ್ಕಿಕಗೊಳಿಸಿದೆ. ಈ ಹಿಂದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸುತ್ತಿದ್ದ ಕರಗಳನ್ನು ಅಂತರ್ಗತಗೊಳಿಸಿದ GST ಯು ಕೇಂದ್ರ ಸರಕು ಮತ್ತು ಸೇವಾ ತೆರಿಗೆ (CGST) ಹಾಗೂ ರಾಜ್ಯ ಸರಕು ಮತ್ತು ಸೇವಾ ತೆರಿಗೆ(SGST)ಗಳನ್ನು ಒಳಗೊಂಡಿರುತ್ತದೆ. GST ಯನ್ನು (CGST+ SGST) ಮೌಲ್ಯವರ್ಧನೆಯ ಪ್ರತಿ ಹಂತದಲ್ಲಿ ವಿಧಿಸಲಾಗುತ್ತದೆ ಮತ್ತು ಪೂರೈಕೆದಾರನು ಮೌಲ್ಯ ಸರಪಳಿಯ ಹಿಂದಿನ ಹಂತದಲ್ಲಿ ವಿಧಿಸಲಾದ ಹೂಡುವಳಿ ಮೇಲಿನ ತೆರಿಗೆಯನ್ನು ತೆರಿಗೆ ಜಮೆ ವ್ಯವಸ್ಥೆಯ ಮೂಲಕ ಸರಿದೂಗಿಸುತ್ತಾನೆ. ಪೂರೈಕೆ ಸರಪಳಿಯ ಅಂತಿಮ ವ್ಯಾಪಾರಿಯು ಒಟ್ಟು GSTಯನ್ನು ಗ್ರಾಹಕನಿಗೆ ವರ್ಗಾಯಿಸುವ ಮೂಲಕ ಅದನ್ನು ಗುರಿ ಆಧಾರಿತ ಬಳಕೆಯ ತೆರಿಗೆಯನ್ನಾಗಿ ಮಾಡುತ್ತಾನೆ. ಮೌಲ್ಯಸರಪಳಿಯ ಪ್ರತಿ ಹಂತದಲ್ಲಿ ಹೂಡುವಳಿ ಜಮೆ ಪಡೆಯುವ ವ್ಯವಸ್ಥೆಯು GSTಯಲ್ಲಿ ಸರಣಿ ಪರಿಣಾಮ(ತೆರಿಗೆ ಮೇಲೆ ತೆರಿಗೆ)ವನ್ನು ತಪ್ಪಿಸಲು ಸಹಾಯ ಮಾಡುತ್ತದೆ. ಇದು ಸರಕುಗಳ ಬೆಲೆಯನ್ನು ಇಳಿಸಿ ಗ್ರಾಹಕರಿಗೆ ಪ್ರಯೋಜನ ನೀಡುವುದಾಗಿ ನಿರೀಕ್ಷಿಸಲಾಗಿದೆ. (ಮುಂದಿನ ಪುಟ ನೋಡಿ)

**GST ಕುರಿತು ಕೆಲವು ವಾಸ್ತವಗಳು**

1. GSTಯು ಅಧಿಕ ಸಂಖ್ಯೆಯ ತೆರಿಗೆಗಳನ್ನು ದೇಶದಾದ್ಯಂತ ಒಂದೇ ಏಕತೆರಿಗೆಯಲ್ಲಿ ಅಂತರ್ಗತಗೊಳಿಸಲು ಉದ್ದೇಶಿಸುತ್ತದೆ. ಮತ್ತು ಸರಕುಗಳಿಗೆ ಭಾರತದಾದ್ಯಂತ ಏಕರೀತಿಯ ಬೆಲೆಯನ್ನು ನಿಗದಿಪಡಿಸುತ್ತದೆ. ಇದರಿಂದ ಕೆಲವು ಸರಕುಗಳು ದುಬಾರಿಯಾಗುತ್ತವೆ ಮತ್ತು ಕೆಲವು ಅಗ್ಗವಾಗುತ್ತವೆ.

2. GST ಯನ್ನು ಜಾರಿಗೊಳಿಸುವುದರೊಂದಿಗೆ, ಲಕ್ಷುರಿ ಸರಕುಗಳು ದುಬಾರಿಯಾಗಿವೆ ಮತ್ತು ಅಧಿಕ ಬಳಕೆಯ ವಸ್ತುಗಳು ಅಗ್ಗವಾಗಿವೆ.

3. GSTಯು ಮೂಲದಲ್ಲಿನ ತೆರಿಗೆಯಲ್ಲ. ಅದು ಗುರಿ ಆಧಾರಿತ ತೆರಿಗೆಯಾಗಿದೆ ಅಥವಾ ಬಳಕೆಯ ಮೇಲಿನ ತೆರಿಗೆ. ಒಂದು ವಸ್ತುವು ತಮಿಳುನಾಡಿನಲ್ಲಿ ಉತ್ಪಾದನೆಯಾಗಿದ್ದು ದೇಶದಲ್ಲಿ ಸಂಚರಿಸಿ ದೆಹಲಿಗೆ ತಲುಪಿದರೆ ಅಲ್ಲಿಯ ಖರೀದಿದಾರ ಅಥವಾ ಗ್ರಾಹಕ ಅದರ ತೆರಿಗೆಯನ್ನು ಪಾವತಿಸುತ್ತಾನೆ. ಕೇಂದ್ರ ಮತ್ತು ರಾಜ್ಯಗಳೆರಡೂ ಈ ತೆರಿಗೆಯಲ್ಲಿ ತಮ್ಮ ಪಾಲನ್ನು ಪಡೆಯುತ್ತವೆ.

4. ಭಾರತದ ಸರಕು ಮತ್ತು ಸೇವಾ ತೆರಿಗೆಯು ಇನ್ವಾಯ್ಸ್‌ಗಳನ್ನು ಹೊಂದಿಸುವ ಕಾರ್ಯವಿಧಾನವನ್ನು ಒಳಗೊಂಡಿದೆ. ಪೂರೈಕೆದಾರನು ತೆರಿಗೆ ಯೋಗ್ಯ ಪೂರೈಕೆಗಳನ್ನು ಪಡೆದುಕೊಂಡಿದ್ದರೆ ಮಾತ್ರವೇ ಖರೀದಿಸಿದ ಸರಕು ಮತ್ತು ಸೇವೆಗಳ ಹೂಡುವಳಿ ತೆರಿಗೆ ಜಮೆಯು ದೊರಕಬಲ್ಲುದು. ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯು ಒಂದು ಸ್ವ–ನಿಯಂತ್ರಿತ ವ್ಯವಸ್ಥೆಯಾಗಿದ್ದು ತೆರಿಗೆ ವಂಚನೆ ಮತ್ತು ತೆರಿಗೆಗಳ್ಳತನವನ್ನು ತಡೆಯುತ್ತದೆ ಮಾತ್ರವಲ್ಲದೇ ಹೆಚ್ಚು ಹೆಚ್ಚು ವ್ಯವಹಾರಗಳನ್ನು ಔಪಚಾರಿಕ ಅರ್ಥವ್ಯವಸ್ಥೆಯೊಳಗೆ ತರುತ್ತದೆ.

5. ಲಾಭಕೋರತನ ವಿರೋಧಿ ಉಪಕ್ರಮವು ಇತ್ತೀಚೆಗೆ ಜಾರಿಯಾದ ಸರಕು ಮತ್ತು ಸೇವಾ ತೆರಿಗೆ ಕಾನೂನಿನ ಮುಖ್ಯ ಲಕ್ಷಣಗಳಲ್ಲೊಂದಾಗಿದೆ. ಈ ಉಪಕ್ರಮಗಳು ಸಂಸ್ಥೆಗಳನ್ನು ಮಿತಿಮೀರಿದ ಲಾಭ ಗಳಿಸುವುದರಿಂದ ತಡೆಯುತ್ತವೆ. GST ಯು ಹೂಡುವಳಿತೆರಿಗೆ ಜಮೆಯೊಂದಿಗೆ ಬೆಲೆಗಳನ್ನು ಇಳಿಸುವುದನ್ನು

ನಿರೀಕ್ಷಿಸುವುದರಿಂದ ರಾಷ್ಟ್ರೀಯ ಲಾಭಕೋರತನ ವಿರೋಧಿ ಪ್ರಾಧಿಕಾರ (National Anti profiteering Authority- NAA)ವನ್ನು ಸ್ಥಾಪಿಸಲಾಗಿದ್ದು ಸಂಸ್ಥೆಗಳಿಗೆ ವೆಚ್ಚದಿಂದ ದೊರಕುವ ಪ್ರಯೋಜನಗಳು ಗ್ರಾಹಕರಿಗೆ ವರ್ಗಾವಣೆಯಾಗುವುದನ್ನು ಖಾತರಿಗೊಳಿಸಲಾಗುತ್ತದೆ.

**GSTಯು ಹೇಗೆ ನಾಗರಿಕರಿಗೆ ಪ್ರಯೋಜನ ಮತ್ತು ಅಧಿಕಾರ ನೀಡುತ್ತದೆ**

- ಸಮಗ್ರ ತೆರಿಗೆಯಲ್ಲಿ ಕಡಿತ
- ಗುಪ್ತ ತೆರಿಗೆಗಳಿಲ್ಲ
- ಸರಕು ಮತ್ತು ಸೇವೆಗಳಿಗೆ ಸುಸಂಘಟಿತವಾದ ರಾಷ್ಟ್ರೀಯ ಮಾರುಕಟ್ಟೆಯ ಅಭಿವೃದ್ಧಿ
- ಗ್ರಾಹಕರಿಗೆ ವಿಸ್ತೃತ ಆಯ್ಕೆಗಳು
- ಆರ್ಥಿಕ ಚಟುವಟಿಕೆಗಳ ಹೆಚ್ಚಳ
- ಹೆಚ್ಚಿನ ಉದ್ಯೋಗಾವಕಾಶಗಳು


**GST ಯ ಪ್ರಮುಖ ಲಕ್ಷಣಗಳು:**

1. GSTಯು ಜಮ್ಮು ಕಾಶ್ಮೀರಗಳನ್ನೊಳಗೊಂಡು ಇಡೀ ದೇಶದ ವ್ಯಾಪ್ತಿಯನ್ನು ಹೊಂದಿದೆ.
2. ಪ್ರಸ್ತುತದಲ್ಲಿರುವ ಸರಕುಗಳ ಉತ್ಪಾದನೆ ಅಥವಾ ಮಾರಾಟ ಮೇಲಿನ ಅಥವಾ ಸೇವಾ ಪೂರೈಕೆ ಮೇಲಿನ ತೆರಿಗೆಯ ಪರಿಕಲ್ಪನೆಗೆ ಬದಲಾಗಿ GSTಯು ಸರಕು ಮತ್ತು ಸೇವೆಗಳ ಪೂರೈಕೆಯ ಮೇಲೆ ಅನ್ವಯವಾಗುತ್ತದೆ.
3. ಇದು ಈಗಿನ ಮೂಲ ಆಧಾರಿತ ತೆರಿಗೆ ತತ್ವದ ಬದಲಾಗಿ ಗುರಿ ಆಧಾರಿತ ಬಳಕೆಯ ತೆರಿಗೆಯ ತತ್ವವನ್ನು ಆಧರಿಸಿದೆ.
4. ಸರಕು ಮತ್ತು ಸೇವೆಗಳ ಆಯಾತವನ್ನು ಅಂತರ್‌ರಾಜ್ಯ ಪೂರೈಕೆಗಳಂತೆ ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ಅನ್ವಯವಾಗುವ ಕಸ್ಟಮ್ಸ್ ಸುಂಕಗಳೊಂದಿಗೆ IGST ಯನ್ನು ಅನ್ವಯಿಸಲಾಗುತ್ತದೆ.
5. GST ಪರಿಷತ್ತಿನ ಮಾರ್ಗದರ್ಶನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಒಪ್ಪಿಕೊಂಡಿರುವ ದರಗಳಲ್ಲಿ CGST, SGST ಮತ್ತು IGST ಗಳನ್ನು ವಿಧಿಸಲಾಗುತ್ತದೆ.
6. ಎಲ್ಲಾ ಸರಕು ಅಥವಾ ಸೇವೆಗಳಿಗೆ 4 ತೆರಿಗೆಯ ಹಂತಗಳನ್ನು ಗುರುತಿಸಲಾಗಿದೆ.–5%, 12%, 18% ಮತ್ತು 28%
7. ರಫ್ತು ಮತ್ತು ವಿಶೇಷ ಆರ್ಥಿಕ ವಲಯ(SEZ)ಗಳ ಪೂರೈಕೆಗಳಿಗೆ ಶೂನ್ಯ ದರ

8. ತೆರಿಗೆದಾರರಿಗೆ ತೆರಿಗೆ ಪಾವತಿಸಲು ವಿವಿಧ ವಿಧಾನಗಳಿವೆ. ಇಂಟರ್ನೆಟ್ ಬ್ಯಾಂಕಿಂಗ್, ಡೆಬಿಟ್/ಕ್ರೆಡಿಟ್ ಕಾರ್ಡ್, ರಾಷ್ಟ್ರೀಯ ವಿದ್ಯುನ್ಮಾನ ಹಣ ವರ್ಗಾವಣೆ (NEFT)/ ನೈಜ ಸಮಯ ಒಟ್ಟು ಇತ್ಯರ್ಥ (RTGS)

GST ಪರಿಷತ್ತು– ಸಂರಚನೆ

- ಅಧ್ಯಕ್ಷರು: ಹಣಕಾಸು ಸಚಿವರು (ಕೇಂದ್ರ)
- ಉಪಾಧ್ಯಕ್ಷರು: ರಾಜ್ಯಗಳ ಸಚಿವರಲ್ಲಿ ಆಯ್ಕೆ ಮಾಡಲಾಗುತ್ತದೆ.
- ಸದಸ್ಯರು: ರಾಜ್ಯಸಚಿವರು (ಹಣಕಾಸು) (MoS) ಮತ್ತು ಪ್ರತಿ ರಾಜ್ಯದ ಹಣಕಾಸು/ ತೆರಿಗೆ ಸಚಿವರು
- ಕೋರಂ: ಒಟ್ಟು ಸದಸ್ಯರ 50%
- ರಾಜ್ಯಗಳು2/3 ಮತ್ತು ಕೇಂದ್ರ 1/3 ಪ್ರಾಶಸ್ತ್ಯ ಪಡೆಯುತ್ತವೆ.
- ನಿರ್ಧಾರಗಳನ್ನು 75% ಬಹುಮತದಲ್ಲಿ ತೆಗೆದುಕೊಳ್ಳಲಾಗುತ್ತದೆ.
- ಪರಿಷತ್ತು GST ಸಂಬಂಧಿತ ನಿಯಮಗಳು ಮತ್ತು ದರ ಇತ್ಯಾದಿ ಪ್ರತಿಯೊಂದರ ಶಿಫಾರಸ್ಸುಗಳನ್ನು ಮಾಡುವುದು.



4) ಪುಟ ಸಂಖ್ಯೆ 287 ರಲ್ಲಿರುವ "ಕಾರ್ಯ ಯೋಜನೆಗಳು" ಈ ಶೀರ್ಷಿಕೆಯಲ್ಲಿ ಈ ಕೆಳಗಿನ ಕಾರ್ಯ ಯೋಜನೆಯನ್ನು 5 ನೆಯದಾಗಿ ಸೇರ್ಪಡೆ ಮಾಡಲಾಗಿದೆ:

ಜುಲೈ 1, 2017ರಂದು GST ಯನ್ನು ಭಾರತ ಸರ್ಕಾರವು ಜಾರಿಗೆ ತಂದಿತು. ವಿವಿಧ ಸರಕು–ಸೇವೆಗಳು GST ದರಗಳಡಿಯಲ್ಲಿ, ಅಂದರೆ, 0%, 5%, 12%, 18% ಮತ್ತು 28% ಎಂದು ವಿಭಾಗಿಸಲ್ಪಟ್ಟಿವೆ. ವೃತ್ತ ಪತ್ರಿಕೆಗಳು, ಮಾಧ್ಯಮವರದಿ, ಅಂತರ್ಜಾಲ ಮತ್ತು ಬಿಸಿನೆಸ್ ಮ್ಯಾಗಜೀನ್‌ಗಳ ಮೂಲಕ GST ಬಗ್ಗೆ ಮಾಹಿತಿ ಸಂಗ್ರಹಿಸಿ ಮುಂದೆ ನೀಡಿರುವ ಸರಕು–ಸೇವೆಗಳನ್ನು 5 GST ದರಗಳಲ್ಲಿ ವರ್ಗೀಕರಿಸಿ:

**Activity: Classification of GST Rates of different Goods and Services**

| Items | No tax (0%) | 5% | 12% | 18% | 28% |
|---|---|---|---|---|---|
| Jute | | | | | |
| Newspaper<br>Coffee/Tea | | | | | |
| Shampoo | | | | | |
| Washing Machine | | | | | |
| Motorcycles | | | | | |
| Vegetables | | | | | |
| Milk | | | | | |
| Curd | | | | | |
| Salt | | | | | |
| Spices | | | | | |
| Kerosene | | | | | |
| Kites | | | | | |
| Apparel<br>above Rs 1000 | | | | | |
| Cheese | | | | | |
| Ghee | | | | | |
| Fruit Juices | | | | | |
| *Bhujia* | | | | | |
| Ayurvedic Medicines | | | | | |
| Sewing Machine | | | | | |

NCERT
republished

| | | | | | |
|---|---|---|---|---|---|
| Sewing Machine | | | | | |
| Cell Phones | | | | | |
| Ketchup & Sauces | | | | | |
| Exercise Books | | | | | |
| Notebooks | | | | | |
| Spectacles | | | | | |
| Non-AC | | | | | |
| Fertilisers | | | | | |
| Biscuits | | | | | |
| Pasta | | | | | |
| Pastries and cakes | | | | | |
| Jams | | | | | |
| Mineral Water | | | | | |
| Steel | | | | | |
| Products | | | | | |
| Camera | | | | | |
| Speakers and monitors | | | | | |
| Aluminum Foil | | | | | |
| CCTV | | | | | |
| Telecom Services | | | | | |
| Branded Garments | | | | | |

ಸಿ) ಬಿಟ್ಟಿರುವುದು: ಯಾವುದೂ ಇಲ್ಲ

## ಅಧ್ಯಾಯ 11

## ಅಂತರರಾಷ್ಟ್ರೀಯ ವ್ಯವಹಾರ

### ಎ) ಬದಲಾಗಿರುವುದು:

**1. ಅಧ್ಯಾಯ 11 ಮತ್ತು 12 ಗಳನ್ನು ವಿಲೀನಗೊಳಿಸಿ ಅಧ್ಯಾಯ 11 ಅನ್ನು ರಚಿಸಲಾಗಿದೆ.**

**2. ಕಲಿಕಾ ಉದ್ದೇಶಗಳು ಈ ಕೆಳಗಿನಂತೆ ಬದಲಾಗಿದೆ:**

| |
|---|
| 1 ಅಂತರರಾಷ್ಟ್ರೀಯ ವ್ಯವಹಾರದ ಅರ್ಥ |

2 ಆಂತರಿಕ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳ ವ್ಯತ್ಯಾಸ

3. ಅಂತರರಾಷ್ಟ್ರೀಯ ವ್ಯವಹಾರದ ವ್ಯಾಪ್ತಿ

4. ಅಂತರರಾಷ್ಟ್ರೀಯ ವ್ಯವಹಾರದ ಪ್ರಯೋಜನಗಳು

5. ಆಮದು ಮತ್ತು ರಫ್ತು ವ್ಯವಹಾರಗಳಲ್ಲಿ ಬೇಕಾದ ದಾಖಲೆ ಪತ್ರಗಳು

6. ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಲಭ್ಯವಾಗುವ ಉತ್ತೇಜಕಗಳು ಮತ್ತು ಯೋಜನೆಗಳು

7.ಅಂತರರಾಷ್ಟ್ರೀಯ ವ್ಯವಹಾರದ ಪ್ರವರ್ತನೆಯಲ್ಲಿ ವಿವಿಧ ಸಂಘಟನೆಗಳ ಪಾತ್ರ

8. ಜಾಗತಿಕ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಪ್ರಮುಖ ಅಂತರರಾಷ್ಟ್ರೀಯ ಸಂಸ್ಥೆಗಳು ಮತ್ತು ಒಪ್ಪಂದಗಳ ಪಟ್ಟಿ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಅಭಿವೃದ್ಧಿಯಲ್ಲಿ ಅವುಗಳ ಪಾತ್ರ

**3. ಸಾರಾಂಶದಲ್ಲಿ ಈ ಕೆಳಗಿನಂತೆ ಬದಲಾವಣೆಯಾಗಿದೆ:**

**ಸಾರಾಂಶ**

**ಅಂತರರಾಷ್ಟ್ರೀಯ ವ್ಯವಹಾರ**: ರಾಷ್ಟ್ರದ ಗಡಿಯಾಚೆಗಿನ ವ್ಯವಹಾರ ಚಟುವಟಿಕೆಗಳನ್ನು ಅಂತರರಾಷ್ಟ್ರೀಯ ವ್ಯವಹಾರ ಎನ್ನುವರು. ಅನೇಕ ಜನರು ಅಂತರರಾಷ್ಟ್ರೀಯ ವ್ಯವಹಾರ ಮತ್ತು ಅಂತರರಾಷ್ಟ್ರೀಯ ವ್ಯಾಪಾರ ಎರಡೂ ಪದಗಳನ್ನುಒಂದೇ ರೀತಿಯಾಗಿ ಉಪಯೋಗಿಸುತ್ತಾರಾದರೂ, ಅಂತರರಾಷ್ಟ್ರೀಯ ವ್ಯವಹಾರವೆಂಬ ಶಬ್ದವು ವಿಶಾಲಾರ್ಥವನ್ನು ಹೊಂದಿದೆ. ಅಂತರರಾಷ್ಟ್ರೀಯ ವ್ಯವಹಾರವು ಸರಕು ಸೇವೆಗಳಲ್ಲಿನ ವ್ಯಾಪಾರ ಮಾತ್ರವಲ್ಲದೇ ಇತರೆ ಕಾರ್ಯಚಟುವಟಿಕೆಗಳಾದ ಸರಕು–ಸೇವೆಗಳ ಉತ್ಪಾದನೆ ಮತ್ತು ಮಾರಾಟ ಪ್ರಕ್ರಿಯೆಗಳನ್ನು ಒಳಗೊಂಡಿದೆ.

**ಅಂತರರಾಷ್ಟ್ರೀಯ Vs ದೇಶೀಯ ವ್ಯವಹಾರ:** ಅಂತರರಾಷ್ಟ್ರೀಯ ವ್ಯವಹಾರ ಸ್ಥಾಪನೆ ಮತ್ತು ನಿರ್ವಹಣೆಗಳು ದೇಶೀಯ ವ್ಯವಹಾರವನ್ನು ಕೈಗೊಳ್ಳುವುದಕ್ಕಿಂತ ಕ್ಲಿಷ್ಟಕರವಾಗಿದೆ. ಅಂತರರಾಷ್ಟ್ರೀಯ ವ್ಯವಹಾರದಲ್ಲಿ ತೊಡಗುವ ವ್ಯಕ್ತಿಗಳ ರಾಷ್ಟ್ರೀಯತೆಗಳಲ್ಲಿ ವ್ಯತ್ಯಾಸಗಳು, ಉತ್ಪಾದನಾಂಗಗಳತುಲನಾತ್ಮಕವಾದ ಕಡಿಮೆ ಚಲನೆ, ವಿದೇಶಿ ಮಾರುಕಟ್ಟೆಗಳಲ್ಲಿ ಗ್ರಾಹಕರ ವೈವಿಧ್ಯತೆ, ವ್ಯವಹಾರ ಪದ್ಧತಿಗಳು ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಭಿನ್ನತೆಗಳು, ವ್ಯವಹಾರದ ನಿಯಮಗಳು ಮತ್ತು ನೀತಿಗಳಲ್ಲಿ ವಿಭಿನ್ನತೆ, ವಿವಿಧ ಕರೆನ್ಸಿಗಳ ಚಲಾವಣೆಗಳೇಮೊದಲಾದ ಪ್ರಮುಖ ಅಂಶಗಳು ಅಂತರರಾಷ್ಟ್ರೀಯ ವ್ಯವಹಾರವನ್ನು ದೇಶೀಯ ವ್ಯವಹಾರದಿಂದಭಿನ್ನವಾಗಿಸಿವೆ. ಹೆಚ್ಚಾಗಿ, ಈ ಅಂಶಗಳೇ ಅಂತರರಾಷ್ಟ್ರೀಯ ವ್ಯವಹಾರವನ್ನು ಹೆಚ್ಚು ಸಂಕೀರ್ಣ ಮತ್ತು ಕಷ್ಟಕರ ಚಟುವಟಿಕೆಯನ್ನಾಗಿಸಿವೆ.

**ರಫ್ತು ಕ್ರಮಾನುಗತಿ/ಕಾರ್ಯವಿಧಾನ:** ಸಾಗರೋತ್ತರ ಖರೀದಿದಾರನಿಂದ ವಿಚಾರಣೆ ಪತ್ರವನ್ನು ಪಡೆಯುವ ಕಾರ್ಯವಿಧಾನದಿಂದ ರಫ್ತು ವ್ಯಾಪಾರವು ಪ್ರಾರಂಭವಾಗುತ್ತದೆ. ರಫ್ತುದಾರನು ಬೆಲೆಪಟ್ಟಿ/ಬಿಕರಿಪಟ್ಟಿಯನ್ನು ತಯಾರಿಸುತ್ತಾನೆ. ಈ

ಸರಕು ಪಟ್ಟಿಯನ್ನು ಮಾದರಿ ಬಿಕರಿಪಟ್ಟಿ ಎಂದು ಕರೆಯುತ್ತಾರೆ. ಈ ಪಟ್ಟಿಯು ರಫ್ತು ಮಾಡುವ ಸರಕುಗಳ ವಿವರಗಳನ್ನು ಮತ್ತು ನಿಬಂಧನೆ ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ, ಆಮದುದಾರನು ಬೆಲೆಪಟ್ಟಿ/ಬಿಕರಿಪಟ್ಟಿಯನ್ನು ಒಪ್ಪಿದರೆ, ಸರಕುಗಳನ್ನು ಕಳುಹಿಸುವಂತೆ ಆದೇಶವನ್ನು ನೀಡುತ್ತಾನೆ ಮತ್ತು ತನ್ನ ಬ್ಯಾಂಕರನಿಂದ ಉದ್ದರಿ ಪತ್ರವನ್ನು ಪಡೆದು ರಫ್ತುದಾರನಿಗೆ ಕಳುಹಿಸುತ್ತಾನೆ. ನಂತರ ರಫ್ತುದಾರನು ರಫ್ತು ವ್ಯಾಪಾರಕ್ಕೆ ಸಂಬಂಧಿಸಿದ ನಿಯಮಗಳ ಪಾಲನೆ ಮಾಡುತ್ತಾನೆ. ಪ್ರಮುಖ ಕ್ರಮಗಳೆಂದರೆ ವಿದೇಶ ವ್ಯಾಪಾರದ ಪ್ರಧಾನ ನಿರ್ದೇಶನಾಲಯದಿಂದ ಅನುಮತಿ ಪತ್ರ ಪಡೆಯುವುದು ಮತ್ತು ರಫ್ತು ಪ್ರವರ್ಧನಾ ಮಂಡಳಿಯಿಂದ ನೋಂದಣಿ ಮತ್ತು ಸದಸ್ಯತ್ವ ಪ್ರಮಾಣ ಪತ್ರವನ್ನು ಪಡೆಯಬೇಕು. ರಫ್ತುದಾರನಿಗೆ ಹಣಕಾಸಿನ ಅವಶ್ಯಕತೆ ಇದ್ದರೆ ಬ್ಯಾಂಕಿನಿಂದ ಸರಕು ಹೇರುವ/ರವಾನಾ ಪೂರ್ವ ಹಣಕಾಸು ಸಹಾಯ ಪಡೆಯಬಹುದು. ನಂತರ ಸರಕುಗಳನ್ನು ಉತ್ಪಾದಿಸಿ ಅಥವಾ ಖರೀದಿಸಿ ಅವುಗಳನ್ನು ರಫ್ತು ತಪಾಸಣಾ ಮಂಡಳಿಯಿಂದ ತಪಾಸಣೆ ಮಾಡಿಸುತ್ತಾನೆ. ಆಮದುದಾರನಿಗೆ ಮೂಲೋತ್ಪತ್ತಿ ಪ್ರಮಾಣ ಪತ್ರ ಅವಶ್ಯಕವಿದ್ದರೆ ರಫ್ತುದಾರನು ಅದನ್ನು ವಿದೇಶಿ ರಾಯಭಾರ ಕಾರ್ಯಾಲಯದಿಂದ ಪಡೆಯಬೇಕು. ಇದರಿಂದಾಗಿ ಆಮದುದಾರನು ತೆರಿಗೆ ದರಗಳು ಮತ್ತು ಆಮದು ಪಾಲು (Import Quota) ವಿನಾಯಿತಿ ಪಡೆಯಲು ಮತ್ತು ಸರಕುಗಳನ್ನು ಬಿಡಿಸಿಕೊಳ್ಳಲು ಅನುಕೂಲವಾಗುತ್ತದೆ. ನಂತರ ರಫ್ತುದಾರನು ಹಡಗಿನಲ್ಲಿ ಸ್ಥಳಾವಕಾಶವನ್ನು ಪಡೆಯಲು ವ್ಯವಸ್ಥೆ ಮಾಡಬೇಕು ಮತ್ತು ಕಡಲ ಗಂಡಾಂತರಗಳಿಂದ ಸರಕುಗಳನ್ನು ರಕ್ಷಿಸಲು ವಿಮೆಮಾಡಿಸಬೇಕು. ಉತ್ಪಾದನಾ ಸುಂಕ (excise duty) ತೀರುವಳಿನಂತರ, ವ್ಯಾಪಾರೀ ಸುಂಕ (custom duty) ತೀರುವಳಿಗಾಗಿ ಸರಕುಗಳನ್ನು ಸಂಬಂಧಪಟ್ಟ ಬಂದರಿಗೆ ಕಳುಹಿಸಬೇಕು. ಸುಂಕ ತೀರುವಳಿಯು ದೀರ್ಘಕಾಲಿಕವಾದುದರಿಂದ, ರಫ್ತುದಾರನು ತೀರುವೆ ಮತ್ತು ರವಾನೆ ಪ್ರತಿನಿಧಿಗಳನ್ನು (clearing & forwarding agents) ನೇಮಕ ಮಾಡಿ ಅವರ ಮೂಲಕ ವ್ಯಾಪಾರೀ ಸುಂಕ ದಾಖಲೆ ಪತ್ರಗಳನ್ನು ತಯಾರಿಸಿ ಸುಂಕ ಪಾವತಿಸಿ ಸರಕುಗಳನ್ನು ಬಿಡಿಸಿಕೊಳ್ಳುತ್ತಾನೆ.

ಸೀಮಾ ಸುಂಕ ಪಾವತಿ ನಂತರ, ಬಂದರು ಅಧಿಕಾರಿಗಳ ಬಳಿಗೆ ಹೋಗಿ ಹಡಗು ಕಟ್ಟೆ ಬಾಡಿಗೆಯನ್ನು ಪಾವತಿಸಬೇಕು ಮತ್ತು ಹಡಗು ಕಂಪನಿಗೆ ಹೋಗಿ ಸರಕು ಸಾಗಾಣಿಕೆ ಶುಲ್ಕ (Freight charges)ವನ್ನು ಪಾವತಿಸಬೇಕು. ಸರಕುಗಳನ್ನು ಹಡಗಿಗೆ ಹೇರಬೇಕು. ಆಗ ಹಡಗು ಕಫ್ತಾನನು ಸಹಾಯಕ ಕಫ್ತಾನನ ರಶೀದಿಯನ್ನು ನೀಡುತ್ತಾನೆ. ಈ ರಶೀದಿಯನ್ನು ಸರಕು ಸಾಗಾಣಿಕೆ ಶುಲ್ಕ ಪಾವತಿಸಲು ಹಡಗು ಕಂಪನಿಗೆ ಕೊಡಬೇಕು. ಸರಕು ಸಾಗಾಣಿಕೆ ಶುಲ್ಕವನ್ನು ಪಡೆದ ನಂತರ ಹಡಗು ಕಂಪನಿಯು ಭರಾವಣೆ ಪತ್ರವನ್ನು ನೀಡುತ್ತದೆ. ಈ ಪತ್ರವು, ಹಡಗು ಕಂಪನಿಯು ಸರಕುಗಳನ್ನು ಆಮದು ದೇಶಕ್ಕೆ ಕೊಂಡೊಯ್ಯಲು ಒಪ್ಪಿಕೊಂಡಿದೆ ಎಂಬುದನ್ನು ಸೂಚಿಸುವ ಪತ್ರವಾಗಿದೆ. ಸರಕುಗಳನ್ನು ರವಾನಿಸಿದ ನಂತರ, ರಫ್ತುದಾರನು ಬಿಕರಿಪಟ್ಟಿಯನ್ನು (Invoice) ತಯಾರಿಸಿ ಅಗತ್ಯ ದಾಖಲೆ ಪತ್ರಗಳೊಂದಿಗೆ ತನ್ನ ಬ್ಯಾಂಕಿನ ಮೂಲಕ ಆಮದುದಾರನಿಗೆ ಕಳುಹಿಸುತ್ತಾನೆ. ಈ ಸನ್ನಿವೇಶದಲ್ಲಿ ಪ್ರಮುಖ ದಾಖಲೆ ಪತ್ರಗಳೆಂದರೆ, ದೃಢೀಕೃತ ಬಿಕರಿಪಟ್ಟಿ, ಭರಾವಣೆ ಪತ್ರ ಪೊಟ್ಟಣ/ಗಂಟುಗಳ ಪಟ್ಟಿ, ವಿಮಾಪಾಲಿಸಿ, ಮೂಲೋತ್ಪತ್ತಿ ಪ್ರಮಾಣ ಪತ್ರ, ಉದ್ದರಿ ಪತ್ರ ಮತ್ತು ಹುಂಡಿ ಪತ್ರಗಳಾಗಿರುತ್ತವೆ. ಆಮದುದಾರನು ಹುಂಡಿಯ ಮೇಲೆ ಒಪ್ಪಿಗೆ ಸೂಚಿಸಿದ ನಂತರ ದಾಖಲೆ ಪತ್ರಗಳನ್ನು ನೀಡಿ ಸರಕುಗಳನ್ನು ಬಿಡಿಸಿಕೊಳ್ಳಲು ಅನುವು ಮಾಡಿಕೊಡಬೇಕು. ಒಂದು ವೇಳೆ ಹಣವನ್ನು ಪಡೆದರೆ, ಬ್ಯಾಂಕರ್‌ನಿಂದ ಪಾವತಿ ಪ್ರಮಾಣ ಪತ್ರವನ್ನು ಪಡೆಯಬೇಕು.

ಪಾವತಿ ಪ್ರಮಾಣ ಪತ್ರವು ದಾಖಲೆ ಪತ್ರವಾಗಿದ್ದು, ಆಮದುದಾರನಿಂದ ಹಣವನ್ನು ಪಡೆಯಲಾಗಿದೆ ಎಂಬುದನ್ನು ದೃಢೀಕರಿಸುತ್ತದೆ.

**ಆಮದು ಕ್ರಮಾನುಗತಿ/ಕಾರ್ಯವಿಧಾನ**

ಆಮದು ವ್ಯಾಪಾರವು ಕೂಡ ಅನೇಕ ನಿಯಮಗಳಿಂದ ಕೂಡಿದೆ. ಮೊದಲಿಗೆ ರಫ್ತು ಸಂಸ್ಥೆಯನ್ನು ಶೋಧಿಸಿ, ಸರಕುಗಳ ಲಭ್ಯತೆ, ಬೆಲೆ ಮತ್ತು ನಿಬಂಧನೆ ಮತ್ತು ಷರತ್ತುಗಳ ಬಗ್ಗೆ ವಿಚಾರಣೆ ಮಾಡಲಾಗುತ್ತದೆ. ರಫ್ತು ಸಂಸ್ಥೆಯನ್ನು ಆಯ್ಕೆ ಮಾಡಿದ ನಂತರ ಸಾಂಪ್ರದಾಯಿಕ ಬೆಲೆಪಟ್ಟಿಯನ್ನು (ಮಾದರಿ ಬಿಕರಿಪಟ್ಟಿಯನ್ನು) ಕಳುಹಿಸಲು ಕೇಳಿಕೊಳ್ಳುತ್ತಾನೆ. ನಂತರ ಆಮದುದಾರನು, ಅವಶ್ಯವಿದ್ದರೆ ವಿದೇಶಿ ವ್ಯಾಪಾರ ಪ್ರಧಾನ ನಿರ್ದೇಶನಾಲಯದಿಂದ ಅಥವಾ ಪ್ರಾದೇಶಿಕ ಆಮದು ಮತ್ತು ರಫ್ತು ಅನುಮತಿ ಪ್ರಾಧಿಕಾರದಿಂದ ಆಮದು ಅನುಮತಿ ಪತ್ರವನ್ನು ಪಡೆಯುತ್ತಾನೆ. ಅಲ್ಲದೇ ಆಮದು ರಫ್ತು ಸಂಕೇತ ಸಂಖ್ಯೆಯನ್ನು ಪಡೆಯಲು ಅರ್ಜಿಸಲ್ಲಿಸುತ್ತಾನೆ. ಈ ಸಂಖ್ಯೆಯನ್ನು ಪ್ರಮುಖ ಆಮದು ದಾಖಲೆ ಪತ್ರಗಳಲ್ಲಿ ನಮೂದಿಸಬೇಕಾಗುತ್ತದೆ. ಪಾವತಿಗಳನ್ನು ವಿದೇಶಿ ಕರೆನ್ಸಿಯಲ್ಲಿ ಮಾಡಬೇಕಿರುವುದರಿಂದ ಅಧಿಕೃತ ಬ್ಯಾಂಕಿನಲ್ಲಿ ಅರ್ಜಿಯನ್ನು ಸಲ್ಲಿಸಿ ಅಗತ್ಯ ವಿದೇಶಿ ವಿನಿಮಯವನ್ನು ಮಂಜೂರು ಮಾಡಿಸಿಕೊಳ್ಳಬೇಕು. ಆಮದು ಅನುಮತಿ ಪತ್ರ ಪಡೆದ ನಂತರ ನಿರ್ದಿಷ್ಟ ಸರಕುಗಳನ್ನು ಕಳುಹಿಸುವಂತೆ ರಫ್ತುದಾರನಿಗೆ ಆದೇಶ/ಇಂಡೆಂಟ್ ಕಳುಹಿಸುತಾನೆ. ಒಪ್ಪಂದ ಷರತ್ತುಗಳ ಪ್ರಕಾರ ಉದ್ದರಿ ಪತ್ರದ ಅವಶ್ಯವಿದ್ದರೆ, ಆಮದುದಾರನು ತನ್ನ ಬ್ಯಾಂಕಿನಿಂದ ಪಡೆದು ರಫ್ತುದಾರನಿಗೆ ಕಳುಹಿಸಬೇಕು. ರಫ್ತುದಾರನು ಸರಕುಗಳನ್ನು ಹಡಗಿಗೆ ತುಂಬಿದ ನಂತರ ಆಮದುದಾರನಿಗೆ ಸಲಹಾ ಪತ್ರವನ್ನು ಕಳುಹಿಸುತ್ತಾನೆ. ಇದರ ಜೊತೆಗೆ ರಫ್ತುದಾರನು ಅಗತ್ಯ ದಾಖಲೆಪತ್ರಗಳಾದ ಹುಂಡಿಪತ್ರ, ವಾಣಿಜ್ಯ ಬಿಕರಿ ಪಟ್ಟಿ, ಮೂಲೋತ್ಪತ್ತಿ ಪ್ರಮಾಣ ಪತ್ರ, ಕಡಲ ವಿಮಾ ಪಾಲಿಸಿ ಪತ್ರ ಇತ್ಯಾದಿಗಳನ್ನು ಆಮದುದಾರನಿಗೆ ಕಳುಹಿಸುತ್ತಾನೆ. ಈ ದಾಖಲೆ ಪತ್ರಗಳಿಲ್ಲದಿದ್ದರೆ, ಆಮದುದಾರನು ತನ್ನ ಬಂದರಿಗೆ ಬಂದಿರುವ ಸರಕುಗಳನ್ನು ಬಿಡಿಸಿಕೊಳ್ಳಲಾಗುವುದಿಲ್ಲ. ರಫ್ತುದಾರನು ಈ ಎಲ್ಲಾ ದಾಖಲೆ ಪತ್ರಗಳನ್ನು ತನ್ನ ಬ್ಯಾಂಕಿನ ಮೂಲಕ ಆಮದುದಾರನಿಗೆ ಕಳುಹಿಸುತ್ತಾನೆ ಆಮದುದಾರನು, ಹುಂಡಿಯ ಮೇಲೆ ಒಪ್ಪಿಗೆ ಸೂಚಿಸಿದನಂತರ ದಾಖಲೆ ಪತ್ರಗಳನ್ನು ಅವನಿಗೆ ನೀಡಲಾಗುತ್ತದೆ.

ಸರಕುಗಳು ಆಮದು ದೇಶವನ್ನು ತಲುಪಿದ ನಂತರ ಸರಕು ಹೊತ್ತು ತಂದಹಡಗು/ವಿಮಾನದ ಸಂಸ್ಥೆಯವರು ಆಮದು ಸ್ಪಷ್ಟನೆ ಪತ್ರವನ್ನು ತಯಾರಿಸಿ ಹಡಗುಕಟ್ಟೆ/ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಸರಕಗಳು ಆಮದು ಬಂದರಿಗೆ ತಲುಪಿರುವುದರ ಬಗ್ಗೆ ತಿಳಿಸುತ್ತಾರೆ. ಆಮದುದಾರ ಅಥವಾ ಅವನ ಪ್ರತಿನಿಧಿ (C & F agent) ಸರಕುಸಾಗಾಣಿಕಾ ಶುಲ್ಕವನ್ನು (ರಫ್ತುದಾರ ಪಾವತಿಸಿಲ್ಲದಿದ್ದರೆ) ಹಡಗು ಕಂಪನಿಗೆ ಪಾವತಿಸಿ ವಿಲೇವಾರಿಆಜ್ಞೆಯನ್ನು (Delivery order) ಪಡೆಯುತ್ತಾನೆ. ಈ ಪತ್ರದ ಸಹಾಯದಿಂದ ಸರಕುಗಳನ್ನು ಆಮದುದಾರನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಹಾಯವಾಗುತ್ತದೆ. ಇದೇ ಸಂದರ್ಭದಲ್ಲಿ ಹಡಗುಕಟ್ಟೆ ಬಾಡಿಗೆಯನ್ನು ಪಾವತಿಸಿ ಬಂದರುನ್ಯಾಸ ರಶೀದಿಯನ್ನು ಪಡೆಯಬೇಕು ನಂತರ ಆಮದುದಾರನು ಪ್ರವೇಶ ಪತ್ರ (Bill of Entry) ನಮೂನೆಗಳನ್ನು ಭರ್ತಿಮಾಡಿ ಆಮದು ವ್ಯಾಪಾರೀ ಸುಂಕವನ್ನು (Customs Import duty) ಪಾವತಿಸಬೇಕು. ನಂತರ ಪ್ರವೇಶ ಪತ್ರವನ್ನು ಸರಕುಗಳ ಭೌತಿಕ ತಪಾಸಣೆಗಾಗಿ ಹಡಗು ಕಟ್ಟೆಯ ಸೂಪರಿಂಟೆಂಡೆಂಟ್‌ಗೆ ನೀಡಬೇಕು. ಇವನು ಪ್ರವೇಶ ಪತ್ರದ ಮೇಲೆ ತನ್ನ ವರದಿಯನ್ನು ಬರೆಯುತ್ತಾನೆ. ಆಮದುದಾರ/ಅವನ ಪ್ರತಿನಿಧಿಯು ಪ್ರವೇಶ ಪತ್ರವನ್ನು ಸರಕುಗಳನ್ನು ಬಿಡುಗಡೆ ಮಾಡಲು ಬಂದರು ಅಧಿಕಾರಿಗಳಿಗೆ ನೀಡುತ್ತಾನೆ.

**4) ಅಭ್ಯಾಸದ ಪ್ರಶ್ನೆಗಳಲ್ಲಿ ಈ ಕೆಳಗಿನಂತೆ ಬದಲಾವಣೆಯಾಗಿದೆ:**

**ಅ) ಬಹು ಆಯ್ಕೆ ಪ್ರಶ್ನೆಗಳು:**

1. ಈ ಕೆಳಕಂಡ ಯಾವ ಪ್ರವೇಶ ಕ್ರಮದಲ್ಲಿ ದೇಶೀಯ ಉತ್ಪಾದಕರು, ವಿದೇಶೀ ಉತ್ಪಾದಕರಿಗೆ ನಿರ್ದಿಷ್ಟ ಶುಲ್ಕಕ್ಕೆ ಭೌದ್ಧಿಕ ಆಸ್ತಿಗಳಾದ ಸ್ವಾಮ್ಯಸನ್ನದು ಮತ್ತು ವ್ಯಾಪಾರ ಚಿಹ್ನೆಗಳನ್ನು ಉಪಯೋಗಿಸಲು ಹಕ್ಕು ನೀಡುತ್ತಾರೆ?

ಎ. ಪರವಾನಗಿ ನೀಡಿಕೆ ಬಿ. ಗುತ್ತಿಗೆ/ಒಪ್ಪಂದ ಉತ್ಪಾದನೆ

ಸಿ. ಜಂಟಿ ಉದ್ದಿಮೆ ಡಿ. ಯಾವುದೂ ಅಲ್ಲ

2. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಂಸ್ಥೆಗಳು ಸೇರಿ, ಮಾತೃ ಸಂಸ್ಥೆಗಳಿಂದ ಕಾನೂನುಬದ್ಧವಾಗಿ ಪ್ರತ್ಯೇಕವಾಗಿರುವ ಮತ್ತುಭಿನ್ನವಾಗಿರುವಂತೆ ರಚಿಸುವ ಹೊಸ ವ್ಯವಹಾರ ಸಂಸ್ಥೆಯನ್ನು---ಕರೆಯುತ್ತಾರೆ.

ಎ. ಒಪ್ಪಂದ ಉತ್ಪಾದನೆ ಬಿ. ವಿಶೇಷಾಧಿಕಾರ ನೀಡಿಕೆ

ಸಿ. ಜಂಟಿ ಉದ್ದಿಮೆಗಳು ಡಿ. ಪರವಾನಗಿ ನೀಡಿಕೆ

3. ಈ ಕೆಳಕಂಡ ಅಂಶಗಳಲ್ಲಿ ಯಾವುದು ರಫ್ತು ಮಾಡುವಿಕೆಯ ಅನುಕೂಲವಲ್ಲ?

ಎ. ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗೆ ಪ್ರವೇಶಿಸುವ ಸುಲಭ ವಿಧಾನ

ಬಿ. ತುಲನಾತ್ಮಕವಾಗಿ ಕಡಿಮೆ ಅಪಾಯಗಳು

ಸಿ. ವಿದೇಶಿ ಮಾರುಕಟ್ಟೆಗಳಲ್ಲಿ ನಿಯಮಿತ ಉಪಸ್ಥಿತಿ

ಡಿ. ಕಡಿಮೆ ಹೂಡಿಕೆ ಅಗತ್ಯಗಳು

4. ಈ ಕೆಳಕಂಡ ಪ್ರವೇಶ ಪದ್ಧತಿಗಳಲ್ಲಿ ಯಾವುದು ಸಾಗರೋತ್ತರ ಕಾರ್ಯ ಚಟುವಟಿಕೆಗಳ ಮೇಲೆ ಹೆಚ್ಚಿನ ಮಟ್ಟದ ನಿಯಂತ್ರಣವನ್ನು ಹೊಂದಲು ಪರವಾನಗಿ ನೀಡುತ್ತದೆ?

ಎ. ಪರವಾನಗಿ ಮತ್ತು ವಿಶೇಷಾಧಿಕಾರ ನೀಡಿಕೆಗಳು ಬಿ. ಪೂರ್ಣ ಮಾಲೀಕತ್ವದ ಸಹಾಯಕ ಕಂಪನಿಗಳು

ಸಿ. ಒಪ್ಪಂದ/ಗುತ್ತಿಗೆ ಉತ್ಪಾದನೆ ಡಿ. ಜಂಟಿ ಉದ್ದಿಮೆ

5. ಈ ಕೆಳಕಂಡ ಸರಕುಗಳಲ್ಲಿ ಯಾವುದು ಭಾರತದ ಪ್ರಮುಖ ನಿರ್ಯಾತದ ವಸ್ತುವಾಗಿಲ್ಲ?

ಎ. ಬಟ್ಟೆಗಳು ಮತ್ತು ಸಿದ್ಧ ಉಡುಪುಗಳು. ಬಿ. ರತ್ನ ಮತ್ತು ಚಿನ್ನಾಭರಣಗಳು

ಸಿ. ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು ಡಿ. ಬಾಸುಮತಿ ಅಕ್ಕಿ

6. ಈ ಕೆಳಕಂಡ ಸರಕುಗಳಲ್ಲಿ ಯಾವುದು ಭಾರತದ ಪ್ರಮುಖ ಆಮದು ವಸ್ತುವಾಗಿಲ್ಲ?

ಎ. ಆಯುರ್ವೇದಿಕ್ ಔಷಧಗಳು ಬಿ. ತೈಲ ಮತ್ತು ಪೆಟ್ರೋಲಿಯಂ ಉತ್ಪನ್ನಗಳು

ಸಿ. ಮುತ್ತು-ರತ್ನಗಳು ಮತ್ತು ಅಮೂಲ್ಯ ಹರಳುಗಳು ಡಿ. ಯಂತ್ರೋಪಕರಣ

7. ರಫ್ತು ಅನುಮತಿ ಪತ್ರ ಪಡೆಯಲು ಈ ಕೆಳಕಂಡ ದಾಖಲೆಪತ್ರಗಳಲ್ಲಿ ಯಾವುದು ಅಗತ್ಯವಿರುವುದಿಲ್ಲ?

ಎ) IEC ಸಂಖ್ಯೆ ಬಿ) ಉದ್ದರಿ ಪತ್ರ

ಸಿ) ನೋಂದಣಿ ಮತ್ತು ಸದಸ್ಯತ್ವ ಪ್ರಮಾಣಪತ್ರ ಡಿ) ಬ್ಯಾಂಕ್ ಖಾತೆಯ ಸಂಖ್ಯೆ.

8. ಆಮದು ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಅಗತ್ಯವಿರುವುದಿಲ್ಲ?
ಎ). ಭರಾವಣೆ ಪತ್ರ ಬಿ) ಹಡಗು ರವಾನೆ ಪತ್ರ

ಸಿ) ಮೂಲೋತ್ಪತ್ತಿ ಪ್ರಮಾಣ ಪತ್ರ ಡಿ) ಸಲಹಾ ಪತ್ರ

9. ಈ ಕೆಳಗಿನವುಗಳಲ್ಲಿ ಯಾವುದು ಸುಂಕ ಹಿಂಪಡೆವ ಯೋಜನೆಯ ಭಾಗವಾಗಿರುವುದಿಲ್ಲ?
ಎ) ಅಬಕಾರಿ ವಾಪಸಾತಿ ಬಿ)ವ್ಯಾಪಾರಿ ಸುಂಕ ವಾಪಸಾತಿ

ಸಿ) ರಫ್ತು ಸುಂಕ ವಾಪಸಾತಿ ಡಿ) ರವಾನಾ ಬಂದರಿನ ಹಡಗುಕಟ್ಟೆ ಶುಲ್ಕಗಳ/ಆದಾಯ ವಾಪಸಾತಿ.

10. ಈ ಕೆಳಗಿನ ಯಾವುದು ರಫ್ತು ದಾಖಲೆಗಳ ಭಾಗವಾಗಿರುವುದಿಲ್ಲ?

ಎ) ವಾಣಿಜ್ಯ ಬಿಕರಿ ಪಟ್ಟಿ. ಬಿ) ಮೂಲೋತ್ಪತ್ತಿ ಪ್ರಮಾಣ ಪತ್ರ

ಸಿ) ಪ್ರವೇಶ ಪತ್ರ ಡಿ)ಸಹಾಯಕ ಕಫ್ತಾನನ ರಶೀದಿ.

11. ಸರಕುಗಳನ್ನು ಹಡಗಿಗೆ ಹೇರಿದಾಗ ಹಡಗು ಆದೇಶಾಧಿಕಾರಿಯು ನೀಡುವ ರಶೀದಿಯು------

ಎ) ಹಡಗಿಗೆ ಹೇರಿದ ರಶೀದಿ ಬಿ)ಸಹಾಯಕ ಕಫ್ತಾನನ ರಶೀದಿ

ಸಿ) ಸರಕು ರಶೀದಿ ಡಿ) ಚಾರ್ಟರ್ ರಶೀದಿ.

12. ಕೆಳಕಂಡ ದಾಖಲೆಗಳಲ್ಲಿ ಯಾವುದನ್ನು ರಫ್ತುದಾರನು ತಯಾರಿಸುವನು?ಮತ್ತು ಅದು ಸರಕು ವಿವರಗಳಾದ ಹಡಗು ಕಂಪನಿ ಹೆಸರು, ಗಂಟುಗಳ ಸಂಖ್ಯೆ, ಹಡಗು ರವಾನೆ ಪತ್ರ, ಸರಕು ತಲುಪಬೇಕಾದ ಬಂದರು, ಸರಕು ಹೊತ್ತೊಯ್ಯುವ ಹಡಗಿನ ಹೆಸರು ಇತ್ಯಾದಿಗಳನ್ನು ಒಳಗೊಂಡಿರುತ್ತದೆ?

ಎ) ಹಡಗು ರವಾನೆ ಪತ್ರ ಬಿ) ಗಂಟುಗಳ ಪಟ್ಟಿ

ಸಿ)ಸಹಾಯಕ ಕಫ್ತಾನನ ರಶೀದಿ ಡಿ) ಹುಂಡಿ ಪತ್ರ

13. ರಫ್ತುದಾರನು ಬರೆದ ಹುಂಡಿಯನ್ನು ಮಾನ್ಯಮಾಡುವುದಾಗಿ ಬ್ಯಾಂಕು ನೀಡುವ ಭರವಸೆಯನ್ನು ಒಳಗೊಂಡಿರುವ ದಾಖಲೆಯು------

ಎ) ಅಡವು ಪತ್ರ ಬಿ) ಉದ್ದರಿ ಪತ್ರ

ಸಿ) ಭರಾವಣೆ ಪತ್ರ ಡಿ) ಹುಂಡಿ ಪತ್ರ

14. WTO ಒಪ್ಪಂದಗಳಲ್ಲಿ ಒಂದಾಗಿರುವ TRIP ------ ವ್ಯವಹರಿಸುವುದು.

ಎ) ಕೃಷಿಯಲ್ಲಿ ವ್ಯಾಪಾರ ಬಿ) ಸೇವೆಗಳಲ್ಲಿ ವ್ಯಾಪಾರ

ಸಿ) ಹೂಡಿಕೆ ಕ್ರಮಗಳಿಗೆ ಸಂಬಂಧಿಸಿದ ಕ್ರಮಗಳು ಡಿ) ಯಾವುದೂ ಅಲ್ಲ

## ಆ) ಸಂಕ್ಷಿಪ್ತ ಉತ್ತರ ಬಯಸುವ ಪ್ರಶ್ನೆಗಳು:

1. ಅಂತರರಾಷ್ಟ್ರೀಯ ವ್ಯಾಪಾರ ಮತ್ತು ಅಂತರರಾಷ್ಟ್ರೀಯ ವ್ಯವಹಾರದ ವ್ಯತ್ಯಾಸ ತಿಳಿಸಿ.

2. ಅಂತರರಾಷ್ಟ್ರೀಯ ವ್ಯವಹಾರದ ಯಾವುದಾದರೂ ಮೂರು ಅನುಕೂಲಗಳನ್ನು ಚರ್ಚಿಸಿ.

3. ವಿವಿಧ ರಾಷ್ಟ್ರಗಳ ನಡುವಿನ ವ್ಯಾಪಾರಕ್ಕೆ ಪ್ರಮುಖ ಕಾರಣವೇನು?

4. ಜಾಗತಿಕವಾಗಿ ವ್ಯವಹಾರವನ್ನು ವಿಸ್ತರಿಸಲು ಪರವಾನಗಿನೀಡಿಕೆಯು ಸುಲಭ ವಿಧಾನ ಎಂದು ಏಕೆ ಹೇಳಲಾಗಿದೆ?

5. ಒಪ್ಪಂದ/ಗುತ್ತಿಗೆ ಉತ್ಪಾದನೆ ಮತ್ತು ಪೂರ್ಣಮಾಲೀಕತ್ವದ ಸಹಾಯಕ ಕಂಪನಿಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

6. ರಫ್ತು ಅನುಮತಿ ಪತ್ರ ಪಡೆಯಲು ಅನುಸರಿಸುವ ನಿಯಮಗಳನ್ನು ಚರ್ಚಿಸಿ.

7. ರಫ್ತು ಉತ್ತೇಜನಾ ಮಂಡಳಿಯಲ್ಲಿ ಹೆಸರು ನೋಂದಣಿ ಏಕೆ ಅಗತ್ಯವಿದೆ?

8. ರಫ್ತು ಸಂಸ್ಥೆಗೆ ರವಾನಾ ಪೂರ್ವ ತಪಾಸಣೆ ಏಕೆ ಅವಶ್ಯಕವಾಗಿದೆ?

9. ಭರಾವಣೆ ಪತ್ರ ಎಂದರೇನು? ಅದು ಪ್ರವೇಶ ಪತ್ರಕ್ಕಿಂತ ಹೇಗೆ ಭಿನ್ನವಾಗಿದೆ?

10. ಸಹಾಯಕ ಕಪ್ತಾನನ ರಶೀದಿ ಅರ್ಥದ ವಿವರಣೆ ಕೊಡಿ.

11. ಉದ್ದರಿ ಪತ್ರ ಎಂದರೇನು? ರಫ್ತುದಾರನಿಗೆ ಈ ಪತ್ರ ಏಕೆ ಅಗತ್ಯವಾಗಿದೆ?

12. ರಫ್ತು ವ್ಯಾಪಾರದಲ್ಲಿ ಹಣ ಪಾವತಿಸುವ ಪ್ರಕ್ರಿಯೆಯನ್ನು ಚರ್ಚಿಸಿ.

## ಇ) ದೀರ್ಘ ಉತ್ತರ ಬಯಸುವ ಪ್ರಶ್ನೆಗಳು:

1. "ಅಂತರರಾಷ್ಟ್ರೀಯ ವ್ಯವಹಾರವು ಅಂತರರಾಷ್ಟ್ರೀಯ ವ್ಯಾಪಾರಕ್ಕಿಂತ ದೊಡ್ಡದು"– ವಿಮರ್ಶಿಸಿ.

2. ಅಂತರರಾಷ್ಟ್ರೀಯ ವ್ಯವಹಾರಕ್ಕೆ ಪ್ರವೇಶಿಸುವುದರಿಂದ ಸಂಸ್ಥೆಗಳು ಪಡೆಯುವ ಪ್ರಯೋಜನಗಳೇನು?

3. ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ಪ್ರವೇಶಿಸುವುದಕ್ಕೆ ರಫ್ತು ವ್ಯವಹಾರವು ಪೂರ್ಣ ಮಾಲೀಕತ್ವದ ಸಹಾಯಕ ಕಂಪನಿಯ ಸ್ಥಾಪನೆಗಿಂತ ಯಾವ ರೀತಿಯಲ್ಲಿ ಉತ್ತಮವಾಗಿದೆ?

4. ರೇಖಾ ಉಡುಪು ಕಂಪನಿಯು, ಪುರುಷರ 2000 ಷರಾಯಿಗಳಿಗೆ ಆಸ್ಟ್ರೇಲಿಯಾದ ಸ್ವಿಪ್ಟ್ ಇಂಪೋರ್ಟ್ಸ್ ನಿಯಮಿತ ಕಂಪನಿಯಿಂದ ಆದೇಶ ಪಡೆಯಿತು. ರೇಖಾ ಉಡುಪು ಕಂಪನಿಯು ರಫ್ತು ಆದೇಶವನನ್ನು ಜಾರಿಗೊಳಿಸಲು ಅಗತ್ಯ ಕಾರ್ಯವಿಧಾನಗಳನ್ನು ಚರ್ಚಿಸಿ.

5. ನಿಮ್ಮ ಸಂಸ್ಥೆಯು ಕೆನಡಾದಿಂದ ಟೆಕ್ಸ್‌ಟೈಲ್ ಯಂತ್ರೋಪಕರಣವನ್ನು ತರಿಸಿಕೊಳ್ಳಬೇಕಿದೆ. ಆಮದು ಮಾಡಿಕೊಳ್ಳಲು ಅನುಸರಿಸಬೇಕಾದ ಕಾರ್ಯ ವಿಧಾನಗಳನ್ನು ವಿವರಿಸಿ.

6. ದೇಶದ ಅಂತರರಾಷ್ಟ್ರೀಯ ವ್ಯಾಪಾರವನ್ನು ಉತ್ತೇಜಿಸುವ ಸಲುವಾಗಿ ಸರ್ಕಾರ ಸ್ಥಾಪಿಸಿರುವ ವಿವಿಧ ಸಂಘಟನೆಗಳನ್ನು ಗುರುತಿಸಿ.

7. ಅಂತರರಾಷ್ಟ್ರೀಯ ಹಣಕಾಸು ನಿಧಿ ಎಂದರೇನು? ಅದರ ಉದ್ದೇಶಗಳು ಮತ್ತು ಕಾರ್ಯಗಳನ್ನು ಚರ್ಚಿಸಿ.

8. ವಿಶ್ವ ವ್ಯಾಪಾರ ಸಂಘಟನೆಯ ಲಕ್ಷಣಗಳು, ರಚನೆ, ಉದ್ದೇಶಗಳು ಮತ್ತು ಕಾರ್ಯಗಳ ಮೇಲೆ ವಿವರವಾದ ಟಿಪ್ಪಣಿ ಬರೆಯಿರಿ.

**ಬಿ) ಸೇರ್ಪಡೆಯಾಗಿರುವುದು:**

**1. ಪುಟ ಸಂಖ್ಯೆ 311 ರಲ್ಲಿ ಈ ಕೆಳಗಿನ ಬಾಕ್ಸ್ ಟೆಕ್ಸ್ಟ್ ಅನ್ನು ಸೇರ್ಪಡೆ ಮಾಡಲಾಗಿದೆ:**

**ವಿದೇಶಿ ವ್ಯಾಪಾರ ನೀತಿ 2015–2020** (FTP)

ವಿದೇಶಿ ವ್ಯಾಪಾರ ನೀತಿ 2015–20, ಸರಕು–ಸೇವೆಗಳಲ್ಲಿ ವಿದೇಶಿ ವ್ಯಾಪಾರ, ಸಂಪರ್ಕ ನಿಯಮಗಳು ಮತ್ತು ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ಸ್ಕಿಲ್ ಇಂಡಿಯಾಗಳಂತಹ ಇತರ ಯೋಜನೆಗಳೊಂದಿಗೆ ರಫ್ತು ಪ್ರವರ್ತನಾ ಮಂಡಳಿಯನ್ನು ರಚಿಸಲು ಆಮದು ಉತ್ತೇಜಕಗಳು, ಭಾರತದ ರಫ್ತುಪಟ್ಟಿಯ ವೈವಿಧ್ಯತೆಯನ್ನು ಪ್ರವರ್ತಿಸಲು ವಿವಿಧ ವಲಯಗಳಿಗೆ ಸಹಾಯ ನೀಡುವ ಮೂಲಕ ಜಾಗತಿಕ ಸ್ಪರ್ಧಾತ್ಮಕತೆಯನ್ನು ಗಳಿಸುವುದು, ವ್ಯಾಪಾರ ಅಸಮತೋಲನವನ್ನು ತಗ್ಗಿಸಲು ಭಾರತದ ಜಾಗತಿಕ ವ್ಯಾಪಾರಕ್ಕಾಗಿ ಸುಂದರ ಚಿತ್ರಣವನ್ನು ರಚಿಸುವುದಕ್ಕೆ ಭದ್ರವಾದ ಮತ್ತು ಸುಸ್ಥಿರ ನೀತಿಯನ್ನು ಒದಗಿಸುತ್ತದೆ.

FTP ಮುಖ್ಯವಾಗಿ ಎರಡು ಯೋಜನೆಗಳನ್ನು ಪರಿಚಯಿಸಿದೆ:

1. ಭಾರತದ ಸರಕು ರಫ್ತುಗಳ ಯೋಜನೆ(MEIS)ಯು ಕೃಷಿ ಉತ್ಪನ್ನಗಳಾದ ಹಣ್ಣು, ಹೂವು, ತರಕಾರಿ, ಚಹಾ, ಕಾಫಿ, ಸಾಂಬಾರ ಪದಾರ್ಥ, ಕರಕುಶಲವಸ್ತು, ಕೈಮಗ್ಗ, ಸೆಣಬಿನ ಉತ್ಪನ್ನಗಳು, ಜವಳಿ ಮತ್ತು ಸಿದ್ಧ ಉಡುಪುಗಳು, ಔಷಧಗಳು, ಸರ್ಜಿಕಲ್ಸ್, ಮೂಲಿಕೆಗಳು, ಮೋಟಾರು ಭಾಗಗಳು, ದೂರಸಂಪರ್ಕ, ಸಾರಿಗೆ, ರೈಲ್ವೆ, ಚರ್ಮ, ಮರ, ಕಾಗದ ಇತ್ಯಾದಿಗಳನ್ನು ಒಳಗೊಳ್ಳುತ್ತದೆ.
2. ಭಾರತದ ಸೇವಾ ರಫ್ತು ಯೋಜನೆ(SEIS)ಯು ಕಾನೂನು, ಲೆಕ್ಕಬರಹ, ವಾಸ್ತುಶಿಲ್ಪ, ಇಂಜಿನಿಯರಿಂಗ್, ಶೈಕ್ಷಣಿಕ ಮತ್ತು ಆಸ್ಪತ್ರೆ ಸೇವೆಗಳು ಶೇಕಡಾ 5 ರಷ್ಟು ಮತ್ತು ಹೋಟೆಲ್ ಹಾಗೂ ರೆಸ್ಟೋರಾಗಳು, ಪ್ರವಾಸಿ ಪ್ರತಿನಿಧಿ ಸಂಸ್ಥೆಗಳು ಮತ್ತು ಪ್ರವಾಸ ಆಯೋಜನಕರು, ಇತರ ವ್ಯವಹಾರಿ ಸೇವೆಗಳು ಶೇಕಡಾ 3 ರಷ್ಟು ಒಳಗೊಳ್ಳುತ್ತದೆ.

**ಮೂಲ: ವಾರ್ಷಿಕ ವರದಿ, 2016–17, ವಾಣಿಜ್ಯ ಮಂತ್ರಾಲಯ**

**2. ಪುಸ್ತಕದ ಕೊನೆಯ ಪುಟಗಳಲ್ಲಿ "ನಿಯೋಜಿತ ಕಾರ್ಯಗಳು/ಕಾರ್ಯಯೋಜನೆ: ವಿಶ್ವ ವ್ಯಾಪಾರದಲ್ಲಿ ಭಾರತ" –ಇದನ್ನು ಸೇರ್ಪಡೆ ಮಾಡಿದೆ:**

## I. ನಿಯೋಜಿತ ಕಾರ್ಯಗಳು/ಕಾರ್ಯಯೋಜನೆ: ವಿಶ್ವ ವ್ಯಾಪಾರದಲ್ಲಿ ಭಾರತ

ಕೊಟ್ಟಿರುವ ದತ್ತಾಂಶಗಳನ್ನು ಸೂಕ್ಷ್ಮವಾಗಿ ಓದಿ. ಇದು ವಿಶ್ವ ವ್ಯಾಪಾರದಲ್ಲಿ ಭಾರತದ ಸಾಧನೆಗೆ ಸಂಬಂಧಿಸಿದೆ. ಭಾರತ ಸರ್ಕಾರದ ಇತ್ತೀಚಿನ ಯೋಜನೆಗಳಾದ ಮೇಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ, ಸ್ಕಿಲ್ ಇಂಡಿಯಾ ಹಾಗೂ ವಿದೇಶ ವ್ಯಾಪಾರ ನೀತಿ 2015–20 ಇವು ಭಾರತದ ಆರ್ಥಿಕತೆಯ ಮೇಲೆ ಆಯಾತ, ನಿರ್ಯಾತ ಮತ್ತು ವ್ಯಾಪಾರ ಬಾಕಿಗಳ ರೂಪದಲ್ಲಿ ಪರಿಣಾಮ ಬೀರಿದೆ.

1. ಕೋಷ್ಟಕ–1 ವಿಶ್ವದ ಅತಿ ದೊಡ್ಡ ಆರ್ಥಿಕತೆಗಳಲ್ಲಿ ಭಾರತದ ಸ್ಥಾನವನ್ನು ತೋರಿಸುತ್ತದೆ. ಅಂತರ ರಾಷ್ಟ್ರೀಯ ವ್ಯಾಪಾರದ ವಿಶ್ವ ಚಿತ್ರಣದಲ್ಲಿ 2005 ರಿಂದ 2017ರವರೆಗೆ ಭಾರತದ ಸ್ಥಾನ ಕುರಿತು ಪ್ರಗತಿ ವರದಿಯನ್ನು ತಯಾರಿಸಿ.

**Table 1**

| S.No. | Country | % share in global trade |
|---|---|---|
| 1. | United States | 24.3 |
| 2. | China | 14.8 |
| 3. | Japan | 5.9 |
| 4. | Germany | 4.5 |
| 5. | United Kingdom | 3.9 |
| 6. | France | 3.3 |
| 7. | India | 2.8 |
| 8. | Italy | 2.5 |
| 9. | Brazil | 2.4 |
| 10. | Canada | 2.1 |
| ***Source:*** *World Bank, 2017* | | |

2. ಕೋಷ್ಟಕ–2 ಜಾಗತಿಕ ವ್ಯಾಪಾರದಲ್ಲಿ ಭಾರತದ ಪ್ರಮುಖ ವ್ಯಾಪಾರ ಪಾಲುದಾರರ ಕುರಿತು ದತ್ತಾಂಶಗಳನ್ನು ನೀಡುತ್ತದೆ. ರಾಷ್ಟ್ರಗಳ ನಡುವೆ ಶಾಂತಿ ಮತ್ತು ಸೌಹಾರ್ದತೆಗಳನ್ನು ಪ್ರವರ್ತಿಸುವಲ್ಲಿ ವ್ಯವಹಾರ ಮತ್ತು ವ್ಯಾಪಾರ ಚಟುವಟಿಕೆಗಳು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ಚರ್ಚಿಸಿ.

3. ಕೋಷ್ಟಕ–3ರಲ್ಲಿ ನೀಡಿರುವ 2006–07 ರಿಂದ 2016–17ರವರೆಗೆ ಭಾರತದ ರಫ್ತು ಮತ್ತು ಆಮದುಗಳನ್ನು ಚಿತ್ರದ (ರೇಖಾ ಚಿತ್ರ ಅಥವಾ ಸ್ತಂಭ ರೇಖಾ ಚಿತ್ರ) ಮೂಲಕ ತೋರಿಸಿ.

**Table 2**

| India's trading partners with total trade (2014-15) | | | | | (figures in US $) |
|---|---|---|---|---|---|
| S.No. | Country | Exports | Imports | Total Trade | Trade Balance |
| 1. | China | 9.01 | 61.71 | 70.72 | (52.70) |
| 2. | United States | 40.34 | 62.12 | 62.12 | (18.55) |
| 3. | UAE | 30.29 | 49.74 | 49.74 | (10.84) |
| 4. | Saudi Arabia | 6.39 | 20.32 | 26.72 | (13.93) |
| 5. | Germany | .98 | 12.09 | 20.33 | (5.25) |
| 6. | South Korea | 3.52 | 13.05 | 18.13 | (8.93) |
| 7. | Malaysia | 3.71 | 9.08 | 16.93 | (5.30) |
| 8. | Singapore | 7.72 | 7.31 | 16.93 | (2.68) |
| 9. | Nigeria | 2.22 | 9.95 | 16.36 | (11.00) |
| 10. | Belgium | 5.03 | 8.26 | 16.33 | (5.29) |
| 11. | Qatar | .90 | 9.02 | 15.66 | (13.55) |
| 12. | Japan | 4.66 | 9.85 | 15.52 | (4.75) |
| 13. | United Kingdom | 8.83 | 5.19 | 14.34 | (4.30) |
| | | | | | *Selected countries only.* |

Table 3

| Year | Merchandise | | |
|---|---|---|---|
| | Export | Import | Trade Balance |
| 2006-2007 | 571779 | 840506 | (268727) |
| 2007-2008 | 655864 | 1012312 | (356448) |
| 2008-2009 | 840755 | 1374438 | (533680) |
| 2009-2010 | 845534 | 1363736 | (518202) |
| 2010-2011 | 1136954 | 1683487 | (546503) |
| 2011-2012 | 1465959 | 2345463 | (879504) |
| 2012-2013 | 1634318 | 2669162 | (1034844) |
| 2013-2014 | 1905011 | 2715434 | (810423) |
| 2014-2015 | 1896348 | 2737087 | (840738) |
| 2015-2016(P) | 1716378 | 2490298 | (773920) |
| 2016-2017 (P) till October | 1039797 | 1396352 | (356554) |
| *Annual report, 2016-17, Ministry of Commerce* | | | |

**4. ರಫ್ತು ಮತ್ತು ಆಮದುಗಳಲ್ಲಿನ ಬೆಳವಣಿಗೆಯ ದರ**

Table 4

| Year | | |
|---|---|---|
| | Export Growth % | Import Growth % |
| 2006-2007 | 25.28 | 27.27 |
| 2007-2008 | 14.71 | 20.44 |
| 2008-2009 | 28.19 | 35.77 |
| 2009-2010 | 0.57 | (0.78) |
| 2010-2011 | 34.47 | 23.45 |
| 2011-2012 | 28.94 | 39.32 |
| 2012-2013 | 11.48 | 13.8 |
| 2013-2014 | 16.58 | 1.73 |
| 2014-2015 | (0.45) | 0.8 |
| 2015-2016(P) | (6.49) | (9.02) |
| 2016-2017 (P) till October | 4.17 | (6.99) |
| Annual report, 2016-17, Ministry of Commerce | | |

5. ಕೋಷ್ಟಕ –5 ವಿಶ್ವ ಮಟ್ಟದಲ್ಲಿ ಭಾರತ ವ್ಯಾಪಾರ ಮಾಡುವ ಆಯ್ದ ಪ್ರಮುಖ ವಸ್ತುಗಳನ್ನು ಸೂಚಿಸುತ್ತದೆ. ಕೊಟ್ಟಿರುವ ದತ್ತಾಂಶದಲ್ಲಿ ನಿಮ್ಮ ಆಯ್ಕೆಯ ಯಾವುದಾದರೂ 5 ವಸ್ತುಗಳ ಪೈ ನಕ್ಷೆಯನ್ನು ತಯಾರಿಸಿ. ಇದಲ್ಲದೇ ನೀವು ವಾಣಿಜ್ಯ ಮಂತ್ರಾಲಯ ನೀಡಿರುವ 2016–17ರ ವಾರ್ಷಿಕ ವರದಿಯನ್ನು ಗಮನಿಸಿ, ಕೋಷ್ಟಕದ ಹೊರತಾದ ಯಾವುದೇ ವಸ್ತುಗಳನ್ನು ಆಯ್ಕೆ ಮಾಡಬಹುದು.

Table 5

| S. No. | Commodity | Year | Export (US $) | % Share (US $) | Import | % Share |
|---|---|---|---|---|---|---|
| 1. | Plantation | 2014-2015<br>2015-2016<br>2016-2017 (P) (April-October, 2017) | 1503<br>1563<br>895 | 1034<br>895<br>524 | .58 | 0.25 |
| 2. | Agriculture and Allied Products | 2014-2015<br>2015-2016<br>2016-2017 (P) (April-October, 2017) | 30147<br>24522<br>13420 | 19004<br>20673<br>12189 | 8.64 | 5.84 |
| 3. | Ores and Minerals | 2014-2015<br>2015-2016<br>2016-2017 (P) (April-October, 2017) | 2410<br>2015<br>1412 | 26918<br>20684<br>12941 | .91 | 5.08 |
| 4. | Leather and Leather Manufactures | 2014-2015<br>2015-2016<br>2016-2017 (P) (April-October, 2017) | 6105<br>5554<br>3158 | 2.03 | 1003<br>1001<br>606 | 0.28 |
| 5. | Gems and Jewellery | 2014-2015<br>2015-2016<br>2016-2017 (P) (April-October, 2017) | 41266<br>30263<br>26458 | 17.02 | 62351<br>56500<br>33845 | 12.89 |
| 6. | Chemicals and Related Products | 2014-2015<br>2015-2016<br>2016-2017 (P) (April-October, 2017) | 31731<br>32169<br>18740.56 | 12.96 | 31731<br>32169<br>18849 | 12.96 |
| 7. | Plastic and Rubber | 2014-2015<br>2015-2016<br>2016-2017 (P) (April-October, 2017) | 6615<br>6614<br>3683 | 2.32 | 6615<br>6614<br>3682 | 2.37 |
| 8. | Electronic Items | 2014-2015<br>2015-2016<br>2016-2017 (P) (April-October, 2017) | 6009<br>5600<br>3279 | 2.10 | 6009<br>5600<br>3275 | 2.10 |
| 9. | Textile and Allied Products | 2014-2015<br>2015-2016<br>2016-2017 (P) (April-October, 2017) | 37141<br>35653<br>19593 | 13.61 | 37141<br>35653<br>19594 | 13.61 |
| 10 | Petroleum Crude and Products | 2014-2015<br>2015-2016<br>2016-2017 (P)(April-October, 2017) | 56794<br>30583<br>19597 | 11.32 | 56794<br>30583<br>19597 | 11.32 |

II. ಅಧ್ಯಾಯ–1 ರ ಭಾಗ 1 ಅನ್ನು ನೆನಪಿಸಿಕೊಳ್ಳಿ. ಪ್ರಾಚೀನ ಕಾಲದಲ್ಲಿನ ರಫ್ತು ಮತ್ತು ಆಮದುಗಳ ಸ್ಥಿತಿಯನ್ನು ತರಗತಿಯಲ್ಲಿ ಚರ್ಚಿಸಿ ಮತ್ತು ಇಂದಿನ ಸನ್ನಿವೇಶದಲ್ಲಿ ಅಂತರರಾಷ್ಟ್ರೀಯ ವ್ಯಾಪಾರದ ಸ್ಥಾನವನ್ನು ಹೋಲಿಸಿ.

III. ಭಾರತದ ಆಂತರಿಕ ಮತ್ತು ವಿದೇಶ ವ್ಯಾಪಾರಗಳ ಪ್ರವರ್ತನೆಯಲ್ಲಿ ಭಾರತ ಸರ್ಕಾರದ 'ಮೇಕ್ ಇನ್ ಇಂಡಿಯಾ' ಯೋಜನೆಯ ಪ್ರಯೋಜನಗಳನ್ನು ಚರ್ಚಿಸಿ.

**ಸಿ) ಬಿಟ್ಟಿರುವುದು:**

1) ಪುಟ ಸಂಖ್ಯೆ 340 ರಲ್ಲಿರುವ ಬಾಕ್ಸ್ ಎ ಯಲ್ಲಿರುವ **"ವಿಶ್ವಬ್ಯಾಂಕು ಮತ್ತು ಅಂಗ ಸಂಸ್ಥೆಗಳು** (World Bank and its Affiliates)" – ಇದನ್ನು ಕೈಬಿಡಲಾಗಿದೆ.

2) ಪುಟ ಸಂಖ್ಯೆ 340 ಮತ್ತು 342 ರಲ್ಲಿರುವ **"ವಿಶ್ವ ಬ್ಯಾಂಕ್‌ನ ಕಾರ್ಯಗಳು** (Functions of World Bank), **ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ** (International development association-IDA), **ಅಂತರರಾಷ್ಟ್ರೀಯ ಹಣಕಾಸು ನಿಗಮ** (International Finance Corporation-IFC), **ಬಹುರಾಷ್ಟ್ರೀಯ ಹೂಡಿಕೆ ಭರವಸೆ ಸಂಸ್ಥೆ** (Multinational Investment Guarantee Agency -MIGA)" - ಈ ಭಾಗಗಳನ್ನು ಕೈಬಿಡಲಾಗಿದೆ.

3) ಪುಟ ಸಂಖ್ಯೆ 345 ಮತ್ತು 346 ರಲ್ಲಿರುವ **"ವಿಶ್ವ ವ್ಯಾಪಾರ ಸಂಘಟನೆಯ ಒಪ್ಪಂದಗಳು:** (WTO Agreements), GATT**ನ ಭಾಗವಾಗಿ ರೂಪಿಸಿದ ಒಪ್ಪಂದಗಳು** (Agreements Forming part of GATT), **ಜವಳಿ ಮತ್ತು ಉಡುಪುಗಳ ಮೇಲಿನ ಒಪ್ಪಂದ:** (Agreement of Textile and Clothing-ATC), **ಕೃಷಿ ಮೇಲಿನ ಒಪ್ಪಂದ** (Agreement on Agriculture -AOA), **ಸೇವೆಗಳ ಮೇಲಿನ ಸಾಮಾನ್ಯ ಒಪ್ಪಂದ** (General Agreement on Trade in Services-GATS), **ಭೌದ್ಧಿಕ ಆಸ್ತಿಗಳ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಪಾರ ಒಪ್ಪಂದಗಳು**(TRIPS) **ಹಾಗೂ ಬಾಕ್ಸ್ ಟೆಕ್ಸ್ಟ್** 'GATT **1994 : ಪ್ರಮುಖ ಒಪ್ಪಂದಗಳು**' – ಈ ಭಾಗಗಳನ್ನು ಕೈಬಿಡಲಾಗಿದೆ.